ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 3 ಭಾನುವಾರ 2023

ಸಂಪುಟ: 44 | ಸಂಚಿಕೆ: 139 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಸೂರ್ಯನತ್ತ ಆದಿತ್ಯ–ಎಲ್1 ನೌಕೆ ಯಶಸ್ವಿ ಉಡಾವಣೆ


ಶ್ರೀಹರಿಕೋಟ: ಸೂರ್ಯನ ಅಧ್ಯಯನಕ್ಕೆ ಆದಿತ್ಯ–ಎಲ್1 ನೌಕೆ ಯಶಸ್ವಿಯಾಗಿ ಉಡಾವಣೆಗೊಂಡಿದೆ. ಪಿಎಸ್‌ಎಲ್‌ವಿ ರಾಕೆಟ್‌ನಲ್ಲಿ ಆಂಧ್ರ ಪ್ರದೇಶದ ಶ್ರೀಹರಿಕೋಟಾದಿಂದ ಹೊತ್ತೊಯ್ದ ಆದಿತ್ಯ–ಎಲ್1 ಬಾಹ್ಯಾಕಾಶ ನೌಕೆಯು ಯಶಸ್ವಿಯಾಗಿ ಬೇರ್ಪಟ್ಟಿದ್ದು, ಸೂರ್ಯನ ಕಡೆಗೆ ತನ್ನ 125 ದಿನಗಳ ಪ್ರಯಾಣವನ್ನು ಮುಂದುವರೆಸಿದೆ ಎಂದು ಇಸ್ರೋ ತಿಳಿಸಿದೆ. ಬಾಹ್ಯಾಕಾಶ ನೌಕೆಯನ್ನು "ನಿಖರ ಕಕ್ಷೆ" ಯಲ್ಲಿ ಸೇರಿಸಲಾಗಿದೆ ಎಂದು ಇಸ್ರೋ ಮುಖ್ಯಸ್ಥ ಎಸ್.ಸೋಮನಾಥ್ ಹೇಳಿದ್ದಾರೆ. ಆದಿತ್ಯ ಎಲ್1 ಬಾಹ್ಯಾಕಾಶ ನೌಕೆಯನ್ನು 235 ರಿಂದ 19,500 ಕಿಮೀ ಉದ್ದದ ದೀರ್ಘವೃತ್ತದ ಕಕ್ಷೆಯಲ್ಲಿ ಸೇರಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

'ಆದಿತ್ಯ ಎಲ್1', 125 ದಿನಗಳ ದೀರ್ಘ ಪ್ರಯಾಣವನ್ನು ನಡೆಸಲಿದೆ ಎಂದು ತಿಳಿಸಿರುವ ಸೋಮನಾಥ್, ಶ್ರೀಹರಿಕೋಟಾದ ಮಿಷನ್ ಕಂಟ್ರೋಲ್ ಸೆಂಟರ್‌ನಿಂದ ಕೇಂದ್ರ ಸಚಿವ ಜಿತೇಂದ್ರ ಸಿಂಗ್, ಯೋಜನಾ ನಿರ್ದೇಶಕ ನಿಗರ್ ಶಾಜಿ ಮತ್ತು ಮಿಷನ್ ಡೈರೆಕ್ಟರ್ ಬಿಜು ಅವರೊಂದಿಗೆ ಸಂತಸ ಹಂಚಿಕೊಂಡಿದ್ದಾರೆ. ಪಿಎಸ್‌ಎಲ್‌ವಿಯಿಂದ ಬಾಹ್ಯಾಕಾಶ ನೌಕೆಯನ್ನು ದೋಷ ರಹಿತವಾಗಿ ಕಕ್ಷೆಗೆ ಸೇರಿಸಲಾಗಿದ್ದು, ಸೌರ ಫಲಕಗಳನ್ನು ನಿಯೋಜಿಸಲಾಗಿದೆ ಎಂದು ಶಾಜಿ ಹೇಳಿದರು.

ಸೂರ್ಯನ ಕ್ಷಣ: ಆದಿತ್ಯ ಎಲ್1 ಸೂರ್ಯನತ್ತ 125 ದಿನಗಳ ದೀರ್ಘ ಪ್ರಯಾಣವನ್ನು ಪ್ರಾರಂಭಿಸಿದೆ ಎಂದು ಹೇಳಿದರು. ಕೇಂದ್ರ ಸಚಿವ ಜಿತೇಂದ್ರ ಸಿಂಗ್, ಇಂದಿನ ಸಾಧನೆಯನ್ನು ಸೂರ್ಯನ ಕ್ಷಣ ಎಂದು ಬಣ್ಣಿಸಿದರು. ಬಾಹ್ಯಾಕಾಶ ಕ್ಷೇತ್ರಕ್ಕೆ ನೀಡಿದ ಬೆಂಬಲಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಧನ್ಯವಾದ ಅರ್ಪಿಸಿದರು. ಸೂರ್ಯ ಅನಿಲದ ದೈತ್ಯ ಗೋಳವಾಗಿದೆ. ಆದಿತ್ಯ–ಐ1 ಅದರ ಹೊರಗಿನ ವಾತಾವರಣವನ್ನು ಅಧ್ಯಯನ ಮಾಡುತ್ತದೆ. ಇದು ಸೂರ್ಯನಿಗೆ ಅತ್ಯಂತ ಸಮೀಪದಲ್ಲಿರುವ ಲಗ್ರಾಂಜಿಯನ್ ಪಾಯಿಂಟ್ ಐ1 ಸುತ್ತ ಹಾಲೋ ಕಕ್ಷೆಯನ್ನು ತಲುಪಲು ಸುಮಾರು 125 ದಿನಗಳ ಕಾಲ ಪ್ರಯಾಣಿಸುವ ನಿರೀಕ್ಷೆಯಿದೆ. ಸುಮಾರು 1,480.7 ಕೆಜಿ ತೂಕದ ಆದಿತ್ಯ–ಎಲ್1, ಸೂರ್ಯನನ್ನು ಅಧ್ಯಯನ ಮಾಡುವ ಮೊದಲ ಬಾಹ್ಯಾಕಾಶ ಆಧಾರಿತ ವೀಕ್ಷಣಾಲಯವಾಗಿದೆ.

ಉದ್ದೇಶ: ಆದಿತ್ಯ–ಐ1 ಮಿಷನ್‌ನ ಉದ್ದೇಶಗಳು ಕರೋನಲ್ ಹೀಟಿಂಗ್, ಸೌರ ಮಾರುತದ ವೇಗವರ್ಧನೆ, ಕರೋನಲ್ ಮಾಸ್ ಎಜೆಕ್ಷನ್‌ಗಳು (CME), ಸೌರ ವಾತಾವರಣದ ಡೈನಾಮಿಕ್ಸ್ ಮತ್ತು ತಾಪಮಾನ ಅನಿಸೊಟ್ರೋಪಿಯ ಅಧ್ಯಯನವನ್ನು ಒಳಗೊಂಡಿವೆ. ಇಂದು ಉಡಾವಣೆಯ ನಂತರ, ಆದಿತ್ಯ–ಎಲ್1 16 ದಿನಗಳ ಕಾಲ ಭೂಮಿಗೆ ಸುತ್ತುವರಿದ ಕಕ್ಷೆಯಲ್ಲಿ ಉಳಿಯುತ್ತದೆ, ಈ ಸಮಯದಲ್ಲಿ ಅದು ಸೂರ್ಯನ ಕಡೆಗೆ ತನ್ನ ಪ್ರಯಾಣಕ್ಕೆ ಅಗತ್ಯವಾದ ವೇಗವನ್ನು ಪಡೆಯಲು ಐದು ● 9ನೇ ಪುಟಕ್ಕೆ

ದಣಿವರಿಯದ ವೈಜ್ಞಾನಿಕ ಪ್ರಯತ್ನ...



ನವದೆಹಲಿ: ಆದಿತ್ಯ ಎಲ್–1 ಯಶಸ್ವಿ ಉಡಾವಣೆ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ ಇಸ್ರೋ ತಂಡವನ್ನು ಟ್ವೀಟ್ ಮೂಲಕ ಅಭಿನಂದಿಸಿದ್ದಾರೆ. 'ಚಂದ್ರಯಾನ–3 ಯಶಸ್ಸಿನ ನಂತರ ಭಾರತ ತನ್ನ ಬಾಹ್ಯಾಕಾಶ ಯಾನವನ್ನು ಮುಂದುವರಿಸಿದೆ. ಭಾರತದ ಮೊದಲ ಸೌರ ಮಿಷನ್, ಆದಿತ್ಯ ಎಲ್–1ನ ಯಶಸ್ವಿ ಉಡಾವಣೆಗೆ ಶ್ರಮಿಸಿದ ಇಸ್ರೋ ವಿಜ್ಞಾನಿಗಳು ಮತ್ತು ಇಂಜಿನಿಯರ್‌ಗಳಿಗೆ ಅಭಿನಂದನೆಗಳು. ಇಡೀ ಮಾನವಕುಲದ ಕಲ್ಯಾಣಕ್ಕಾಗಿ ಬ್ರಹ್ಮಾಂಡದ ಬಗ್ಗೆ ಉತ್ತಮ ತಿಳುವಳಿಕೆಯನ್ನು ಅಭಿವೃದ್ಧಿಪಡಿಸಲು ನಮ್ಮ ದಣಿವರಿಯದ ವೈಜ್ಞಾನಿಕ ಪ್ರಯತ್ನಗಳು ಮುಂದುವರಿಯುತ್ತವೆ' ಎಂದು ತಿಳಿಸಿದ್ದಾರೆ.

ಮೈಸೂರು, ಕೊಡಗು ಜನ ಯಾಕೆ ನನ್ನ ಸೋಲಿಸಬೇಕು? ನಾನು ಏನು ತಪ್ಪು ಮಾಡಿದ್ದೇನೆ ಹೇಳಿ ಸರ್...!

ಸಿಎಂ ಸಿದ್ದರಾಮಯ್ಯರಿಗೆ ಸಂಸದ ಪ್ರತಾಪ್‌ಸಿಂಹ ಪರಿ... ಪರಿ... ಪ್ರಶ್ನೆ



ಮೈಸೂರು, ಸೆ. 2–ಮುಂದಿನ ಲೋಕಸಭಾ ಚುನಾವಣೆಯಲ್ಲಿ ಮೈಸೂರು ಮತ್ತು ಕೊಡಗಿನ ಜನ ನನ್ನನ್ನು ಯಾಕೆ ಸೋಲಿಸಬೇಕು? ನಾನು ಏನು ತಪ್ಪು ಮಾಡಿದ್ದೇನೆ ಹೇಳಿ... ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ, ಸಂಸದ ಪ್ರತಾಪ್ ಸಿಂಹ ಅವರು ಪ್ರಶ್ನೆಗಳ ಸುರಿಮಳೆಗೈದಿದ್ದಾರೆ.

ಇತ್ತೀಚೆಗೆ ಮೈಸೂರಿನ ಉದಯಗಿರಿಯಲ್ಲಿ 'ಅಲ್ ಬದರ್' ಸರ್ಕಲ್ ಉದ್ಘಾಟನೆ ವೇಳೆ ಲೋಕಸಭಾ ಚುನಾವಣೆಯಲ್ಲಿ ಪ್ರತಾಪ್ ಸಿಂಹನನ್ನು ಸೋಲಿಸಿ ಎಂದು ಸಿದ್ದರಾಮಯ್ಯ ಕರೆ ನೀಡಿದ್ದಕ್ಕೆ ನಯವಾಗಿಯೇ ಪ್ರತಿಕ್ರಿಯಿಸಿರುವ ಪ್ರತಾಪ್ ಸಿಂಹ, ಕುವೆಂಪುನಗರ, ಸರಸ್ವತಿಪುರಂ, ಟಿಕೆ ಲೇಔಟ್, ಸಿದ್ಧಾರ್ಥನಗರ ಮುಂತಾದ ಕಡೆ ಪ್ರತಾಪ್ ಸಿಂಹನನ್ನು ಸೋಲಿಸಿ ಎಂದು ಹೇಳಲಾಗುವುದಿಲ್ಲ. ಹೀಗಾಗಿ ಸಿದ್ದರಾಮಯ್ಯನವರು ತಮ್ಮ ಬಾಂಧವರಿರುವ ಉದಯಗಿರಿಯಲ್ಲಿ ಕೈಮುಗಿದು ನನ್ನನ್ನು ಸೋಲಿಸಲು ಕೇಳಿದ್ದಾರೆ. ಇದರಿಂದ ಅವರ ಮನಸ್ಥಿತಿ ಏನು, ಉದ್ದೇಶ ಏನು ಎಂಬುದು ಗೊತ್ತಾಗುತ್ತದೆ. ಸಿದ್ದರಾಮಯ್ಯನವರು ಇರುವುದೇ ಅವರ ಬಾಂಧವರ ಉದ್ಧಾರಕ್ಕಾಗಿ ಎಂಬುದು ಎಲ್ಲರಿಗೂ ಗೊತ್ತಿದೆ ಎಂದರು. ನಾನು 28 ಎಂಪಿಗಳಲ್ಲಿ ಒಬ್ಬ. ಆದರೆ, ನೀವು (ಸಿದ್ದರಾಮಯ್ಯ) ರಾಜ್ಯದ ಮುಖ್ಯಮಂತ್ರಿಗಳು ಸಾರ್. ಜನ ನಿಮಗೆ 135 ಸೀಟು ಕೊಟ್ಟಿದ್ದಾರೆ. ರಾಜ್ಯದ ಮುಖ್ಯಮಂತ್ರಿಯಾಗಿ ಉದಯಗಿರಿಯಲ್ಲಿರುವ ಬಾಂಧವರ ಮುಂದೆ ಕೈಮುಗಿದು, ಪ್ರತಾಪ್ ಸಿಂಹನನ್ನು ಸೋಲಿಸಿ ಎಂದು ಕೇಳುವ ದಯನೀಯ ಸ್ಥಿತಿ ನಿಮಗೆ ಯಾಕೆ ಬಂದಿದೆ ಎಂದು ಪ್ರಶ್ನಿಸಿದರಲ್ಲದೇ, ನನ್ನನ್ನು ಸೋಲಿಸಲು 5–10 ಕಾರಣಗಳನ್ನಾದರು ಕೊಟ್ಟಿದ್ದರೆ ಜನರಿಗೆ ಮನವರಿಕೆ ಆಗುತ್ತಿತ್ತು. ಈಗಲೂ ಕೇಳುತ್ತಿದ್ದೇನೆ. ನಿಮ್ಮ ಪ್ರಕಾರ ನಾನು ಏನು ತಪ್ಪು ಮಾಡಿದ್ದೀನಿ ಹೇಳಿ ಸರ್? ಎಂದು ಪ್ರಶ್ನಿಸಿದರು.

ಬೆಂಗಳೂರು ಮತ್ತು ಮೈಸೂರು ನಡುವೆ ಒಂಭತ್ತೂವರೆ ಸಾವಿರ ಕೋಟಿ ರೂ.ಗಳಲ್ಲಿ 10 ಪಥದ ಹೈವೇ ನಿರ್ಮಾಣ ಮಾಡಿಸಿದ್ದು ತಪ್ಪೇ? ಗ್ರೇಟರ್ ಮೈಸೂರು ಮಾಡಲು ಹೊರಟಿರುವುದು ತಪ್ಪಾ? ಮೈಸೂರಿಗೆ ಪೆರಿಫೆರಲ್ ರಸ್ತೆ ನಿರ್ಮಾಣ ಮಾಡಲು ಹೊರಟಿರುವುದು ತಪ್ಪಾ? 4,130 ಕೋಟಿ ರೂ. ವೆಚ್ಚದಲ್ಲಿ ಮೈಸೂರು ಮತ್ತು ಕುಶಾಲನಗರ ನಡುವೆ ಚತುಷ್ಪಥ ಹೆದ್ದಾರಿ ನಿರ್ಮಿಸಲು ಹೊರಟಿರುವುದು ತಪ್ಪಾ? ಮೈಸೂರಿಗೆ ಪಾಸ್‌ಪೋರ್ಟ್ ಕೇಂದ್ರ ತಂದದ್ದು, ರಿಂಗ್ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ ಮಾಡಿ, ಅದಕ್ಕೆ ಲೈಟ್ ಹಾಕುವ ಕೆಲಸಕ್ಕೂ ಪ್ರತಾಪ್ ಸಿಂಹನೇ ಬೇಕಾಯಿತು. ಈ ಹಿಂದೆ ನೀವು ಮುಖ್ಯಮಂತ್ರಿಗಳಾಗಿದ್ದಾಗ ಮೈಸೂರು ಏರ್‌ಪೋರ್ಟ್ ಅಭಿವೃದ್ಧಿಗೆ ಸಹಕರಿಸಿಲ್ಲ. ನಾನು ಬಸವರಾಜ ಬೊಮ್ಮಾಯಿ ಅವರನ್ನು ಕಾಡಿ–ಬೇಡಿ 319 ಕೋಟಿ ರೂ. ತಂದು ಈ ವಿಮಾನ ನಿಲ್ದಾಣವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ● 9ನೇ ಪುಟಕ್ಕೆ

ಗ್ರೇಟರ್ ಮೈಸೂರು ಅನುಷ್ಠಾನ ತಪ್ಪಿಸಲು ಪಾಲಿಕೆ ಕೌನ್ಸಿಲ್ ಸಭೆ ಮುಂದೂಡಿಕೆ

ಮೈಸೂರು ಮಹಾನಗರ ಪಾಲಿಕೆ ಆಯುಕ್ತರ ವಿರುದ್ಧ ಸಂಸದ ಪ್ರತಾಪ್ ಸಿಂಹ ಅಸಮಾಧಾನ

ಮೈಸೂರು, ಸೆ.2(ಆರ್‌ಕೆ)–ಗ್ರೇಟರ್ ಮೈಸೂರು ಯೋಜನೆ ಅನುಷ್ಠಾನ ತಪ್ಪಿಸಲೆಂದು ನಿಯಮವನ್ನು ಗಾಳಿಗೆ ತೂರಿ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಅವರು ನಿಗಧಿಯಾಗಿದ್ದ ಪಾಲಿಕೆ ಕೌನ್ಸಿಲ್ ಸಭೆಯನ್ನು ಮುಂದೂಡಿದ್ದಾರೆ ಎಂದು ಸಂಸದ ಪ್ರತಾಪ್ ಸಿಂಹ ಗಂಭೀರ ಆರೋಪ ಮಾಡಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಮೇಯರ್ ಶಿವಕುಮಾರ್ ಉಪಸ್ಥಿತಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೇಯರ್ ಅನುಮತಿ ಇಲ್ಲದೇ ಕೌನ್ಸಿಲ್ ಸಭೆ ಮುಂದೂಡಲು ಯಾರಿಗೂ ಅಧಿಕಾರವಿಲ್ಲ. ಆದರೆ, ಪಾಲಿಕೆ ಆಯುಕ್ತರು ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಕೌನ್ಸಿಲ್ ಸಭೆ ಮುಂದೂಡಿರುವುದು ಕಾನೂನುಬಾಹಿರ ಕ್ರಮ ಎಂದರು. ಮೇಯರ್ ಕರೆದಿದ್ದ ಕಡೇ ಕೌನ್ಸಿಲ್ ಸಭೆಯಲ್ಲಿ ಗ್ರೇಟರ್ ಮೈಸೂರು ಯೋಜನೆ ಅನುಷ್ಠಾನ ಕುರಿತಂತೆ ವಿಷಯ ಪ್ರಸ್ತಾಪಿಸಿ ಅನುಷ್ಠಾನ ಸಂಬಂಧ ನಿರ್ಣಯ ಕೈಗೊಳ್ಳಬೇಕಿತ್ತು. ಅದನ್ನು ತಪ್ಪಿಸುವ ● 9ನೇ ಪುಟಕ್ಕೆ

ಮಳೆಯಿಂದಾಗಿ ಭಾರತ–ಪಾಕಿಸ್ತಾನ ಪಂದ್ಯ ರದ್ದು

ಪಲ್ಲೆಕೆಲೆ (ಶ್ರೀಲಂಕಾ), ಸೆ.2– ಏಷ್ಯಾ ಕಪ್ ಕ್ರಿಕೆಟ್ ಪಂದ್ಯಾವಳಿಯ ಶನಿವಾರ ನಡೆದ 'ಎ' ವಿಭಾಗದ ಲೀಗ್ ಹಂತದ ಭಾರತ ಮತ್ತು ಪಾಕಿಸ್ತಾನ ನಡುವಿನ ಜಿದ್ದಾಜಿದ್ದಿನ ಪಂದ್ಯ ಮಳೆಯಿಂದಾಗಿ ರದ್ದಾಗಿದೆ. ಇದರಿಂದ ಎರಡೂ ತಂಡಗಳು ತಲಾ ಒಂದು ಅಂಕವನ್ನು ಪಡೆದಿವೆ. ಪಾಕಿಸ್ತಾನವು ಸೂಪರ್ ಫೋರ್‌ಗೆ ತಲುಪಿದೆ.

ಹೈ ವೋಲ್ಟೇಜ್ ಪಂದ್ಯಕ್ಕೆ ಆರಂಭದಲ್ಲಿ ಮಳೆಯಿಂದ ಅಡಚಣೆಯಾಯಿತು. ಆ ಬಳಿಕ ಭಾರತ ತಂಡ ಆರಂಭಿಕ ಆಘಾತಕ್ಕೆ ಸಿಲುಕಿದರೂ 48.5 ಓವರ್‌ಗಳಲ್ಲಿ 266 ರನ್‌ಗಳಿಗೆ ಎಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡಿತು. ಇಶಾನ್ ಕಿಶನ್, ಹಾರ್ದಿಕ್ ಪಾಂಡ್ಯ ಸಮಯೋಚಿತ ಆಟದ ನೆರವಿನಿಂದ ಬದ್ಧ ಎದುರಾಳಿ ಪಾಕಿಸ್ತಾನಕ್ಕೆ ಗೆಲ್ಲಲು 267 ರನ್‌ಗಳ ಸವಾಲನ್ನು ಮುಂದಿಟ್ಟಿತ್ತು. ● 9ನೇ ಪುಟಕ್ಕೆ

ಕಾವೇರಿ ನೀರಿಗಾಗಿ ಮಂಡ್ಯದಲ್ಲಿ ಬೀದಿಗಿಳಿದ ದಳಪತಿಗಳು

ಜೆಟಿಡಿ, ಸಿಎಸ್ಪಿ ನೇತೃತ್ವದಲ್ಲಿ ಭಾರೀ ಪ್ರತಿಭಟನೆ





ಮಂಡ್ಯ,ಸೆ.2– ನಿರಂತರವಾಗಿ ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ಕ್ರಮ ಖಂಡಿಸಿ ಶನಿವಾರ ಮಂಡ್ಯ ಜಿಲ್ಲಾ ಜೆಡಿಎಸ್ ವತಿಯಿಂದ ಪಕ್ಷದ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡ ಹಾಗೂ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ನೇತೃತ್ವದಲ್ಲಿ ನಗರದಲ್ಲಿ ಭಾರೀ ಪ್ರತಿಭಟನಾ ಮೆರವಣಿಗೆ ಹಾಗೂ ಧರಣಿ ನಡೆಸಿ, ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಿ ಮನವಿ ಸಲ್ಲಿಸಲಾಯಿತು.

ನಗರದ ಸಿಲ್ವರ್ ಜ್ಯುಬಿಲಿ ಪಾರ್ಕ್‌ನಲ್ಲಿ ಜಮಾವಣೆಗೊಂಡ ಸಾವಿರಾರು ಮಂದಿ ಜೆಡಿಎಸ್ ಕಾರ್ಯಕರ್ತರು ಮೆರವಣಿಗೆ ಮೂಲಕ ರೈತ ಹಿತರಕ್ಷಣಾ ಸಮಿತಿ ನಡೆಸುತ್ತಿರುವ ಧರಣಿ ಸ್ಥಳವಾದ ಸರ್ ಎಂ.ವಿಶ್ವೇಶ್ವರಯ್ಯ ಪ್ರತಿಮೆ ಬಳಿ ತಲುಪಿದರು. ಅಲ್ಲಿ ಪ್ರಮುಖ ನಾಯಕರು ಭಾಷಣ ಮಾಡಿ, ಅಲ್ಲಿಂದ ಜಿಲ್ಲಾಧಿಕಾರಿ ಕಚೇರಿ ತಲುಪಿ ಡಿಸಿ ಕಚೇರಿಗೆ ಮುತ್ತಿಗೆ ಹಾಕಿ ಬಳಿಕ ಜಿಲ್ಲಾಧಿಕಾರಿ ಡಾ.ಕುಮಾರ್ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು. ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಿಂದ 'ಕಾವೇರಿ ಉಳಿಸಿ ರೈತರನ್ನು ರಕ್ಷಿಸಿ', 'ಕಾವೇರಿ ಉಳಿಸಿ ಕುಡಿಯುವ ನೀರು ಸಂರಕ್ಷಿಸಿ' ಘೋಷಣೆ ಕೂಗುತ್ತಾ ರಾಜ್ಯ ಕಾಂಗ್ರೆಸ್ ಸರ್ಕಾರ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ರಾಜ್ಯದ ಸಂಸದರ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿದರು. ಜೊತೆಗೆ ಕಾವೇರಿ ವಿಚಾರದಲ್ಲಿ ಅನ್ಯಾಯವಾಗುತ್ತಿದ್ದರೂ ವಿರೋಧಿಸದ ಬೆಂಗಳೂರಿನ ಜನರ ವಿರುದ್ಧವೂ ಕಿಡಿಕಾರಿದರು. ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಕರ್ನಾಟಕ ಕಾವೇರಿ ಜಲಾನಯನ ಭಾಗದಲ್ಲಿ ಶೇ.51 ಹೆಚ್ಚಿನ ಭಾಗ ಮಳೆಯ ಕೊರತೆಯಾಗಿದೆ. ಇದರಿಂದ ಮಂಡ್ಯ, ಮೈಸೂರು, ಚಾಮರಾಜನಗರ ಹಾಗೂ ಹಾಸನದ ರೈತರು ಅತ್ಯಂತ ಸಂಕಷ್ಟಕ್ಕೆ ಸಿಲುಕಿದ್ದಾರೆ. ಮೊದಲನೇ ಬೆಳೆಯನ್ನು ನಾವು ನಾಟಿ ಮಾಡುವ ಹಂತದಲ್ಲಿದ್ದೇವೆ. ಬೆಳೆದು ನಿಂತ ಕಬ್ಬಿನ ರಕ್ಷಣೆ ಆಗಬೇಕಾಗಿದೆ. ಅದಕ್ಕಾಗಿ ನೀರಿನ ತುರ್ತು ಅಗತ್ಯತೆ ಇದೆ. ಆದರೆ ತಮಿಳುನಾಡು ಈಗಾಗಲೇ ಎರಡು ಬೆಳೆಗಳನ್ನು ಬೆಳೆದಿದ್ದು ಇದೀಗ ಕುರುವೈ ಬೆಳೆ ಬೆಳೆಯಲು ಹೊರಟಿದೆ. ರಾಜ್ಯದಲ್ಲಿ ಮಳೆಗಾಲ ಹೆಚ್ಚು–ಕಡಿಮೆ ಮುಗಿದಿದ್ದು, ತಮಿಳುನಾಡಿಗೆ ಮಳೆ ಬರುವ ಸಾಧ್ಯತೆ ಹೆಚ್ಚಿದೆ. ಆದರೂ ಸಂಕಷ್ಟ ಕಾಲದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ತಮಿಳುನಾಡಿಗೆ ಹೆಚ್ಚಿನ ಪ್ರಮಾಣದ ನೀರು ಹರಿಸುತ್ತಿದೆ ಎಂದು ಕಿಡಿಕಾರಿದರು.

ಕರ್ನಾಟಕ ಸರ್ಕಾರ ಕಾವೇರಿ ಜಲಾನಯನ ಪ್ರದೇಶದ ವಾಸ್ತವ ಪರಿಸ್ಥಿತಿಯನ್ನು ಕಾವೇರಿ ಪ್ರಾಧಿಕಾರ ಮತ್ತು ನಿಯಂತ್ರಣ ಮಂಡಳಿ ಹಾಗೂ ಸುಪ್ರೀಂಕೋರ್ಟ್‌ಗೆ ಮನವರಿಕೆ ಮಾಡಿಕೊಡುವಲ್ಲಿ ವಿಫಲವಾಗಿದೆ. ಇದರಿಂದ ರಾಜ್ಯದ ರೈತರು ಸಂಕಷ್ಟ ಎದುರಿಸುತ್ತಿದ್ದಾರೆ. ಸಂಕಷ್ಟ ವರ್ಷ ಎಂದು ಹೇಳಿ ತೀರ್ಮಾನ ಮಾಡಬಹುದಾದಂತಹ ವಿಚಾರವನ್ನು ಮಂಡಳಿ, ಪ್ರಾಧಿಕಾರ ಹಾಗೂ ಕೋರ್ಟ್‌ಗೆ ತಲುಪಿಸಬೇಕಾದಂತಹ ● 6ನೇ ಪುಟಕ್ಕೆ

ಗ್ಯಾರಂಟಿ ಗುಂಗಿನಿಂದ ಹೊರ ಬಂದು ರೈತರ ಕಷ್ಟ ಪರಿಹರಿಸಿ: ಜಿ.ಟಿ.ದೇವೇಗೌಡ

ಮಂಡ್ಯ: ರಾಜ್ಯ ಸರ್ಕಾರಕ್ಕೆ ಕೇವಲ ಐದು ಗ್ಯಾರಂಟಿಗಳ ಗುಂಗಿನಲ್ಲೇ ಮುಳುಗಿದೆಯೇ ಹೊರತು ಕಿಂಚಿತ್ತೂ ರಾಜ್ಯದ ರೈತರ ಬಗ್ಗೆ ಕಾಳಜಿ ಇಲ್ಲ. ತಮಿಳುನಾಡಿಗೆ ಸಾವಿರಾರು ಕ್ಯುಸೆಕ್ ನೀರು ನಿತ್ಯ ಹರಿಯುತ್ತಿದ್ದರೂ, ರೈತರು ಬೀದಿಗಿಳಿದು ಹೋರಾಟ ಮಾಡುತ್ತಿದ್ದರೂ ಈ ಬಗ್ಗೆ ಅರಿವಿಲ್ಲದಂತೆ ವರ್ತಿಸುತ್ತಿರುವುದು ಖಂಡನೀಯ ಎಂದು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡ ಕಿಡಿಕಾರಿದರು. ಶನಿವಾರ ನಗರದ ಸರ್‌ಎಂವಿ ಪುತ್ಥಳಿ ಬಳಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಬರಗಾಲ ತಾಂಡವವಾಡುತ್ತಿದ್ದು, ಇದರ ಬಗ್ಗೆ ಸರ್ಕಾರಕ್ಕೆ ಅರಿವಿದ್ದರೂ ರೈತರ ವಿಚಾರದಲ್ಲಿ ● 6ನೇ ಪುಟಕ್ಕೆ

ಶಿಕ್ಷಕರಿಗೆ 'ಜೀವನದಿ ಕಾವೇರಿ' ಪ್ರಶಸ್ತಿ ಪ್ರದಾನ



ಮೈಸೂರಿನ ಅಕ್ಕನ ಬಳಗ ಸಭಾಂಗಣದಲ್ಲಿ ಕಾವೇರಿ ಬಳಗ ಮತ್ತು ಹಿರಣ್ಮಯಿ ಪ್ರತಿಷ್ಠಾನದ ವತಿಯಿಂದ ಕೊಡಗಿನ ಗೌರು ಪೊನ್ನವ್ವ ಕರುಂಬಯ್ಯ ನೆನಪಿನಾರ್ಥ ಶ್ರೇಷ್ಠ ಶಿಕ್ಷಕರಿಗೆ 'ಜೀವನದಿ ಕಾವೇರಿ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಮೈಸೂರು,ಸೆ.2(ಜಿಎ)–ಶಿಕ್ಷಣದ ಮಹತ್ವದ ಬಗ್ಗೆ ಬಾಬಾ ಸಾಹೇಬ್ ಅಂಬೇಡ್ಕರ್ ಹೇಳುವಂತೆ "ಶಿಕ್ಷಣವೆಂಬುದು ಹುಲಿಯ ಹಾಲಿದ್ದಂತೆ ಇದನ್ನು ಕುಡಿದವರು ಗರ್ಜಿಸಲೇಬೇಕು" ಇಂತಹ ಹುಲಿಯ ಹಾಲನ್ನು ವಿದ್ಯಾರ್ಥಿಗಳಿಗೆ ಕುಡಿಸಿ ಅವರ ಭವಿಷ್ಯವನ್ನು ಭವ್ಯವಾಗಿಸುವ ಶಿಕ್ಷಕರು ಹುಲಿಗಿಂತಲೂ ಶಕ್ತಿಶಾಲಿಗಳೆಂದು ಸಾಹಿತಿ ಬನ್ನೂರು ಕೆ.ರಾಜು ಅಭಿಪ್ರಾಯಪಟ್ಟರು.

ನಗರದ ಅಗ್ರಹಾರದ ತ್ಯಾಗರಾಜ ರಸ್ತೆಯಲ್ಲಿರುವ ಅಕ್ಕನ ಬಳಗ ಸಭಾಂಗಣದಲ್ಲಿ ಕಾವೇರಿ ಬಳಗ ಮತ್ತು ಹಿರಣ್ಮಯಿ ಪ್ರತಿಷ್ಠಾನದ ವತಿಯಿಂದ ನಡೆದ ಕೊಡಗಿನ ಗೌರು ಪೊನ್ನವ್ವ ಕರುಂಬಯ್ಯ ನೆನಪಿನ 'ಜೀವನದಿ ಕಾವೇರಿ ಪ್ರಶಸ್ತಿ' ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ನಾಡು, ನುಡಿ, ದೇಶ, ಭಾಷೆ, ಸಂಸ್ಕೃತಿಯ ಬಗ್ಗೆ ಅಭಿಮಾನವುಳ್ಳ ಪ್ರಾಮಾಣಿಕ ಶಿಕ್ಷಕರು ಒಂದು ಶ್ರೇಷ್ಠ ಸಮಾಜವನ್ನು ಕಟ್ಟಬಲ್ಲವರಾಗಿದ್ದು, ಈ ಮೂಲಕ ಶಿಕ್ಷಣದ ಶಕ್ತಿ ಏನೆಂಬುದನ್ನು ಜಗತ್ತಿಗೇ ಸಾರುತ್ತಾರೆ ಎಂದರು.

ಕನ್ನಡ ನಾಡಿನ ಜೀವನದಿ ತಾಯಿ ಕಾವೇರಿ ಹೆಸರಿನಲ್ಲಿ ಶ್ರೇಷ್ಠ ಶಿಕ್ಷಕರಿಗೆ ಜೀವನದಿ ಕಾವೇರಿ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿರುವುದು ನಿಜಕ್ಕೂ ಅರ್ಥಪೂರ್ಣವಾದದ್ದು. ಒಂದು ರೀತಿ ಶಿಕ್ಷಕರೂ ಕೂಡ ಕಾವೇರಿ ನದಿ ಇದ್ದಂತೆಯೇ. ಕೊಡಗಿನಲ್ಲಿ ಹುಟ್ಟಿ ಹರಿಯುವ ಕಾವೇರಿ ನದಿ ತಾನು ಹರಿದಲ್ಲೆಲ್ಲ ಸಮೃದ್ಧಿಗೊಳಿಸುವ ಸಂಪದ್ಧಾರಿಣಿ. ಎಂತಹ ಪತಿತರನ್ನೂ ಪಾವನಗೊಳಿಸುವ ಪತಿತ ಪಾವನಿ. ನಾಡಿಗೆಲ್ಲಾ ಅನ್ನ ನೀಡುವ ಅನ್ನಪೂರ್ಣೆ. ಅದರಲ್ಲೂ ವಿಶೇಷವಾಗಿ ರೈತರ ಪಾಲಿನ ಜೀವದಾತೆ ಎಂದು ಕಾವೇರಿ ನದಿಯನ್ನು ಬಣ್ಣಿಸಿದರು.

ಶಿಕ್ಷಕರು ಸಹ ತಾವು ಕರ್ತವ್ಯ ನಿರ್ವಹಿಸಿದ ಕಡೆಗಳಲ್ಲೆಲ್ಲಾ ಶಿಕ್ಷಣದ ಮೂಲಕ ಅಲ್ಲಿನ ಮಕ್ಕಳ ಬಾಳು ಬೆಳಗುವ ಭಾಗ್ಯವಿಧಾತೆ. ಯಾವ ಕ್ಷೇತ್ರ ಮಲಿನವಾದರೂ ಚಿಂತೆ ಇಲ್ಲ, ಆದರೆ ಶಿಕ್ಷಣ ಕ್ಷೇತ್ರ ಯಾವತ್ತೂ ಕಾವೇರಿಯಂತೆ ಪರಿಶುದ್ಧವಾಗಿರಬೇಕು. ಆಗ ಮಾತ್ರ. ದೇಶದ ಭವಿಷ್ಯ ಚೆನ್ನಾಗಿರುತ್ತದೆ. ನಿಜವಾಗಿಯೂ ದೇಶದ ಆಸ್ತಿ ಎಂದರೆ ಅದು ಶಿಕ್ಷಕರು ಮಾತ್ರ. ಅದಕ್ಕೇ ಶಿಕ್ಷಕರನ್ನು ಗುರು ಬ್ರಹ್ಮ, ಗುರು ವಿಷ್ಣು, ಗುರು ಮಹೇಶ್ವರರೆಂದು ಹೇಳುವುದು ಎಂದು ಗುರುವಿನ ಮಹತ್ವ ತಿಳಿಸಿದರು.

ಕಾರ್ಯಕ್ರಮದಲ್ಲಿ ಹೆಗ್ಗಡದೇವನಕೋಟೆ ತಾಲೂಕಿನ ಹೈರಿಗೆ ಸರ್ಕಾರಿ ಪ್ರಾಥಮಿಕ ಶಾಲೆ ಶಿಕ್ಷಕ ಎಂ.ಸಿ.ಮಹದೇವಪ್ಪ, ಗಂಗಡಹೊಸಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆ ಶಿಕ್ಷಕಿ ಎ.ರೋಸಲಿನ್, ಹಿರೇನಂದಿ ಸರ್ಕಾರಿ ಪ್ರಾಥಮಿಕ ಶಾಲೆ ಶಿಕ್ಷಕ ಗೋಪಾಲಕೃಷ್ಣ, ಶಿಂಡೇನಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆ ಶಿಕ್ಷಕಿ ಕಲ್ಯಾಣಮ್ಮ, ಚಾಮಲಾಪುರದ ಸರ್ಕಾರಿ ಪ್ರಾಥಮಿಕ ಶಾಲೆ ಶಿಕ್ಷಕ ಡಿ.ನಾಗರಾಜು, ಕ್ಯಾತನಹಳ್ಳಿಯ ಸರ್ಕಾರಿ ಪ್ರಾಥಮಿಕ ಶಾಲೆ ಶಿಕ್ಷಕಿ ಶೋಭಾ ಹಾಗೂ ಎನ್.ಉಮಾದೇವಿ ಅವರುಗಳಿಗೆ ಪ್ರಸ್ತುತ ಸಾಲಿನ 'ಜೀವನದಿ ಕಾವೇರಿ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಮಂಡ್ಯ ಜಿಲ್ಲೆಯ ಡಯಟ್‌ನ ಪ್ರಾಚಾರ್ಯರಾದ ಪುರುಷೋತ್ತಮ್, ಚಿತ್ರ ಕಲಾವಿದೆ ಹಾಗೂ ಲೇಖಕಿ ಡಾ.ಜಮುನಾ ರಾಣಿ ಮಿರ್ಲೆ, ಖ್ಯಾತ ವಾಗ್ಮಿ ಹಾಗೂ ಶಿಕ್ಷಕಿ ಅನುಪಮಾ, ಕಾವೇರಿ ಬಳಗದ ಅಧ್ಯಕ್ಷೆ ಎನ್.ಕೆ.ಕಾವೇರಿಯಮ್ಮ, ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ ಶಿಕ್ಷಕಿ ಫಾತಿಮಾ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯ ಜಿಲ್ಲಾಧ್ಯಕ್ಷ ಹೆಚ್.ವಿ.ಮುರಳೀಧರ್ ಮತ್ತು ಸಮಾಜಸೇವಕಿ ಮಾಲಿನಿ ಪಾಲಾಕ್ಷ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಲಭಿಸಲು ಶಿಕ್ಷಕರಿಗೆ ಪರಿಣತಿ ಅಗತ್ಯ

● ಎನ್‌ಸಿಟಿಇ ಸದಸ್ಯ ಕಾರ್ಯದರ್ಶಿ ಕೆಸಾಂಗ್ ವೈ.ಶೆರ್ಪಾ ಅಭಿಮತ ● ಶಿಕ್ಷಕರ ಸಮಗ್ರ ಶಿಕ್ಷಣ ಕಾರ್ಯಕ್ರಮ ಕುರಿತ ಅಧಿವೇಶನ



ಮೈಸೂರಿನ ಆರ್‌ಐಇ ಸಂಸ್ಥೆಯಲ್ಲಿ ಶನಿವಾರ ನಡೆದ 'ಇಂಟಿಗ್ರೇಟೆಡ್ ಟೀಚರ್ ಎಜುಕೇಷನ್ ಪ್ರೋಗ್ರಾಂ' ಕುರಿತ ಮಾಹಿತಿ ಹಂಚಿಕೆ ಅಧಿವೇಶನದಲ್ಲಿ ಎನ್‌ಸಿಟಿಇ ಸದಸ್ಯ ಕಾರ್ಯದರ್ಶಿ ಕೆಸಾಂಗ್ ವೈ.ಶೆರ್ಪಾ ಮಾತನಾಡಿದರು.

> 2030ರ ಹೊತ್ತಿಗೆ ಐಟಿಇಪಿ ಮೂಲಕ ಶಿಕ್ಷಕರ ಶಿಕ್ಷಣದಲ್ಲಿ ಬಹುಶಿಸ್ತೀಯ ವ್ಯವಸ್ಥೆ ತರಬೇಕಿದೆ. ಶಿಕ್ಷಕರನ್ನು ಸಮರ್ಥವಾಗಿ ಸಜ್ಜುಗೊಳಿಸಲು ಬಹುಶಿಸ್ತೀಯ ದೃಷ್ಟಿಕೋನ ಅಗತ್ಯ. ಶಿಕ್ಷಕರು ಭಾರತೀಯ ಮೌಲ್ಯಗಳು, ಭಾಷೆಗಳು ಹಾಗೂ ಜ್ಞಾನ, ನೈತಿಕತೆ, ಸಂಪ್ರದಾಯಗಳ ಬಗ್ಗೆ ಅರಿವು ಹೊಂದಿರಬೇಕು. ಅಲ್ಲದೆ, ಶಿಕ್ಷಣ ಕ್ಷೇತ್ರದಲ್ಲಿನ ಇತ್ತೀಚೆಗಿನ ಪ್ರಗತಿಗಳ ಬಗ್ಗೆಯೂ ತಿಳಿದುಕೊಂಡಿರಬೇಕು.
> –ಕೆಸಾಂಗ್ ವೈ.ಶೆರ್ಪಾ

ಮೈಸೂರು, ಸೆ.2(ಪಿಎಂ)– ವಿದ್ಯಾರ್ಥಿಗಳಿಗೆ ಬೋಧಿಸುವ ಶಾಲಾ ಶಿಕ್ಷಕರು ತಮ್ಮ ವಿಷಯ ಹಾಗೂ ಬೋಧನಾ ವಿಧಾನಗಳಲ್ಲಿ ಪರಿಣತಿ ಹೊಂದಿದ್ದರೆ ಮಾತ್ರವೇ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ದೊರೆಯಲು ಸಾಧ್ಯ. ಜೊತೆಗೆ ಇದು ಮುಂದಿನ ಪೀಳಿಗೆಯನ್ನು ಸಮರ್ಥವಾಗಿ ಸಜ್ಜುಗೊಳಿಸಲು ಸಹಕಾರಿ ಎಂದು ನವದೆಹಲಿಯ ನ್ಯಾಷನಲ್ ಕೌನ್ಸಿಲ್ ಫಾರ್ ಟೀಚರ್ ಎಜುಕೇಷನ್‌ನ (ಎನ್‌ಸಿಟಿಇ) ಸದಸ್ಯ ಕಾರ್ಯದರ್ಶಿ ಕೆಸಾಂಗ್ ವೈ.ಶೆರ್ಪಾ ಹೇಳಿದರು.

ಮೈಸೂರಿನ ಮಾನಸಗಂಗೋತ್ರಿಯ ರೀಜನಲ್ ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನ್ (ಆರ್‌ಐಇ–ಎನ್‌ಸಿಆರ್‌ಇಟಿ) ಸಂಸ್ಥೆಯ ಎವಿ ಸಭಾಂಗಣದಲ್ಲಿ ಆರ್‌ಐಇ, ನ್ಯಾಷನಲ್ ಕೌನ್ಸಿಲ್ ಫಾರ್ ಟೀಚರ್ ಎಜುಕೇಷನ್ (ಎನ್‌ಸಿಟಿಇ) ಹಾಗೂ ಇಂಟರ್ ಯೂನಿವರ್ಸಿಟಿ ಸೆಂಟರ್ ಫಾರ್ ಟೀಚರ್ ಎಜುಕೇಷನ್‌ನ ಸಂಯುಕ್ತಾಶ್ರಯದಲ್ಲಿ ಎನ್‌ಇಪಿ–2020ರೊಂದಿಗೆ ಸಂಯೋಜಿಸಿದ 'ಇಂಟಿಗ್ರೇಟೆಡ್ ಟೀಚರ್ ಎಜುಕೇಷನ್ ಪ್ರೋಗ್ರಾಂ (ಐಟಿಇಪಿ–ಶಿಕ್ಷಕರ ಸುಮಗ್ರ ಶಿಕ್ಷಣ ಕಾರ್ಯಕ್ರಮ)' ಕುರಿತು ಶನಿವಾರ ಹಮ್ಮಿಕೊಂಡಿದ್ದ ಮಾಹಿತಿ ಹಂಚಿಕೆ ಅಧಿವೇಶನದಲ್ಲಿ ಅವರು ಮಾತನಾಡಿದರು.

'ಐಟಿಇಪಿ' ಎಂಬುದು 4 ವರ್ಷಗಳ ಡ್ಯುಯಲ್ ಮೇಜರ್ ಪದವಿಪೂರ್ವ ಪದವಿಯಾಗಿದೆ. ಶಿಕ್ಷಕರನ್ನು ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಪೂರಕವಾಗಿ ಸಿದ್ಧಗೊಳಿಸುವುದು ಈ ಹೊಸ ಕೋರ್ಸ್ ಗುರಿಯಾಗಿದೆ. ಎನ್‌ಇಪಿ–2020ಕ್ಕೆ ಸಂಯೋಜಿಸಿದಂತೆ ಶಿಕ್ಷಕರ ಶಿಕ್ಷಣದ ಗುಣಮಟ್ಟ ಸುಧಾರಿಸುವ ನಿಟ್ಟಿನಲ್ಲಿ ಐಟಿಇಪಿ ಅಡಿಯಲ್ಲಿ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಆ ಮೂಲಕ ಸುಧಾರಣೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಐಟಿಇಪಿ ಒಂದು ಹೊಸ ಉಪಕ್ರಮವಾಗಿದ್ದು, ಶಿಕ್ಷಕರ ಗುಣಮಟ್ಟ ಸುಧಾರಣೆಗೆ ದೇಶದಾದ್ಯಂತ ಪ್ರಾರಂಭಿಸಲಾಗಿದೆ. ಶಿಕ್ಷಕರ ಸೇವೆಗೆ ಸಂಬಂಧಿಸಿದಂತೆ ಶಿಕ್ಷಕರ ರಾಷ್ಟ್ರೀಯ ವೃತ್ತಿಪರ ಗುಣಮಟ್ಟಕ್ಕಾಗಿ ಅಗತ್ಯ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಈಗಾಗಲೇ ಪ್ರಾರಂಭಿಸಲಾಗಿರುವ 'ನ್ಯಾಷನಲ್ ಮಿಷನ್ ಫಾರ್ ಮೆಂಟರಿಂಗ್' ಕಾರ್ಯಕ್ರಮವು ಎಲ್ಲಾ ಶಾಲಾ ಶಿಕ್ಷಕರಿಗೆ ಮಾರ್ಗದರ್ಶನ ನೀಡುವಲ್ಲಿ ವಿಶಿಷ್ಟತೆ ಹೊಂದಿದೆ. ಐಟಿಇಪಿ ಪಠ್ಯಕ್ರಮ ಹೊರತರಲು ಒಂದು ವರ್ಷದ ಕಾಲಾವಧಿ ಇದೆ ಎಂದರು.

ನೃಪತುಂಗ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶ್ರೀನಿವಾಸ್ ಎಸ್.ಬಳ್ಳಿ ಮಾತನಾಡಿ, ಪ್ರಸ್ತುತಕ್ಕೆ ಪೂರಕವಿರುವಂತೆ ಸಾಂಪ್ರದಾಯಕ ಮತ್ತು ಮುಂದುವರೆದ ತಂತ್ರಜ್ಞಾನ ಎರಡನ್ನೂ ಶಿಕ್ಷಣ ವ್ಯವಸ್ಥೆಯಲ್ಲಿ ಅಳವಡಿಸಿಕೊಳ್ಳಬೇಕು. ಈ ಹಿಂದೆ ಶಿಕ್ಷಕರು ಬೋಧಿಸಿದ್ದೇ ಅಂತಿಮ ಎನ್ನುವ ವ್ಯವಸ್ಥೆ ಇತ್ತು. ಆದರೆ ಈಗ ಮೊಬೈಲ್ ಹಾಗೂ ಅಂತರ್ಜಾಲದ ಪರಿಣಾಮ ಬಹುತೇಕ ವಿದ್ಯಾರ್ಥಿಗಳು ಇವುಗಳ ಮೂಲಕವೂ ಮಾಹಿತಿ ಕಲೆ ಹಾಕುತ್ತಾರೆ. ಹೀಗಾಗಿ ವಿದ್ಯಾರ್ಥಿಗಳಲ್ಲಿ ಹುಟ್ಟುವ ಅನೇಕ ಪ್ರಶ್ನೆಗಳಿಗೆ ಶಿಕ್ಷಕರು ಉತ್ತರಿಸುವುದು ಸವಾಲಿನ ಕೆಲಸವೇ ಆಗಿರಲಿದೆ. ಹಾಗಾಗಿ ಶಿಕ್ಷಕರು ಹೆಚ್ಚಿನ ಹೊಣೆಗಾರಿಕೆಯನ್ನು ಹೊಂದಿರಬೇಕಾಗುತ್ತದೆ ಎಂದು ಹೇಳಿದರು.

ಪೋಷಕರು ಹಾಗೂ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಅಂಕ ಗಳಿಕೆಗಾಗಿ ಒತ್ತಡ ಹೇರುವುದು ಇಂದು ಸಾಮಾನ್ಯವಾಗುತ್ತಿದೆ. ಆದರೆ ಕೇವಲ ಅಂಕ ಗಳಿಕೆ ಮುಖ್ಯವಲ್ಲ. ಇದರ ಜೊತೆಗೆ ವಿದ್ಯಾರ್ಥಿಗಳಿಗೆ ವಿಷಯಕ್ಕೆ ಸಂಬಂಧಿಸಿದ ಜ್ಞಾನ ಮೂಡುವುದು ಅಗತ್ಯ. ಮಕ್ಕಳು ಆಸಕ್ತಿಯಿಂದ ಪಾಠ ಕೇಳುವಂತಹ ವ್ಯಕ್ತಿತ್ವವನ್ನು ಶಿಕ್ಷಕರು ಬೆಳೆಸಿಕೊಳ್ಳುವುದು ಅತ್ಯಗತ್ಯ ಎಂದು ತಿಳಿಸಿದರು. ಮೈಸೂರು ಆರ್‌ಐಇ ಸಂಸ್ಥೆ ಪ್ರಾಂಶುಪಾಲ ಪ್ರೊ.ವೈ.ಶ್ರೀಕಾಂತ್, ಸಂಚಾಲಕ ಪ್ರೊ.ಅನಿಲ್‌ಕುಮಾರ್ ಸೇರಿದಂತೆ ಶಿಕ್ಷಣ ಕ್ಷೇತ್ರದ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಮನೆ ಮಾರಾಟ ಮಾಡುವುದಾಗಿ 10.10 ಲಕ್ಷ ರೂ. ಪಡೆದು ವಂಚನೆ ಸಂಬಂಧ ಪ್ರಕರಣ ದಾಖಲು

ಮೈಸೂರು, ಸೆ. 2– ಮನೆ ಮಾರಾಟ ಮಾಡುವುದಾಗಿ ತಿಳಿಸಿ 10.10 ಲಕ್ಷ ರೂ. ಪಡೆದು ವಂಚಿಸಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ಗಾಯತ್ರಿಪುರಂ ನಿವಾಸಿ ಎಂ.ಎಸ್.ರಾಮಚಂದ್ರ(43) ವಂಚನೆಗೊಳಗಾದವರಾಗಿದ್ದು, ಇವರಿಗೆ ಪರಿಚಯವಾದ ರಿಯಲ್ ಎಸ್ಟೇಟ್ ಬ್ರೋಕರ್ ಪ್ರಭು ಎಂಬಾತ ಮಹದೇವಯ್ಯ ಮತ್ತು ಅವರ ಪುತ್ರ ರಾಹುಲ್‌ಗೆ ಸೇರಿದ ನಾಡನಹಳ್ಳಿ ಗ್ರಾಮದ ಕೆಎಸ್‌ಆರ್‌ಟಿಸಿ ಲೇಔಟ್‌ನ 2ನೇ ಹಂತದಲ್ಲಿರುವ 267ನೇ ಸಂಖ್ಯೆಯ ಮನೆ ಮಾರಾಟ ಮಾಡಲಿರುವುದಾಗಿ ತಿಳಿಸಿದ್ದಾರೆ. ಅದರಂತೆ 61 ಲಕ್ಷ ರೂ.ಗಳಿಗೆ ಮನೆ ಮಾರಾಟ ಮಾಡುವುದಾಗಿ ಮಹದೇವಯ್ಯ ಮತ್ತು ಅವರ ಪುತ್ರ ರಾಹುಲ್ ಒಪ್ಪಿ 2023ರ ಮೇ 22ರಂದು 10.10 ಲಕ್ಷ ರೂ. ಮುಂಗಡ ಹಣ ಪಡೆದು ಕ್ರಯದ ಕರಾರು ಮಾಡಿಕೊಂಡಿದ್ದಾರೆ. ಈ ನಡುವೆ ಈ ಮೂವರೂ ಸೇರಿ ಅದೇ ಮನೆಯನ್ನು ಚಿನ್ನಪ್ಪಯ್ಯ ಎಂಬುವರಿಗೆ ಮಾರಾಟ ಮಾಡಲು 2023ರ ಜೂನ್ 21ರಂದು ಕ್ರಯದ ಕರಾರು ಮಾಡಿಕೊಂಡಿರುವ ಬಗ್ಗೆ ರಾಮಚಂದ್ರ ಅವರ ಗಮನಕ್ಕೆ ಬಂದಿದ್ದು, ಅವರು ಉಳಿಕೆ ಹಣ ಪಡೆದು ತಮಗೆ ಮನೆ ನೋಂದಣಿ ಮಾಡಿಕೊಡುವಂತೆ ಕೇಳಿದರೂ ಹಣವನ್ನೂ ಕೊಡದೇ, ಮನೆಯನ್ನೂ ನೋಂದಣಿ ಮಾಡಿಕೊಡದೆ ವಂಚಿಸಲಾಗಿದೆ ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ನಜರ್‌ಬಾದ್ ಠಾಣೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಪಾರ್ಟ್‌ಟೈಮ್ ಜಾಬ್ ಕೊಡಿಸುವುದಾಗಿ ಗೃಹಿಣಿಗೆ 1.68 ಲಕ್ಷ ರೂ. ವಂಚನೆ

ಮೈಸೂರು, ಸೆ. 2– ಪಾರ್ಟ್‌ಟೈಮ್ ಜಾಬ್ ನೀಡುವುದಾಗಿ ನಂಬಿಸಿ ಆನ್‌ಲೈನ್ ಮೂಲಕ ಗೃಹಿಣಿಗೆ 1.68 ಲಕ್ಷ ರೂ. ವಂಚಿಸಲಾಗಿದೆ.

ಮೈಸೂರಿನ ಕುವೆಂಪುನಗರದ ಜಡ್ಜಸ್ ಕ್ವಾಟ್ರರ್ಸ್ ನಿವಾಸಿ ವೈಆರ್.ಸೌಂದರ್ಯ (28) ವಂಚನೆಗೊಳಗಾದವರಾಗಿದ್ದು, ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಲಾಗಿದ್ದ ಕೆಲಸದ ಕುರಿತ ಜಾಹೀರಾತಿನ ಮೇಲೆ ಇವರು ಕ್ಲಿಕ್ ಮಾಡಿದಾಗ ಅವರಿಗೆ 6258748776 ಸಂಖ್ಯೆಯನ್ನು ಸಂಪರ್ಕಿಸಿದರೆ ಕೆಲಸದ ಬಗ್ಗೆ ಮಾಹಿತಿ ನೀಡುವುದಾಗಿ ತಿಳಿಸ ಲಾಗಿದೆ. ಸದರಿ ಅವರನ್ನು ಸಂಪರ್ಕಿಸಿದಾಗ ಹಣ ಹೂಡಿಕೆ ಮಾಡಿ, ಟಾಸ್ಕ್ ಪೂರೈಸಿದರೆ ಹೆಚ್ಚಿನ ಹಣ ನೀಡುವುದಾಗಿ ನಂಬಿಸಿ 1,68,360 ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಾತ್ಕಾಲಿಕ ಪುಸ್ತಕ ಎರವಲು ಸೇವೆ

ಮೈಸೂರು,ಸೆ.2–ಬಸವೇಶ್ವರ ರಸ್ತೆ ಶಾಖಾ ಗ್ರಂಥಾಲಯದ ಕಟ್ಟಡದ ಕಾಮಗಾರಿ ನಡೆಯುತ್ತಿರುವುದರಿಂದ ಬಸವೇಶ್ವರ ರಸ್ತೆ ಶಾಖಾ ಗ್ರಂಥಾಲಯದಲ್ಲಿ ಸದಸ್ಯತ್ವ ಹೊಂದಿರುವ ಸಾರ್ವಜನಿಕ ಓದುಗರು ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿಯನ್ನು ಹಾಗೂ ತಮ್ಮ ಸದಸ್ಯತ್ವ ಕಾರ್ಡ್ ಅನ್ನು ಸಲ್ಲಿಸಿ ಚಾಮುಂಡಿಪುರಂ ಶಾಖಾ ಗ್ರಂಥಾಲಯದಲ್ಲಿ ತಾತ್ಕಾಲಿಕವಾಗಿ ಪುಸ್ತಕ ಎರವಲು ಸೇವೆ ಪಡೆಯಲು ಅವಕಾಶ ಕಲ್ಪಿಸಲಾಗಿದೆ

ತಮಿಳುನಾಡಿಗೆ ಕಾವೇರಿ ನೀರು: ಕರ್ನಾಟಕ ಸೇನಾಪಡೆ ಪ್ರತಿಭಟನೆ



ಮೈಸೂರು, ಸೆ.2(ಜಿಎ)–ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ, ಕರ್ನಾಟಕ ಸೇನಾಪಡೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾ ಪಂಚಾಯತ್ ಕಚೇರಿ ಮುಂಭಾಗ ಸೇನಾಪಡೆಯ ಪದಾಧಿಕಾರಿಗಳು ಹಣೆಗೆ ನಾಮ ಬರೆದುಕೊಂಡು ಶಂಖ ಊದಿ, ಜಾಗಟೆ ಬಾರಿಸುವ ಮೂಲಕ ಸರ್ಕಾರ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಪ್ರತಿಭಟನಾಕಾರು ಮಾತನಾಡಿ, ಈ ಹಿಂದೆ ಕೇಂದ್ರ ಸರ್ಕಾರವು ತಮಿಳುನಾಡು ಸರ್ಕಾರದ ಒತ್ತಡಕ್ಕೆ ಮಣಿದು ಕಾವೇರಿ ನೀರು ಪ್ರಾಧಿಕಾರವನ್ನು ರಚನೆ ಮಾಡಿರುವುದೇ ಅತ್ಯಂತ ಖಂಡನೀಯ ಹಾಗೂ ಅದು ರಾಜ್ಯಕ್ಕೆ ಮರಣ ಶಾಸನವಾಗಿದ್ದು, ತಮಿಳುನಾಡಿಗೆ ನೀರು ಹರಿಸುವಂತೆ ಆದೇಶಿಸಿರುವ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವನ್ನು ರದ್ದುಪಡಿಸಬೇಕೆಂದು ಒತ್ತಾಯಿಸಿದರು.

ಈ ವರ್ಷ ಮಳೆ ಸರಿಯಾಗಿ ಬಾರದೆ ರಾಜ್ಯವೇ ಸಂಕಷ್ಟದಲ್ಲಿದೆ. ಮುಂದಿನ ದಿನಗಳಲ್ಲಿ ನಮಗೆ ಕುಡಿಯಲು ನೀರು ಸಿಗುವುದಿಲ್ಲ. ಆದ್ದರಿಂದ ಪ್ರಾಧಿಕಾರವು ರಾಜ್ಯದ ಜಲಾಶಯಗಳ ವಸ್ತು ಸ್ಥಿತಿಯನ್ನು ಅಧ್ಯಯನ ಮಾಡಿ, ನಂತರ ನೀರು ಬಿಡಲು ಆದೇಶಿಸಬೇಕು. ರಾಜ್ಯದಲ್ಲಿರುವ 28 ಸಂಸದರು ಮತ್ತು 11 ಮಂದಿ ರಾಜ್ಯಸಭಾ ಸದಸ್ಯರು ಕೂಡಲೇ ಕೇಂದ್ರ ಸರ್ಕಾರ ಮತ್ತು ಪ್ರಾಧಿಕಾರಕ್ಕೆ ರಾಜ್ಯದ ಜಲಾಶಯಗಳ ಪ್ರಸ್ತುತ ನೀರಿನ ಮಟ್ಟದ ಬಗ್ಗೆ ಮನವರಿಕೆ ಮಾಡಿಸಿ, ನೀರು ಬಿಡದಂತೆ ಹೋರಾಟ ಮಾಡಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸೇನಾಪಡೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ಕನ್ನಡ ಸೇನೆ ಅಧ್ಯಕ್ಷೆ ಶೈಲಜಾ, ಜೂನಿಯರ್ ಬಂಗಾರಪ್ಪ ರಘು, ನೇಹಾ, ಶಿವಲಿಂಗಯ್ಯ, ಸಿದ್ದರಾಜು ಮತ್ತಿತರರು ಪಾಲ್ಗೊಂಡಿದ್ದರು.

ಇಂದು ಮಾಜಿ ಸಿಎಂ ಕುಮಾರಸ್ವಾಮಿ ಆಸ್ಪತ್ರೆಯಿಂದ ಡಿಸ್ಚಾರ್ಜ್

ಬೆಂಗಳೂರು,ಸೆ.2(ಕೆಎಂಶಿ)–ಅನಾರೋಗ್ಯದಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ನಾಳೆ (ಭಾನುವಾರ) ಡಿಸ್ಚಾರ್ಜ್ ಆಗಲಿದ್ದಾರೆ. ಕಳೆದ ಬುಧವಾರ ಮುಂಜಾನೆ ಅನಾರೋಗ್ಯದಿಂದ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ತ್ವರಿತವಾಗಿ ಸ್ಪಂದಿಸಿ ಚೇತರಿಸಿಕೊಂಡ ಹಿನ್ನೆಲೆಯಲ್ಲಿ ನಿನ್ನೆಯೇ ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಲು ಮುಂದಾಗಿದ್ದರು. ಆದರೆ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಭಾನುವಾರ ಬೆಳಗ್ಗೆ ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆಗುವಂತೆ ಸಲಹೆ ಮಾಡಿದ ಹಿನ್ನೆಲೆಯಲ್ಲಿ ಭಾನುವಾರ ಮನೆಗೆ ಮರಳಲಿದ್ದಾರೆ. ನಂತರ 2 ವಾರಗಳ ಕಾಲ ವಿಶ್ರಾಂತಿ ಪಡೆಯಲಿರುವ ಕುಮಾರಸ್ವಾಮಿ ಅವರನ್ನು ಭೇಟಿ ಮಾಡಲು ಸಾರ್ವಜನಿಕರಿಗೆ ಅವಕಾಶವಿಲ್ಲ ಎಂದು ಆಪ್ತ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನ:** ಶ್ರೀ ವೀರಭದ್ರೇಶ್ವರಸ್ವಾಮಿಯ ಜನ್ಮೋತ್ಸವ, ಮಹಾ ರಥೋತ್ಸವ ಹಾಗೂ ಶ್ರಾವಣ ಮಾಸದಲ್ಲಿ ನಡೆಯುವ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನ ಆವರಣ, ಡಿ.ಬನುಮಯ್ಯ ರಸ್ತೆ, ಕೆಆರ್ ಮೊಹಲ್ಲಾ, ಬೆಳಗ್ಗೆ

■ **ರೋಟರಿ ಕ್ಲಬ್ ಆಫ್ ವಿಜಯನಗರ, ಮೈಸೂರು:** ಸಂಚಾರ ನಿಯಮದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ, ಉದ್ಘಾಟನೆ: ರೋ.ಎಚ್.ಆರ್. ಕೇಶವ್, ಉಪಸ್ಥಿತರು: ವಿಕ್ರಂ ದತ್ತ, ಸಂಚಾರ ಜಾಗೃತಿ ಛೇರ್ಮನ್ ಹರ್ಷಕುಮಾರ್ ರೈ, ರೋ.ನಂಜಯ್ಯ, ಸ್ಥಳ: ರೋಟರಿ ಮೈಸೂರು ಸೆಂಟರ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 8.30ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಥೈರಾಯಿಡ್ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30ರಿಂದ.

■ **ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳು:** ಶತೋತ್ತರ–ಸುವರ್ಣ–ರಜತ ಮಹೋತ್ಸವ, ಸುರದ್ರುಮ ಸ್ಮರಣ ಸಂಚಿಕೆ ಬಿಡುಗಡೆ ಸಮಾರಂಭ, ಅಧ್ಯಕ್ಷತೆ: ಸದ್ವಿದ್ಯಾ ಶಿಕ್ಷಣ ಸಂಸ್ಥೆ ಅಧ್ಯಕ್ಷ ಪ್ರೊ.ವಿ.ಕೆ.ಗೋಪಾಲಾಚಾರ್, ಮುಖ್ಯ ಅತಿಥಿಗಳು: ಎನ್.ಆರ್.ಗ್ರೂಪ್ ಛೇರ್ಮನ್ ಆರ್.ಗುರು, ಶಾಲಾ ಶಿಕ್ಷಣ ಇಲಾಖೆ ನಿರ್ದೇಶಕಿ ಸಿಂಧು ಬಿ.ರೂಪೇಶ್, ಉಪಸ್ಥಿತರು: ಉಪಾಧ್ಯಕ್ಷ ಸಿ.ಆರ್.ನಾಗರಾಜ್, ಗೌರವ ಕಾರ್ಯದರ್ಶಿ ಪ್ರೊ.ನರಹರಿಬಾಬು, ಸಹ ಕಾರ್ಯದರ್ಶಿ ಪ್ರೊ.ಹಿರಿಯಣ್ಣ, ಸ್ಥಳ: ಕರ್ನಾಟಕ ಕಲಾಮಂದಿರ, ಬೆಳಗ್ಗೆ 10ಕ್ಕೆ.


■ **ಬಿಲ್ಲವ ಸಂಘ:** ವಾರ್ಷಿಕ ಮಹಾಸಭೆ, ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ, ಶ್ರೀ ಕಳಶ ಮತ್ತು ಗುರು ಪೂಜೆ, ಭಜನೆ, ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, ಅಧ್ಯಕ್ಷತೆ : ಸಂಘದ ಉಪಾಧ್ಯಕ್ಷ ಸಚಿನ್ ಪೂಜಾರಿ, ಸ್ಥಳ: ಚಾಮುಂಡೇಶ್ವರಿ ಕ್ಷೇತ್ರದ ಸುವರ್ಣನಗರ, ಗೋಹಳ್ಳಿ ಕೆ.ಹೆಮ್ಮನಹಳ್ಳಿ, ಬೆಳಗ್ಗೆ 10ಕ್ಕೆ.

■ **ಅಂತರ್‌ದೃಷ್ಟಿ ಬ್ರೈನ್ ಅಕಾಡೆಮಿ, ಪರಮಹಂಸ ಯೋಗ ಮಹಾವಿದ್ಯಾಲಯ, ಮೈಸೂರು ಯೋಗ ಒಕ್ಕೂಟ:** ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ನಡೆಸಿದ ಅಂತರ ಶಾಲಾ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ಮತ್ತು ಪ್ರಶಸ್ತಿ ಪತ್ರ ವಿತರಣಾ ಸಮಾರಂಭ, ಅಧ್ಯಕ್ಷತೆ: ಯೋಗ ಪ್ರವೀಣ ಶಿವಪ್ರಕಾಶ್ ಗುರೂಜಿ, ಬಹುಮಾನ ವಿತರಣೆ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮುಖ್ಯ ಅತಿಥಿಗಳು: ಎಂ.ಎಸ್.ನಾಗೇಶ್, ಯೋಗ ರತ್ನ ಜಲೇಂದ್ರಕುಮಾರ್, ಚಿತ್ರಕಲಾವಿದ ಶೇಷಾದ್ರಿ, ಸ್ಥಳ: ಪರಮಹಂಸ ಯೋಗ ಮಹಾವಿದ್ಯಾಲಯ, ರಾಮಕೃಷ್ಣನಗರ, ಬೆಳಗ್ಗೆ 10ಕ್ಕೆ.

■ **ಆಯುರ್ ಬೃಂದಾವನ ಆರೋಗ್ಯ ಕೇಂದ್ರ:** ಉಚಿತ ತಪಾಸಣೆ, ಸಲಹಾ ಶಿಬಿರ, ಸ್ಥಳ: ಕೇಂದ್ರದ ಆವರಣ, ಅಗ್ರಹಾರ ಸರ್ಕಲ್, ಬೆಳಗ್ಗೆ 10ರಿಂದ.

■ **ಹೊಯ್ಸಳ ಕರ್ನಾಟಕ ಸಂಘ:** ಬಾಲಕರ ವಿದ್ಯಾರ್ಥಿನಿಲಯದ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ: ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಮುಖ್ಯ ಅತಿಥಿಗಳು: ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತರಾದ ಡಾ. ಎಸ್.ಎಲ್. ಭೈರಪ್ಪ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ, ಸಂಘದ ಮಾಜಿ ಅಧ್ಯಕ್ಷ ಮಂದಗೆರೆ ಮಂಜುನಾಥ್, ಅಧ್ಯಕ್ಷತೆ: ಸಂಘದ ಕಾರ್ಯಾಧ್ಯಕ್ಷ ಕೆ.ಆರ್.ಸತ್ಯನಾರಾಯಣ, ಮುಖ್ಯ ಅತಿಥಿಗಳು: ಸಂಸದರಾದ ಪ್ರತಾಪ್ ಸಿಂಹ, ಎಲ್.ಎಸ್.ತೇಜಸ್ವಿ ಸೂರ್ಯ, ಶಾಸಕರಾದ ಟಿ.ಎಸ್.ಶ್ರೀವತ್ಸ, ಎಲ್.ಎ.ರವಿಸುಬ್ರಹ್ಮಣ್ಯ, ರಾಮಮೂರ್ತಿ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಪಾಲಿಕೆ ಸದಸ್ಯೆ ಪಲ್ಲವಿ ಬೇಗಂ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಸ್ಥಳ: ಕೆ.ಆರ್.ವನಂ, ಬೆಳಗ್ಗೆ 10ಕ್ಕೆ.

■ **ಸಾಮಾಜಿಕ ನ್ಯಾಯ ಸಬಲೀಕರಣ ವೇದಿಕೆ :** ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನದ ಸದ್ಬಳಕೆಗಾಗಿ ಎಸ್‌ಸಿ, ಎಸ್‌ಟಿ ಜನಾಂದೋಲನ ರಾಜ್ಯ ಮಟ್ಟದ ವಿಚಾರ ಸಂಕಿರಣ, ಉದ್ಘಾಟನೆ :ಅಂಕಣಕಾರ ಡಿ. ಉಮಾಪತಿ, ಅಧ್ಯಕ್ಷತೆ : ವೇದಿಕೆ ಮುಖಂಡ ಭೀಮನಹಳ್ಳಿ ಸೋಮೇಶ್, ಮುಖ್ಯ ಅತಿಥಿಗಳು: ಪ್ರಗತಿಪರ ಚಿಂತಕ ಪಾರ್ವತೀಶ್ ಬಿಳಿದಾಳೆ, ಪತ್ರಕರ್ತ ಎಂ.ಡಿ. ಶಿವಕುಮಾರ್, ಚೋರನಹಳ್ಳಿ ಶಿವಣ್ಣ, ದ್ಯಾವಪ್ಪ ನಾಯಕ, ಶ್ರೀನಿವಾಸ್, ಸೋಸಲೆ ಸಿದ್ದರಾಜು, ಲೋಕೇಶ್, ವಿಷಯ ಮಂಡನೆ: ವೇದಿಕೆಯ ಕೆ.ಎನ್.ಪ್ರಭುಸ್ವಾಮಿ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ಬೆಳಗ್ಗೆ 10.30ಕ್ಕೆ



ಇಂದಿನ ಪಂಚಾಂಗ

3.9.2023 ಭಾನುವಾರ, ಮಳೆ ನಕ್ಷತ್ರ: ಪುಬ್ಬ 31.08.2023ರಿಂದ 13.09.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ರೇವತಿ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಬಸವ ಸಮಿತಿ :** ಶರಣ ಸಂಗಮ, ದತ್ತಿ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಶ್ರೀ ಶಿವರಾತ್ರೀಶ್ವರ ಅಕ್ಕನ ಬಳಗದ ಸದಸ್ಯರಿಂದ ರುದ್ರ ಪಠಣ, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಭವನ, ಸಿಎ ನಿವೇಶನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಅಕ್ಯೂಪ್ರೆಶರ್, ಸುಜೋಕ್, ಅಕ್ಯೂ ಡಿಜಿಟಲ್ ಫಿಜಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಶ್ರೀ ಪ್ರಸನ್ನ ಗಣಪತಿ ದೇವಸ್ಥಾನ, ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನ, ವಿಜಯನಗರ 2ನೇ ಹಂತ, ಬೆಳಗ್ಗೆ 10.30ರಿಂದ.

■ **ಹೊಸ ಶ್ರೀ ರಾಮಮಂದಿರ, ಗಾಂಧಿನಗರ:** ನವೀಕೃತ ಕಟ್ಟಡದ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಸಂಸದ ಪ್ರತಾಪ್ ಸಿಂಹ, ವಾಣಿಜ್ಯ ಸಂಕೀರ್ಣ ಉದ್ಘಾಟನೆ: ವಿಧಾನಪರಿಷತ್ ಸದಸ್ಯ ಛಲವಾದಿ ನಾರಾಯಣ ಸ್ವಾಮಿ, ವಿಶೇಷ ಆಹ್ವಾನಿತರು: ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಅಧ್ಯಕ್ಷತೆ : ಪಾಲಿಕೆ ಸದಸ್ಯೆ ಡಾ. ಅಶ್ವಿನಿ ಶರತ್, ಸ್ಥಳ: ಹೊಸ ಶ್ರೀ ರಾಮ ಮಂದಿರ, 4ನೇ ಕ್ರಾಸ್, ಗಾಂಧಿನಗರ, ಬೆಳಗ್ಗೆ 11ಕ್ಕೆ.

■ **ಗಾಯತ್ರಿ ವಿಪ್ರ ಸಂಘ :** ಬೆಳಗ್ಗೆ 7ರಿಂದ ಸಂಕಲ್ಪ, ಗಣಪತಿ ಹೋಮ, ನವಗ್ರಹ ಹೋಮ, ಗಾಯತ್ರಿ ಹೋಮ, ಧನ್ವಂತರಿ ಹೋಮ, ಬೆಳಗ್ಗೆ 9ಕ್ಕೆ ಸಾಮೂಹಿಕ ಲಲಿತ ಸಹಸ್ರ ನಾಮಾರ್ಚನೆ, ವಿಷ್ಣು ಸಹಸ್ರನಾಮಾರ್ಚನೆ, ಮಧ್ಯಾಹ್ನ 11.30ಕ್ಕೆ ಶ್ರೀಗಳವರಿಂದ ಆಶೀರ್ವಚನ, ಫಲಮಂತ್ರಾಕ್ಷತೆ, ಉಪಸ್ಥಿತರು: ಶ್ರೀ ಜಯರಾಮ ಶಾಸ್ತ್ರಿಗಳು, ಸ್ಥಳ: ಅನಂತೇಶ್ವರ ಭವನ, ಕೆಹೆಚ್‌ಬಿ ಹೂಟಗಳ್ಳಿ.

■ **ಕನ್ನಡ ಚಳವಳಿ ಕೇಂದ್ರ ಸಮಿತಿ :** ಕಾವೇರಿ ದುಂಡು ಮೇಜಿನ ಸಭೆ, ಉಪಸ್ಥಿತರು : ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ, ಕಾವೇರಿ ನೀರಾವರಿ ನಿಗಮ ಮಾಜಿ ವ್ಯವಸ್ಥಾಪಕ ನಿರ್ದೇಶಕ ತಿಮ್ಮೇಗೌಡ, ಕುವೆಂಪು ಭಾಷಾ ಭಾರತಿ ಅಕಾಡೆಮಿ ಮಾಜಿ ಅಧ್ಯಕ್ಷ ಪ್ರಧಾನ ಗುರುದತ್, ಸಾಹಿತಿ ಪ್ರೊ. ಕೆ.ಎಸ್.ಭಗವಾನ್, ಡಾ.ಎಂ.ಜಿ.ಆರ್.ಅರಸ್, ಡಾ.ಕೆ.ರಘುರಾಂ ವಾಜಪೇಯಿ, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಸಖಿ ಫೌಂಡೇಷನ್ ಮತ್ತು ಸೂರ್ಯ ಚಾರಿಟೆಬಲ್ ಟ್ರಸ್ಟ್, ಸೂರ್ಯಸಖಿ ಕಲ್ಚರಲ್ ಫೆಸ್ಟ್:** ತುಂಟ ಕೃಷ್ಣ –ಮುದ್ದು ರಾಧೆ ವೇಷಭೂಷಣ ಸ್ಪರ್ಧೆ, ಬಹುಮಾನ ವಿತರಣೆ ಸಮಾರಂಭ, ಮುಖ್ಯ ಅತಿಥಿಗಳು : ಉದ್ಯಮಿ ಎಂ.ಎಸ್. ನಾರಾಯಣ್, ಆದ್ಯ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷ ಡಾ. ಬಿ.ಜೆ. ವಿಶ್ವನಾಥ್, ಟ್ರಸ್ಟ್ ಸಂಸ್ಥಾಪನ ಕಾರ್ಯದರ್ಶಿ ಶ್ರೀಮತಿ ಗಾಯತ್ರಿ ಸುಂದರೇಶನ್, ಸಖಿ ಫೌಂಡೇಷನ್ ಅಧ್ಯಕ್ಷ ಹೆಚ್.ಆರ್. ಸುಂದರೇಶನ್, ಸ್ಥಳ: ಗಣಪತಿ ದೇವಸ್ಥಾನದ ಆವರಣ, ರಾಮಕೃಷ್ಣನಗರ, ಬೆಳಗ್ಗೆ 11.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ. ಸಿ.ಎನ್.ರಾಮಚಂದ್ರನ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬದುಕು ಮಣ್ಣಿನೊಂದಿಗೆ –ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ–ಎ.ಪಿ.ಚಂದ್ರಶೇಖರ್, 6.40 ಪದ ಸಂಸ್ಕೃತಿ, ಪ್ರಸ್ತುತಿ–ಡಾ.ಬಿ.ವಿ.ವಸಂತಕುಮಾರ್, 9.05 ವಸುದೈವ ಕುಟುಂಬಕಂ –ಭಾರತ ಜಿ20 ಶೃಂಗಸಭೆ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.40 ನಮ್ಮ ಆರೋಗ್ಯ–ಪರಿಪೂರ್ಣ ಪೋಷಣೆ ಕುರಿತು ಡಾ. ಟಿ. ಶಿವಕುಮಾರ್ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–ನಂಜನಗೂಡು ತಾಲೂಕು ಎಸ್. ಹೊಸಕೋಟೆಯ ಶ್ರೀ ಗುರು ಮಹಾಂತೇಶ್ವರ ಆಂಗ್ಲ ಮಾಧ್ಯಮ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ–ಹೆಗ್ಗಡಹಳ್ಳಿ ಕೃಷ್ಣೇಗೌಡ ಮತ್ತು ಸಂಗಡಿಗರು, 1.0 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ವೀಣಾ ಶ್ರೀನಿವಾಸ್. 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪಿ.ಸಿ.ಮಳಿಮಠ ಮತ್ತು ಕೆ.ಬಿ.ಮೀನಾ, 3.15 ಸ್ವರಾಜ್–ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಗಾಥೆ, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–ಪಾಂಚಜನ್ಯ, ಪ್ರಸ್ತುತಿ–ಮೂಡು ಬೆಳ್ಳೆಯ ಯಕ್ಷ ಕೌಸ್ತುಭದ ಕಲಾವಿದರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಪಶುರಂಗ–ಪ್ರಾಯೋಜಿತ ಕಾರ್ಯಕ್ರಮ. ಹಿತ್ತಲ ಕೋಳಿ ಸಾಕಾಣಿಕೆ ಕುರಿತು ಡಾ.ಎಂ.ಸಿ.ಶಿವಕುಮಾರ್ ಅವ ರೊಂದಿಗೆ ಸಂದರ್ಶನ, 8.00 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ–ಬಾನುಲಿ ಸರಣಿ. ಅಕ್ಷಯ ಆಹಾರ ಜೋಳಿಗೆಯ ಡಾ. ಹೆಚ್.ಆರ್. ರಾಜೇಂದ್ರ ಅವರೊಂದಿಗೆ ಸಂವಾದ. ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ಸತ್ಯೇಂದ್ರ ಸಿಂಗ್ ಸೋಲಂಕಿ–ಸಂತೂರ್ ವಾದನ

■ **ಶ್ರೀ ಬಸವೇಶ್ವರ ವಧು–ವರರ ವಿವಾಹ ವೇದಿಕೆ, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ:** ವೀರಶೈವ ಲಿಂಗಾಯಿತ ವಧುವರರ ಸಮಾವೇಶ, ಸಾನ್ನಿಧ್ಯ: ಶ್ರೀ ಫಲಹಾರ ಪ್ರಭುದೇವ ಸ್ವಾಮೀಜಿ, ಉದ್ಘಾಟನೆ: ಚಲನಚಿತ್ರ ನಟ ಸುಪ್ರೀತ್, ಅಧ್ಯಕ್ಷತೆ: ಮಾಲಂಗಿ ಸುರೇಶ್, ಮುಖ್ಯ ಅತಿಥಿಗಳು: ಎಲ್. ರುದ್ರಮೂರ್ತಿ, ದೇಬೂರು ಅಶೋಕ್, ತಾಯೂರು ವಿಠಲಮೂರ್ತಿ, ಸ್ಥಳ: ವಿದ್ಯಾಭಾರತಿ ಕಲ್ಯಾಣ ಮಂಟಪ, ಗನ್‌ಹೌಸ್ ಹತ್ತಿರ, ಮಧ್ಯಾಹ್ನ 1 ರಿಂದ.

■ **ಕನ್ನಡ ಸಾಹಿತ್ಯ ಕಲಾಕೂಟ, ಶ್ರೀ ವಾಸವಿ ಶಾಂತಿಧಾಮ ಪಬ್ಲಿಕ್ ಚಾರಿಟೆಬಲ್ ಟ್ರಸ್ಟ್:** ಡಾ.ಎಸ್.ಪುಟ್ಟಪ್ಪ ಮುಡಿಗುಂಡ ಅವರ ಜೇನುಗೂಡು ಕವನ ಸಂಕಲನ ಬಿಡುಗಡೆ ಹಾಗೂ ಗುರುವಂದನಾ ಕಾರ್ಯಕ್ರಮ, ಗುರುವಂದನೆ ಸ್ವೀಕಾರ: ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರು, ಗುರು ಮಹಿಮೆ ಕುರಿತು ಉಪನ್ಯಾಸ: ಹಿರಿಯ ವಿದ್ವಾಂಸ ಡಾ.ಕೆ. ಅನಂತ ರಾಮು, ಅಧ್ಯಕ್ಷತೆ: ಮಹಾ ಕವಯತ್ರಿ ಡಾ.ಲತಾ ರಾಜಶೇಖರ್, ಕೃತಿ ಬಿಡುಗಡೆ: ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಪ್ರಾಸ್ತಾವಿಕ ನುಡಿ: ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ.ಚಂದ್ರಶೇಖರ್, ಮುಖ್ಯ ಅತಿಥಿಗಳು: ಡಾ.ಕೆ.ರಘುರಾಂ ವಾಜಪೇಯಿ, ಸ್ಥಳ: ಶ್ರೀ ವಾಸವಿ ಶಾಂತಿಧಾಮ, ಆಲನಹಳ್ಳಿ ಬಡಾವಣೆ, ಸಂಜೆ 4ಕ್ಕೆ

■ **ಸಂಸ್ಕೃತ ಭಾರತೀ, ವಿದ್ವಾನ್ ಟಿ. ನಾರಾಯಣಶಾಸ್ತ್ರೀ ಪ್ರತಿಷ್ಠಾನ :** ಸಂಸ್ಕೃತ ಸಪ್ತಾಹ, ಡಾ.ಎಂ.ಎ.ಆಳ್ವಾರ್ ಅವರಿಂದ ಉಪನ್ಯಾಸ, ಡಾ.ಎಚ್.ವಿ. ನಾಗರಾಜರಾವ್ ಅವರ 'ವಸಂತತಿಲಕಾಶತಕಂ' ಕಾವ್ಯದ ಪರಿಚಯ ಕುರಿತು ಪ್ರವಚನ, ಸ್ಥಳ: ಗೋಪಾಲಸ್ವಾಮಿ ಶಿಶುವಿಹಾರ ಶಾಲೆ, ಸಂಜೆ 5.30ರಿಂದ.

■ **ಪರಿವರ್ತನ ರಂಗ ಸಮಾಜ :** ಮೃಣಾಲ್ ಸೇನ್ ಅವರ ಕುರಿತಾದ ಒಂದು ಸಾಕ್ಷ್ಯ ಚಿತ್ರ ಪ್ರದರ್ಶನ ಹಾಗೂ ಸಂವಾದ ಕಾರ್ಯಕ್ರಮ, ಸಂವಾದದಲ್ಲಿ ಭಾಗವಹಿಸುವವರು : ಪ್ರೊಫೆಸರ್ ಕೆ.ಪಿ. ವಾಸುದೇವನ್, ರಂಗಾಯಣದ ಮಾಜಿ ನಿರ್ದೇಶಕ ಸಿ. ಬಸವಲಿಂಗಯ್ಯ ಹಾಗೂ ರಂಗನಿರ್ದೇಶಕ ಪ್ರೊಫೆಸರ್ ಎಸ್ ಆರ್ ರಮೇಶ್, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಸಂಜೆ 5.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀ ಮಾತೆ ಶಾರದಾದೇವಿ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ಮಹಾ ಗಣಪತಿ ನವಗ್ರಹ ದೇವಸ್ಥಾನದ ಅಭಿವೃದ್ಧಿ ಸಮಿತಿ :** 33ನೇ ವಾರ್ಷಿಕೋತ್ಸವ, ಶ್ರೀ ಸಂಕಷ್ಟಹರ ಚೌತಿ ಪ್ರಯುಕ್ತ ಸಂಜೆ 7ರಿಂದ ಗಣಪತಿ ಸನ್ನಿಧಿಯಲ್ಲಿ ವಿಶೇಷ ಪೂಜೆ, ಅಭಿಷೇಕ, ಅಷ್ಟೋತ್ತರ, ಕಥಾಶ್ರವಣ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಬನ್ನಿಮಂಟಪ

■ **ಶ್ರೀ ಸುತ್ತೂರು ಮಠ (ಮೈಸೂರು), ಚಾಮುಂಡಿಬೆಟ್ಟದ ತಪ್ಪಲು:** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಜೆಎಸ್‌ಎಸ್ ಮಹಾ ವಿದ್ಯಾಪೀಠ, ಪ್ರಕಟಣ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ಅವರಿಂದ ಪ್ರವಚನ, ವಾಚನ–ಕಾರ್ಯಪಾಲಕ ಅಭಿಯಂತಕರಾದ ವಿದ್ವಾನ್ ಕೈ.ರಾಮಚಂದ್ರ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30ಕ್ಕೆ. ಸಾಮೂಹಿಕ ಪ್ರಾರ್ಥನೆ: ಸಂಜೆ 6 ಗಂಟೆಗೆ.

■ **ನಂಜನಗೂಡು ಶ್ರೀರಾಘವೇಂದ್ರಸ್ವಾಮಿಗಳವರ ಮಠ:** ಶ್ರೀ ರಾಘವೇಂದ್ರ ತೀರ್ಥ ಗುರುಸಾರ್ವಭೌಮರ 352ನೇ ಆರಾಧನಾ ಮಹೋತ್ಸವ, ಬೆಳಗ್ಗೆ 7ಕ್ಕೆ ಉತ್ಸವರಾಯರಿಗೆ ಪಾದಪೂಜೆ, ಪಂಚಾಮೃತ, ಹಸ್ತೋದಕ, ಮಹಾ ಮಂಗಳಾರತಿ, ಸಂಜೆ 7ರಿಂದ ಕು.ನಯನ ನಾಗರಾಜ್ ಅವರಿಂದ ದಾಸವಾಣಿ, ಸ್ಥಳ: ಶ್ರೀರಾಘವೇಂದ್ರಸ್ವಾಮಿ ಮಠ, ನಾರಾಯಣಶಾಸ್ತ್ರಿ ರಸ್ತೆ

■ **ನಟನ ರಂಗಶಾಲೆ :** ನಟನ ರಂಗ ಶಾಲೆ ಕಲಾವಿದರಿಂದ ಪೂರ್ಣಚಂದ್ರ ತೇಜಸ್ವಿ ಅವರ ಕಥೆ ಆಧಾರಿತ ಕೃಷ್ಣೇಗೌಡರ ಆನೆ ನಾಟಕ ಪ್ರದರ್ಶನ, ನಿರ್ದೇಶನ : ಚಲನಚಿತ್ರ ನಟ ಮಂಡ್ಯ ರಮೇಶ್, ಸ್ಥಳ : ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ರಂಗಾಯಣ:** ರಂಗಾಯಣ ರೆಪರ್ಟರಿ ಕಲಾವಿದರಿಂದ ಮುಟ್ಟಿಸಿಕೊಂಡವನು ನಾಟಕ ಪ್ರದರ್ಶನ, ಕಥೆ: ಪಿ.ಲಂಕೇಶ್, ನಿರ್ದೇಶನ: ಕೆ.ಆರ್.ನಂದಿನಿ, ರಂಗ ವಿನ್ಯಾಸ : ಹೆಚ್.ಕೆ.ದ್ವಾರಕಾನಾಥ್, ಸಂಗೀತ ವಿನ್ಯಾಸ: ಪ್ರಶಾಂತ್ ಹಿರೇಮಠ್, ನೃತ್ಯ ಸಂಯೋಜನೆ: ಮೈಮ್ ರಮೇಶ್, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ

■ **ಪ್ರಕಸಂ:** ಹಾಸ್ಯಭರಿತ ನಾಟಕ ವರಲಕ್ಷ್ಮಿ ಅವಾಂತರ, ರಚನೆ: ನಾಗವೇಣಿ ರಂಗನ್, ನಿರ್ದೇಶನ: ಪಿ.ಡಿ. ಸತೀಶ್‌ಚಂದ್ರ, ಸ್ಥಳ: ಕಿರುರಂಗ ಮಂದಿರ, ರಂಗಾಯಣ, ಸಂಜೆ 4 ಮತ್ತು 7 ಗಂಟೆಗೆ.

ಬೆಟ್ಟದತುಂಗ ಗ್ರಾಮದಲ್ಲಿಂದು

■ **ಅರಸು ಮಹಿಳಾ ಸಂಘ 'ತವರು' :** ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಅವರ 108ನೇ ಜನ್ಮ ದಿನೋತ್ಸವ ಆಚರಣೆ, ಅಧ್ಯಕ್ಷತೆ: ಅರಸು ಮಹಿಳಾ ಸಂಘ 'ತವರು' ಬೆಂಗಳೂರು ಅಧ್ಯಕ್ಷೆ ಸುಜಯ ಕಾಂತಾಮಣಿ, ಮುಖ್ಯ ಅತಿಥಿಗಳು: ಸಚಿವ ಕೆ.ವೆಂಕಟೇಶ್, ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ, ಕೆಪಿಸಿಸಿ ವಕ್ತಾರ ಸೂರಜ್ ಹೆಗ್ಡೆ, ಬೆಟ್ಟದ ತುಂಗ ಗ್ರಾಪಂ ಅಧ್ಯಕ್ಷೆ ಟಿ.ಎಸ್.ಪ್ರೀತಿಲಕ್ಷ್ಮಿ, ಟಿ.ಕೃಷ್ಣೆ ಅರಸು, ಬೆಳಗ್ಗೆ 10.30ಕ್ಕೆ

ಜಿಗಜಿಣಗಿ ಸೇರಿ ಬಿಜೆಪಿಯ ಹಾಲಿ 7 ಸಂಸದರ 'ಆಪರೇಷನ್ ಹಸ್ತ'?

ಬೆಂಗಳೂರು ಸೆ.2(ಕೆಎಂಶಿ)–ಕೇಂದ್ರದ ಮಾಜಿ ಸಚಿವ ರಮೇಶ್ ಜಿಗಜಿಣಗಿ ಸೇರಿದಂತೆ ಬಿಜೆಪಿಯ ಏಳು ಮಂದಿ ಸಂಸದರನ್ನು ಸೆಳೆಯಲು ಕಾಂಗ್ರೆಸ್ ಆಪರೇಷನ್ ಹಸ್ತಕ್ಕೆ ಮುಂದಾಗಿದೆ.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಣಕ್ಕಿಳಿಯಲು ಆಸಕ್ತಿ ಇಲ್ಲದ ಹಾಗೂ ಚುನಾವಣಾ ಟಿಕೆಟ್ ತಪ್ಪಲಿದೆ ಎಂಬ ಸಂದಿಗ್ಧತೆಯಲ್ಲಿರುವವರಿಗೆ ಕಾಂಗ್ರೆಸ್ ಗಾಳ ಹಾಕಿದೆ. ಈಗಾಗಲೇ ವಿಧಾನಸಭೆಯ ಬಿಜೆಪಿ ಶಾಸಕರನ್ನು ಸೆಳೆಯಲು ವೇದಿಕೆ ಸಿದ್ಧಪಡಿಸಿರುವ ಕಾಂಗ್ರೆಸ್, ಆ ಪಕ್ಷದ ಸಂಸದರನ್ನು ಸೆಳೆದು ಚುನಾವಣೆಗೆ ಈಗಿನಿಂದಲೇ ಅಲೆ ಸೃಷ್ಟಿಗೆ ಮುಂದಾಗಿದೆ.

ರಮೇಶ್ ಜಿಗಜಿಣಗಿ ಅಲ್ಲದೆ, ಬಸವರಾಜ್ (ತುಮಕೂರು), ಕರಡಿ ಸಂಗಣ್ಣ(ಕೊಪ್ಪಳ), ಬಿ.ಎನ್.ಬಚ್ಚೇಗೌಡ (ಚಿಕ್ಕಬಳ್ಳಾಪುರ), ಮಂಗಳಾ ಸುರೇಶ್ ಅಂಗಡಿ (ಬೆಳಗಾವಿ), ಪಿ.ಸಿ.ಗದ್ದಿಗೌಡರ್ (ಬಾಗಲಕೋಟೆ), ರಾಜ ಅಮರೇಶ್ ನಾಯಕ್(ರಾಯಚೂರು) ಅವರನ್ನು ಆಪರೇಷನ್ ಹಸ್ತ ಮಾಡಲು ಈಗಾಗಲೇ ವೇದಿಕೆ ಸಿದ್ಧಗೊಂಡಿದೆ.

ಬಚ್ಚೇಗೌಡ, ಮಂಗಳಾ ಸುರೇಶ್ ಅಂಗಡಿ, ಬಸವರಾಜ್ ಸೇರಿದಂತೆ ಕೆಲವರಿಗೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಬಿಜೆಪಿ ಅವಕಾಶ ನೀಡುತ್ತಿಲ್ಲ. ಅಲ್ಲದೆ, ಕೆಲವರಿಗೆ ಟಿಕೆಟ್ ನೀಡಲು ಬಿಜೆಪಿ ನಿಯಮಗಳ ಪ್ರಕಾರ ಅವಕಾಶವಿಲ್ಲ. ವಯೋಮಿತಿ ಹೆಚ್ಚಾಗಿದೆ. ಮತ್ತೆ ಕೆಲವರು ಕೇಂದ್ರದ ವರಿಷ್ಠರೊಂದಿಗೆ ಸಂಬಂಧ ಚೆನ್ನಾಗಿಟ್ಟುಕೊಂಡಿಲ್ಲ. ಇಂಥವರಿಗೆ ಮತ್ತೆ ಸ್ಪರ್ಧೆಗೆ ಅವಕಾಶವಿಲ್ಲ ಎಂಬುದು ಸೇರಿದಂತೆ ವಿವಿಧ ಕಾರಣಕ್ಕೆ ಬಿಜೆಪಿ ತೊರೆಯಲು ಇವರು ಮುಂದಾಗಿದ್ದಾರೆ.

ಈಗಾಗಲೇ ಬಚ್ಚೇಗೌಡರ ಪುತ್ರ ಶರತ್‌ಬಚ್ಚೇಗೌಡ ಕಾಂಗ್ರೆಸ್ ಚಿಹ್ನೆಯಡಿ ವಿಧಾನಸಭೆ ಪ್ರವೇಶಿಸಿದ್ದಾರೆ.

ವಯಸ್ಸಿನ ಕಾರಣ; ವರಿಷ್ಠರೊಂದಿಗೆ ಉತ್ತಮ ಸಂಬಂಧ ಇಲ್ಲದೇ ಇರುವುದು... ಹೀಗೆ ನಾನಾ ಕಾರಣದಿಂದ ಟಿಕೆಟ್ ವಂಚಿತರ ಸೆಳೆಯಲು ಕಾಂಗ್ರೆಸ್ ಗಾಳ

ಇನ್ನು ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರ ಸಂಬಂಧಿಯಾಗಿರುವ ಮಂಗಳಾ ಸುರೇಶ್ ಅಂಗಡಿ ಅವರು, ಶೆಟ್ಟರ್ ಅವರ ಹಾದಿಯನ್ನು ತುಳಿಯಲಿದ್ದಾರೆ. ವಿಧಾನಸಭೆಯಲ್ಲಿ ಸೋಲುಂಡ ಮಾಜಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರು, ವಿಜಯಪುರ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿಯಲು ಆಸಕ್ತಿ ತೋರಿದ್ದಾರೆ. ಇವರು ವರಿಷ್ಠರೊಂದಿಗೆ ಒಳ್ಳೆಯ ಬಾಂಧವ್ಯ ಇಟ್ಟುಕೊಂಡಿದ್ದಾರೆ. ಜಿಗಜಿಣಗಿಗೆ ಟಿಕೆಟ್ ತಪ್ಪಬಹುದು ಎಂಬ ಸುಳಿವು ದೊರೆತಿದೆ. ಈ ಹಿನ್ನೆಲೆಯಲ್ಲಿ ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಮುಂಬೈ ಕರ್ನಾಟಕ ಭಾಗದಲ್ಲಿ ಕೆಲವರನ್ನು ಕಾಂಗ್ರೆಸ್‌ಗೆ ಸೆಳೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಇನ್ನು ತುಮಕೂರಿನಲ್ಲಿ ಬಸವರಾಜ್ ಅವರಿಗೆ ವಯೋಮಿತಿ ಹೆಚ್ಚಾಗಿದೆ ಎಂಬ ಕಾರಣಕ್ಕೆ ಟಿಕೆಟ್ ದೊರೆಯುವುದಿಲ್ಲ. ಅಲ್ಲಿ ಮಾಜಿ ಸಚಿವ ವಿ.ಸೋಮಣ್ಣ ಅವರನ್ನು ಕಣಕ್ಕಿಳಿಸಲು ಬಿಜೆಪಿ ಆಸಕ್ತಿ ತೋರಿದೆ. ಸೋಮಣ್ಣ ಕಣಕ್ಕಿಳಿದರೆ, ಬಸವರಾಜ್ ಕೂಡ ಬೆಂಬಲಿಸುತ್ತಾರೆ. ಆದರೆ, ವಿ.ಸೋಮಣ್ಣ ಅವರನ್ನು ಕಾಂಗ್ರೆಸ್‌ಗೆ ಸೆಳೆದು ಅದೇ ಕ್ಷೇತ್ರದಿಂದ ಕಣಕ್ಕಿಳಿಸಲು ಕಾಂಗ್ರೆಸ್ ನಾಯಕರು ಮುಂದಾಗಿದ್ದಾರೆ.

ಇನ್ನು ಗದ್ದಿಗೌಡರ್ ಹಾಗೂ ಕರಡಿ ಸಂಗಣ್ಣ ಅವರು ಬಿಜೆಪಿಯ ಪ್ರಮುಖರೊಂದಿಗೆ ಅಂತಹ ಒಳ್ಳೆಯ ಸಂಬಂಧ ಉಳಿಸಿಕೊಂಡಿಲ್ಲ. ಈಗಾಗಲೇ ಹಲವು ಬಾರಿ ಅಪಸ್ವರ ಎತ್ತಿದ್ದಾರೆ. ಇಂಥವರನ್ನು ಗುರುತಿಸಿ ಪಕ್ಷಕ್ಕೆ ಸೆಳೆದುಕೊಂಡು ಅಲೆ ಸೃಷ್ಟಿಸಲು ಕಾಂಗ್ರೆಸ್ ಹೊರಟಿದೆ. ಕೆಲವು ಲೋಕಸಭಾ ಕ್ಷೇತ್ರಗಳಿಗೆ ಆಡಳಿತಾರೂಢ ಕಾಂಗ್ರೆಸ್‌ಗೆ ಸಮರ್ಥ ಅಭ್ಯರ್ಥಿಗಳಿಲ್ಲ.

ಇಂತಹ ಕ್ಷೇತ್ರಗಳಿಗೆ ಬಿಜೆಪಿ ಇಲ್ಲವೇ ಜೆಡಿಎಸ್ ಮುಖಂಡರನ್ನು ಸೆಳೆದು ಪಕ್ಷದಿಂದ ಕಣಕಿಳಿಸಲು ಕಾಂಗ್ರೆಸ್ ಹೊರಟಿದೆ. ವಿಧಾನಸಭಾ ಹಾಗೂ ಲೋಕಸಭೆಯ ಶಾಸಕ ಹಾಗೂ ಸಂಸದರನ್ನು ಆಪರೇಷನ್ ಹಸ್ತ ಮಾಡಲು ತೆರೆಮರೆಯಲ್ಲಿ ಹಲವು ಸುತ್ತಿನ ಚರ್ಚೆಗಳು ನಡೆದಿವೆ. ಇದರಲ್ಲಿ ಈಗಾಗಲೇ ಕೆಲವು ಯಶಸ್ವಿ ಕಂಡಿರುವ ಕಾಂಗ್ರೆಸ್ ಮತ್ತೆ ಕೆಲವರಿಗೆ ಗಾಳ ಹಾಕಲು ಮುಂದಾಗಿದೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಪಕ್ಷಕ್ಕೆ ಬಂದಿರುವ ಶೇಕಡವಾರು ಮತ ಸಂಖ್ಯೆಗಿಂತ ಲೋಕಸಭಾ ಚುನಾವಣೆಯಲ್ಲಿ ಶೇಕಡಾ 5ರಷ್ಟು ಹೆಚ್ಚು ಮತ ಪಡೆದರೆ ತಮ್ಮ ಗುರಿ 20 ಸ್ಥಾನಗಳನ್ನು ಮುಟ್ಟಬಹುದಾಗಿದೆ. ಕಾಂಗ್ರೆಸ್ ವರಿಷ್ಠರು ನೀಡಿರುವ ಗುರಿ ಮುಟ್ಟಲು ರಾಜ್ಯ ನಾಯಕರು ಆಪರೇಷನ್ ಹಸ್ತಕ್ಕೆ ಮುಂದಾಗಿದ್ದಾರೆ.

ಮೈಸೂರು–ತಿ.ನರಸೀಪುರ ರಾಷ್ಟ್ರೀಯ ಹೆದ್ದಾರಿ ತ್ವರಿತವಾಗಿ ಅಭಿವೃದ್ಧಿಪಡಿಸಿ

ಎನ್‌ಹೆಚ್‌ಎಐ ಅಧಿಕಾರಿಗಳಿಗೆ ಸಂಸದ ಪ್ರತಾಪ್ ಸಿಂಹ ಸೂಚನೆ



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಶನಿವಾರ ಸಂಸದ ಪ್ರತಾಪ್ ಸಿಂಹ ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಹೆಚ್‌ಎಐ)ದ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಮೈಸೂರು,ಸೆ.2(ಆರ್‌ಕೆ)– ಮೈಸೂರು–ತಿ.ನರಸೀಪುರ ನಡುವಿನ ರಾಷ್ಟ್ರೀಯ ಹೆದ್ದಾರಿ 766 ಅನ್ನು ಅಭಿವೃದ್ಧಿಪಡಿಸುವ ಕಾಮಗಾರಿ ತ್ವರಿತಗೊಳಿಸಿ, ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಸಂಸದ ಪ್ರತಾಪ್ ಸಿಂಹ ಅಧಿಕಾರಿಗಳಿಗೆ ಇಂದಿಲ್ಲಿ ಸೂಚಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಶನಿವಾರ ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಹೆಚ್‌ಎಐ)ದ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಇತ್ತೀಚೆಗಷ್ಟೇ ಕುರುಬೂರು ಬಳಿ ತಿರುವಿನಲ್ಲಿ ಬಸ್ಸೊಂದು ಇನ್ನೋವಾ ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ಉತ್ತರ ಕರ್ನಾಟಕ ಭಾಗದ ಒಂದೇ ಕುಟುಂಬದ ಹಲವರು ಸಾವನ್ನಪ್ಪಿರುವ ಹಿನ್ನೆಲೆಯಲ್ಲಿ ಈ ಹೆದ್ದಾರಿಯಲ್ಲಿ ಬ್ಲಾಕ್ ಸ್ಪಾಟ್‌ಗಳನ್ನು ಗುರ್ತಿಸಿ, ಅಪಘಾತಗಳಾಗದಂತೆ ಕ್ರಮ ವಹಿಸಿ ಹೆದ್ದಾರಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವಂತೆ ಸೂಚಿಸಿದರು.

ರಸ್ತೆ ಗುಂಡಿ ಮುಚ್ಚಿ, ತಿರುವಿರುವೆಡೆ ಹಾಗೂ ಅಪಘಾತ ವಲಯಗಳಲ್ಲಿ ರಸ್ತೆ ವಿಭಜಕ ಅಳವಡಿಸುವುದು, ಡಾಂಬರೀಕರಣ ಕಾಮಗಾರಿಯನ್ನು ಇಂಜಿನಿಯರ್‌ಗಳು ಸ್ಥಳದಲ್ಲೇ ಇದ್ದು ವಿನ್ಯಾಸದಂತೆ ಹಾಗೂ ಗುಣಮಟ್ಟದಲ್ಲಿ ರಾಜಿಯಾಗದೇ ಅಭಿವೃದ್ಧಿಗೊಳಿಸಬೇಕು, ರಿಫ್ಲೆಕ್ಟರ್‌ಗಳನ್ನು ಅಳವಡಿಸಬೇಕು ಎಂದು ಸೂಚಿಸಿದರು.

ರಾಷ್ಟ್ರೀಯ ಹೆದ್ದಾರಿ 766ರ ಕೊಳ್ಳೇಗಾಲದಿಂದ ತಿ.ನರಸೀಪುರ–ಮೈಸೂರು–ನಂಜನಗೂಡು–ಗುಂಡ್ಲುಪೇಟೆ ಮಾರ್ಗವಾಗಿ 131 ಕಿ.ಮೀ. ರಸ್ತೆ ಅಭಿವೃದ್ಧಿಗಾಗಿ ತಾವು ಮತ್ತು ಚಾಮರಾಜನಗರ ಸಂಸದ ವಿ.ಶ್ರೀನಿವಾಸಪ್ರಸಾದ್ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿ 127 ಕೋಟಿ ರೂ. ಅನುದಾನ ತಂದಿದ್ದೇವೆ. ಅದು ಸದ್ಬಳಕೆಯಾಗಬೇಕೆಂದರೆ ಅಧಿಕಾರಿಗಳು ಆಸಕ್ತಿ ವಹಿಸಿ ಕೆಲಸ ಮಾಡಿಸಬೇಕು ಎಂದರು.

ಕಾಮಗಾರಿಯನ್ನು ತ್ವರಿತಗೊಳಿಸಿ ದಸರಾ ಮಹೋತ್ಸವದೊಳಗಾಗಿ ಮುಗಿಸಿದರೆ ಪ್ರವಾಸಿಗರಿಗೆ ಸಂಚರಿಸಲು ಅನುಕೂಲವಾಗುತ್ತದೆ. ಈ ಹೆದ್ದಾರಿ ಅಭಿವೃದ್ಧಿಗೊಳಿಸಿ ಡಾಂಬರೀಕರಣಗೊಳಿಸುವತ್ತ ತಮ್ಮ ಗಮನಹರಿಸಿ ಎಂದು ಸಂಸದ ಪ್ರತಾಪ್ ಸಿಂಹ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಸಭೆಯಲ್ಲಿ ನಿರ್ದೇಶನ ನೀಡಿದರು.

> ಮೈಸೂರಿನ ರಿಂಗ್ ರೋಡ್ ಜಂಕ್ಷನ್‌ನಿಂದ ವರುಣ ಸಮೀಪದ ದೊಡ್ಡ ಆಲದಮರದವರೆಗೆ ಹಲವು ಅಪಘಾತಗಳು ಸಂಭವಿಸಿರುವುದರಿಂದ ಆ ಭಾಗವನ್ನು ಬ್ಲಾಕ್‌ಸ್ಪಾಟ್ ಎಂದು ಗುರ್ತಿಸಲಾಗಿದೆ. ಅಲ್ಲಿಯವರೆಗೆ ವಿಭಜಕ ಅಳವಡಿಸಿ ಜೋಡಿರಸ್ತೆಯನ್ನಾಗಿ ಮಾಡುವುದು, ಎಲ್ಲೆಲ್ಲಿ ಅಪಘಾತ ವಲಯಗಳಿವೆಯೋ ಅಲ್ಲಿ ಮುಂಜಾಗ್ರತಾ ಕ್ರಮ ಕೈಗೊಂಡು ಈ ರಾಷ್ಟ್ರೀಯ ಹೆದ್ದಾರಿ 766 ಅನ್ನು ಸಮಗ್ರ ಅಭಿವೃದ್ಧಿಗೊಳಿಸಲಾಗುತ್ತಿದೆ.
> **–ಪ್ರತಾಪ್ ಸಿಂಹ, ಸಂಸದ, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ**

ತಮಿಳುನಾಡಿಗೆ ನೀರು ನಿಲ್ಲಿಸುವುದು; ರಾಜ್ಯವನ್ನು ಬರಪೀಡಿತ ಪ್ರದೇಶವೆಂದು ಘೋಷಿಸಲು ಆಗ್ರಹಿಸಿ ಸೆ.5ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ರೈತಸಂಘ ಪ್ರತಿಭಟನೆ



ಮೈಸೂರು, ಸೆ.2(ಎಂಟಿವೈ)– ರಾಜ್ಯವನ್ನು ಕೂಡಲೇ ಬರಪೀಡಿತ ಪ್ರದೇಶ ಎಂದು ಘೋಷಣೆ ಮಾಡುವುದರೊಂದಿಗೆ ತಮಿಳುನಾಡಿಗೆ ಕಾವೇರಿ ನೀರು ಬಿಡುವುದನ್ನು ನಿಲ್ಲಿಸುವಂತೆ ಆಗ್ರಹಿಸಿ ಸೆ.5ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ರೈತಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದ್ದಾರೆ.


ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರ ಈ ವೇಳೆ ರೈತರನ್ನು ರಕ್ಷಿಸಬೇಕು. ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ರೈತರ ಸಾಲ ವಸೂಲಾತಿಗೆ ತಡೆ ನೀಡಬೇಕು. ಕಬ್ಬು ಬೆಳೆಗಾರರ ಸಮಸ್ಯೆ ಬಗೆಹರಿಸಬೇಕು. ತಮಿಳುನಾಡಿಗೆ ನೀರು ಬಿಡುವುದನ್ನು ಕೂಡಲೇ ನಿಲ್ಲಿಸಿ, ಈ ಕುರಿತ ಆದೇಶದ ಬಗ್ಗೆ ಮರುಪರಿಶೀಲನಾ ಅರ್ಜಿ ಸಲ್ಲಿಸಿ, ಹೊಸ ಸಂಕಷ್ಟ ಸೂತ್ರಕ್ಕೆ ರಾಜ್ಯ ಸರ್ಕಾರ ಕೋರಬೇಕು. ಕಾವೇರಿ ಕುರಿತಂತೆ ಕರ್ನಾಟಕ ಹಾಗೂ ತಮಿಳುನಾಡು ನಡುವೆ ದೀರ್ಘಾವಧಿ ವಿವಾದ ಇರುವ ಕಾರಣ ಕೇಂದ್ರ ಸರ್ಕಾರ ಈಗಲೂ ಮಧ್ಯ ಪ್ರವೇಶಿಸಬೇಕೆಂದು ಒತ್ತಾಯಿಸಿದರು.

ಕೇಂದ್ರ ಸರ್ಕಾರ ಬರದ ಪರಿಸ್ಥಿತಿ ಕುರಿತಂತೆ ರಾಜ್ಯ ಸರ್ಕಾರದ ಶಿಫಾರಸು ಒಪ್ಪಬೇಕು. ಈ ಹಿಂದೆ ವಿಧಿಸಿರುವ ಮಾನದಂಡ ಮಾರ್ಪಡಿಸಬೇಕು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕಾವೇರಿ ಜಲ ಪ್ರಾಧಿಕಾರಕ್ಕೆ ಪುನರ್ ಪರಿಶೀಲನಾ ಅರ್ಜಿ ಹಾಕುವುದಾಗಿ ಹೇಳಿದ್ದಾರೆ. ಇಷ್ಟರಲ್ಲೇ ಈ ಕೆಲಸ ಮಾಡಬೇಕಾಗಿತ್ತು. ಇದರೊಡನೆ ಕೇಂದ್ರದ ತಜ್ಞರು ರಾಜ್ಯಕ್ಕೆ ಭೇಟಿ ನೀಡಿ, ಪರಾಮರ್ಶಿಸಿ ರಾಜ್ಯದ ರೈತರ ಹಿತ ಕಾಯಬೇಕು ಎಂದು ಆಗ್ರಹಿಸಿದರು.

ಈ ಮೊದಲು ಕಟ್ಟು ಪದ್ಧತಿಯಲ್ಲಿ ನೀರು ಬಿಡುವುದಾಗಿ ತಿಳಿಸಿದ್ದ ಕಾರಣ ರೈತರು ಭತ್ತ ಬಿತ್ತನೆ ಮಾಡಿದ್ದಾರೆ. ಆದರೆ ನೀರು ಬಿಡದಿರಲು ತೀರ್ಮಾನಿಸಲಾಗಿದೆ ಎಂದು ತಿಳಿದು ಬಂದಿದೆ. ಇದರಿಂದ ಸರ್ಕಾರ ರೈತರಿಗೆ ಪ್ರತಿ ಎಕರೆಗೆ 25 ಸಾವಿರ ರೂ. ಪರಿಹಾರ ನೀಡಬೇಕು. ಇದಲ್ಲದೆ, ಕಿರು ನೀರಾವರಿಗೆ ಕರ್ನಾಟಕ ಹಾಗೂ ತಮಿಳುನಾಡು ಸರ್ಕಾರಗಳು ಮುಂದಾಗಬೇಕು. ಇದರಿಂದಾಗಿ ಕೆರೆ, ಕಟ್ಟೆ, ತೊರೆ ಉಳಿಸಿಕೊಳ್ಳುವುದರೊಂದಿಗೆ ಅಂತರ್ಜಲ ವೃದ್ಧಿಯಾಗುತ್ತದೆ. ಅಲ್ಲದೆ, ಕುಡಿಯುವ ನೀರು, ಜಾನುವಾರುಗಳು ಕುಡಿಯುವ ನೀರಿಗಾಗಿ ನದಿ ನೀರು ಅವಲಂಬಿಸುವುದು ತಪ್ಪಲಿದೆ ಎಂದು ಬಡಗಲಪುರ ನಾಗೇಂದ್ರ ಸಲಹೆ ನೀಡಿದರು.

ಕಾವೇರಿ ವಿವಾದ ಇನ್ನಷ್ಟು ಉಲ್ಬಣಿಸುವ ಎಲ್ಲ ಲಕ್ಷಣಗಳೂ ಇವೆ. ಪ್ರಕೃತಿಗೆ ಸಂಬಂಧಿಸಿದಂತೆ ಯಾವುದೇ ನಿಖರ ನಿರ್ಧಾರ ಕೈಗೊಳ್ಳುವುದು ಸಾಧ್ಯವಿಲ್ಲ. ನಗರ, ಪಟ್ಟಣಗಳಲ್ಲಿನ ಜನಸಂಖ್ಯೆಯೂ ಹೆಚ್ಚಾಗುತ್ತಿದೆ. ಈ ಕಾರಣದಿಂದಾಗಿ ಇಂತಿಷ್ಟೇ ನೀರು ಸದಾ ಕಾಲ ಅಗತ್ಯವಾಗಿರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಆದ್ದರಿಂದ ನೀರಿನ ಬಗ್ಗೆ ನೀತಿಯೊಂದನ್ನು ರೂಪಿಸಬೇಕು. ಬರ ಪರಿಸ್ಥಿತಿ ಎದುರಾಗುವ ಬಗ್ಗೆ ಮೊದಲೇ ರೈತಸಂಘ ಎಚ್ಚರಿಸಿತ್ತು. ಆದರೆ ರಾಜ್ಯ ಸರ್ಕಾರ ಈ ಬಗ್ಗೆ ಗಮನಹರಿಸಲಿಲ್ಲ. ಚುನಾವಣೆ ಮುಗಿದ ಬಳಿಕ ಯಾವುದೇ ಪಕ್ಷವಾದರೂ ಈ ಬಗ್ಗೆ ಇಚ್ಛಾಶಕ್ತಿ ಪ್ರದರ್ಶಿಸದಿರುವುದೇ ಇದಕ್ಕೆ ಕಾರಣವಾಗಿದೆ. ಈ ಬಾರಿ ನೀರಿನ ಕೊರತೆಯುಂಟಾಗಲಿದೆ. ಹೀಗಾಗಿ ಕಡಿಮೆ ನೀರು ಅಗತ್ಯವಿರುವ ಬೆಳೆ ಬೆಳೆಯಲು ರೈತರಲ್ಲಿ ಜಾಗೃತಿ ಮೂಡಿಸಬಹುದಾಗಿತ್ತು. ರೈತರು ಹೆಚ್ಚು ನೀರು ಅಗತ್ಯವಾಗಿರುವ ಬೆಳೆ ಬೆಳೆದು ಈಗ ನೀರು ಕೊರತೆಯಿಂದ ಬೆಳೆ ಕಳೆದುಕೊಳ್ಳುವ ಭೀತಿ ಎದುರಿಸುತ್ತಿದ್ದಾರೆ. ಈಗ ರೈತರಿಗೆ ಅಪಾರ ನಷ್ಟವಾಗುವ ಸಾಧ್ಯತೆ ಇದ್ದು, ಸರ್ಕಾರ ಪರಿಹಾರ ನೀಡಬೇಕೆಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ರೈತ ಮುಖಂಡರಾದ ಪ್ರಸನ್ನಗೌಡ, ಪಿ.ಮರಂಕಯ್ಯ, ಮಂಡಕಳ್ಳಿ ಮಹೇಶ್ ಉಪಸ್ಥಿತಿದ್ದರು.

ಸಾಧಕರಿಗೆ ಶ್ರೀ ವಾಸುದೇವ ಮಹಾರಾಜ್ ಸದ್ಭಾವನಾ ಪ್ರಶಸ್ತಿ



ಮೈಸೂರು,ಸೆ.2(ಎಸ್‌ಪಿಎನ್)–ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್ ವತಿಯಿಂದ ಶ್ರೀ ವಾಸುದೇವ ಮಹಾರಾಜ್ ಸದ್ಭಾವನಾ ಪ್ರಶಸ್ತಿಯನ್ನು ವಿವಿಧ ಕ್ಷೇತ್ರದ ಸಾಧಕರಿಗೆ ವಿಧಾನಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಶನಿವಾರ ಪ್ರದಾನ ಮಾಡಿದರು.

ಮೈಸೂರಿನ ನಮನ ಕಲಾ ಮಂಟಪದಲ್ಲಿ ನಡೆದ ಸಮಾರಂಭದಲ್ಲಿ ಎಂ.ಮೋಹನ್ (ದತ್ತ ಕ್ರಿಯಾ ಯೋಗ), ಅಂಶಿ ಪ್ರಸನ್ನಕುಮಾರ್ (ಪತ್ರಿಕಾರಂಗ), ಮಂಜುಳಾ ಉಮೇಶ್ (ಸಾಹಿತ್ಯ), ಎಂ.ಪಿ.ಪ್ರಭುಸ್ವಾಮಿ (ಸಮಾಜ ಸೇವೆ), ಸಾಂಬಮೂರ್ತಿ (ಗಾಯನ), ಭೂಮಿಪುತ್ರ ಚಂದನಗೌಡ (ಮಣ್ಣಿನ ಸೇವೆ), ಜೀವಧಾರ ರಕ್ತನಿಧಿ ಕೇಂದ್ರ (ಉತ್ತಮ ಸಂಸ್ಥೆ), ಸುಪ್ರೀತ್ (ಸಿನಿಮಾ ಕ್ಷೇತ್ರ) ಅವರಿಗೆ ಪ್ರದಾನ ಮಾಡಿದರು.

ನಂತರ ಶಾಸಕ ಡಾ.ಡಿ.ತಿಮ್ಮಯ್ಯ ಮಾತನಾಡಿ, ಎಲೆಮರೆ ಕಾಯಿಯಂತೆ ಕೆಲಸ ಮಾಡುತ್ತಿರುವ ವಿವಿಧ ಕ್ಷೇತ್ರದ ಸಾಧಕರನ್ನು ಶ್ರೀವಾಸುದೇವ ಮಹಾರಾಜ್ 16ನೇ ಆರಾಧನಾ ಮಹೋತ್ಸವ ಸಂದರ್ಭದಲ್ಲಿ ಅವರ ಹೆಸರಿನಲ್ಲಿ ಸದ್ಭಾವನಾ ಪ್ರಶಸ್ತಿಗೆ ಆಯ್ಕೆ ಮಾಡಿರುವುದು ಉತ್ತಮ ಬೆಳವಣಿಗೆ ಎಂದರು.

ಎಂ.ಮೋಹನ್ ಅವರು, ಯೋಗದಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಕಳೆದ 30 ವರ್ಷಕ್ಕೂ ಹೆಚ್ಚು ಪತ್ರಕರ್ತರಾಗಿ ಕೆಲಸ ಮಾಡಿರುವ ಅಂಶಿ ಪ್ರಸನ್ನಕುಮಾರ್, ಹೀಗೆ ಬಹುತೇಕರು ಆಯಾಯ ಕ್ಷೇತ್ರದಲ್ಲಿ ಉತ್ತಮ ಕೆಲಸ ಮಾಡಿದ್ದಾರೆ. ಇನ್ನು ಮುಂದೆಯು ಹೀಗೆ ಹೆಚ್ಚು, ಹೆಚ್ಚು ಜನರ ಸೇವೆ ಮಾಡಲು ಉತ್ತೇಜನ ನೀಡಬೇಕು ಎಂದರು.

ವಿಪ್ರ ಮುಖಂಡ ಕೆ.ರಘುರಾಂ ವಾಜಪೇಯಿ ಮಾತನಾಡಿ, ಸಾಧಕರನ್ನು ಗುರುತಿಸುವುದು ಸಂಘಟನೆಗಳ ಜವಾಬ್ದಾರಿ. ಸಾಧಕರು ತಮ್ಮ ಕ್ಷೇತ್ರದಲ್ಲಿ ಗೊತ್ತಿಲ್ಲದೆ, ಜನರ ನಡುವೆ ಬಂದಿರುತ್ತಾರೆ. ಎಲ್ಲರ ನಡುವೆ ಅವರವರ ಕೆಲಸ ಮಾಡಿಕೊಂಡು ಹೋಗುತ್ತಿರುತ್ತಾರೆ. ಆದರೆ, ಇಂತಹ ಸಾಧಕರನ್ನು ಹುಡುಕಿ ಸನ್ಮಾನಿಸುತ್ತಿರುವ ಶ್ರೀ ವಾಸುದೇವ ಮಹಾರಾಜರ ಆರಾಧನಾ ಮಹೋತ್ಸವ ಪದಾಧಿಕಾರಿಗಳ ಕಾರ್ಯಕ್ರಮ ಮೆಚ್ಚುಗೆ ವಿಷಯ ಎಂದರು. ಈ ವೇಳೆ ಸಂಸ್ಕೃತಿ ಚಿಂತಕ ಡಾ.ಗುರುರಾಜ ಪೋಶೆಟ್ಟಿಹಳ್ಳಿ, ಫೌಂಡೇಷನ್ ಅಧ್ಯಕ್ಷ ಎಂ.ವಿ.ನಾಗೇಂದ್ರಬಾಬು, ಸಂಚಾಲಕ ಎನ್.ಅನಂತ, ಸಾಮಾಜಿಕ ಕಾರ್ಯಕರ್ತ ವಿಕ್ರಂ ಅಯ್ಯಂಗಾರ್ ಉಪಸ್ಥಿತರಿದ್ದರು.

ಪರಿಸರ ಸ್ನೇಹಿ ಮಣ್ಣಿನ ಗಣೇಶ ಪೂಜಿಸಿ





ಮೈಸೂರು ಜಿಲ್ಲಾಧಿಕಾರಿ ಡಾ.ರಾಜೇಂದ್ರ ಸಲಹೆ

ಮೈಸೂರು,ಸೆ.2–ಗೌರಿ ಗಣೇಶ ಹಬ್ಬದಲ್ಲಿ ನಗರದಲ್ಲಿ ಪಿ.ಓ.ಪಿ (ಪ್ಲಾಸ್ಟರ್ ಆಫ್ ಪ್ಯಾರಿಸ್) ಗಣೇಶನ ಬಳಕೆ ನಿಷೇಧಿಸಿದ್ದು, ಮಣ್ಣಿನಿಂದ ಮಾಡಿದ ಗಣಪತಿ ಮೂರ್ತಿಗಳನ್ನು ಬಳಕೆ ಮಾಡಿ ಪರಿಸರ ಸ್ನೇಹಿ ಹಬ್ಬವನ್ನು ಆಚರಿಸಿ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹಮ್ಮಿಕೊಂಡಿದ್ದ, ಗೌರಿ–ಗಣೇಶ ಹಬ್ಬದ ಪೂರ್ವಭಾವಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಅವರು, ಗೌರಿ ಗಣೇಶ ಹಬ್ಬದ ಸಂದರ್ಭದಲ್ಲಿ ಜಿಲ್ಲೆಯ ವಿವಿಧ ಕಡೆಗಳಲ್ಲಿ ಗಣೇಶನ ಮೂರ್ತಿ ಪ್ರತಿಷ್ಠಾಪನೆ ಮಾಡುವುದನ್ನು ನಾವು ಕಾಣಬಹುದಾಗಿದೆ. ಪಿಓಪಿ ಬಳಕೆ ಮಾಡಿರುವ ಗಣಪತಿ ಮೂರ್ತಿಗಳ ತಯಾರಿಕೆ ಮತ್ತು ಮಾರಾಟ ಮಾಡುವುದು ಕಂಡು ಬಂದರೆ ತಕ್ಷಣ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದರು.

ಕಳೆದ ಬಾರಿ ಪಿ.ಓ.ಪಿ. ಗಣೇಶ ಮೂರ್ತಿಗಳನ್ನು ತಯಾರಿ ಮಾಡಿರುವ ಕಡೆಗಳಲ್ಲಿ ಈ ಬಾರಿಯೂ ಕೂಡ ಪರಿಶೀಲಿಸಿ ತಯಾರಿಕೆ ಆಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಪಿ.ಓ.ಪಿ ಗಣೇಶನ ಮೂರ್ತಿಗಳ ತಯಾರಿಕೆ ಮತ್ತು ಮಾರಾಟಗಳು ಕಂಡು ಬಂದಲ್ಲಿ ಸಾರ್ವಜನಿಕರು ಸಂಬಂಧಿತ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕಾಯ್ದೆ ಅನ್ವಯ ಮಾರಾಟಗಾರರು ಮತ್ತು ತಯಾರಕರ ವಿರುದ್ಧ ಸೂಕ್ತ ಕ್ರಮವನ್ನು ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ನಗರ, ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ವಾಹನಗಳಲ್ಲಿ ಪರಿಸರ ಸ್ನೇಹಿ ಗಣೇಶ ಹಬ್ಬಕ್ಕೆ ಪ್ರಚಾರ ನೀಡಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು. ಗಣೇಶ ಮೂರ್ತಿಗಳ ಮಾರಾಟ ಮಳಿಗೆಗಳನ್ನು ನಮ್ಮ ಅಧಿಕಾರಿ ವರ್ಗದವರು ಪರಿಶೀಲನೆ ನಡೆಸಬೇಕು ಹಾಗೂ ಮಾರಾಟ ಮಳಿಗೆಯಲ್ಲಿ ಪಿ.ಓ.ಪಿ ಗಣೇಶ ಮೂರ್ತಿಗಳನ್ನು ಮಾರಾಟ ಮಾಡಿದಲ್ಲಿ ಅಂತವರ ವಿರುದ್ಧ ಕ್ರಮ ಕೈಗೊಂಡು ನೀಡಿರುವ ಲೈಸೆನ್ಸ್ ರದ್ದು ಮಾಡಿ ಹಿಂಪಡೆಯಬೇಕು. ನಗರ–ತಾಲೂಕು ವ್ಯಾಪ್ತಿಗಳಲ್ಲಿ ವರ್ತಕರ ಸಂಘಗಳ ಜೊತೆಗೂಡಿ ಸಭೆ ನಡೆಸಿ ಪಿ.ಓ.ಪಿ ಮೂರ್ತಿಗಳನ್ನು ತಯಾರಿಸಿ ಮಾರಾಟ ಮಾಡದಂತೆ ಜಾಗೃತಿ ಮೂಡಿಸಿ ಎಂದರು.

ವಿಸರ್ಜನೆಗೆ ವ್ಯವಸ್ಥೆ: ಮಹಾನಗರ ಪಾಲಿಕೆ, ಪುರಸಭೆ ಮತ್ತು ನಗರಸಭೆ ಮಟ್ಟದಲ್ಲಿ ಮೊಬೈಲ್ ಟ್ಯಾಂಕರ್ ವ್ಯವಸ್ಥೆ ಮಾಡಿ, ಗಣಪತಿ ವಿಸರ್ಜನೆಗೆ ಅವಕಾಶ ನೀಡಬೇಕು. ಮಣ್ಣಿನಿಂದ ಪರಿಸರ ಸ್ನೇಹಿ ಗಣಪತಿ ಮೂರ್ತಿಗಳ ನಿರ್ಮಾಣ ಮಾಡುವವರಿಗೆ ಹೆಚ್ಚಿನ ಪ್ರೋತ್ಸಾಹ ನೀಡಿ ಪಾಲಿಕೆ ವ್ಯಾಪ್ತಿಯಲ್ಲಿ ಉಚಿತ ಸ್ಥಳವನ್ನು ನೀಡಿ. ಈ ಕುರಿತು ವ್ಯಾಪಕ ಪ್ರಚಾರವನ್ನು ನೀಡಿ ಸ್ಥಳೀಯರಿಗೆ ಮಣ್ಣಿನ ಗಣಪತಿ ಮೂರ್ತಿಗಳನ್ನು ದೊರಕುವಂತೆ ಮಾಡಿ ಎಂದು ತಿಳಿಸಿದರು.

ಮಣ್ಣಿನ ಗಣಪತಿ ವಿಸರ್ಜನೆ ಮಾಡಲು ಕೆರೆ ಕಟ್ಟೆಗಳ ಬಳಿ ಹೊಂಡವನ್ನು ನಿರ್ಮಿಸಿ ವಿಸರ್ಜನೆಗೆ ಅವಕಾಶ ಮಾಡಿಕೊಡಿ. ವಿಸರ್ಜನೆ ವೇಳೆ ಮೂರ್ತಿಗಳಿಗೆ ಬಳಕೆ ಮಾಡಿರುವ ಅಲಂಕಾರಿಕ ಪ್ಲಾಸ್ಟಿಕ್ ವಸ್ತುಗಳನ್ನು ಸಂಗ್ರಹಿಸಿ ಸೂಕ್ತ ಸ್ಥಳದಲ್ಲಿ ವಿಲೇವಾರಿ ಮಾಡಬೇಕು. ಗಣೇಶ ಮೂರ್ತಿ ಕೂರಿಸುವ ಜಾಗಗಳಲ್ಲಿ ಶಬ್ದಮಾಲಿನ್ಯ ಆಗದಂತೆ ಕ್ರಮ ವಹಿಸಬೇಕು ಮತ್ತು ಧ್ವನಿವರ್ಧಕಗಳನ್ನು ಅಳವಡಿಸಲು ಸಂಬಂಧಿತ ಅಧಿಕಾರಿಗಳಿಂದ ಅನುಮತಿಯನ್ನು ಪಡೆಯಬೇಕು. ರಾತ್ರಿ 10ರಿಂದ ಬೆಳಗ್ಗೆ 6 ಗಂಟೆವರೆಗೆ ಯಾವುದೇ ರೀತಿ ಭಕ್ತಿಗೀತೆ ಅಥವಾ ಗೀತಾ ಗಾಯನಗಳನ್ನು ಪ್ರಚಾರ ಮಾಡದಂತೆ ಸೂಚಿಸಬೇಕು ಎಂದರು.

4ರಿಂದ 5 ಅಡಿ ಒಳಗೆ ಗಣಪತಿ ಮೂರ್ತಿಗಳನ್ನು ಬಳಕೆ ಮಾಡುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು. ಗಣಪತಿ ಮೂರ್ತಿ ವಿಚಾರಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿ ಮತ್ತು ನಗರಸಭೆಗಳ ವ್ಯಾಪ್ತಿಯಲ್ಲಿ ಬೈಲಾಗಳನ್ನು ಬಳಕೆ ಮಾಡಿಕೊಂಡು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ತಯಾರಿಕೆ ಸಂದರ್ಭದಲ್ಲಿ ಬಣ್ಣ ಲೇಪಿತ ವಿಗ್ರಹಗಳು ಹೆಚ್ಚು ಬಳಕೆಯಲ್ಲಿರುತ್ತವೆ. ಅಂತಹ ಮೂರ್ತಿಗಳ ಬಳಕೆ ಮಾಡದಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು ಎಂದರು.

ಸಭೆಯಲ್ಲಿ ಉಪಪೊಲೀಸ್ ಆಯುಕ್ತೆ ಎಸ್.ಜಾಹ್ನವಿ, ಉಪವಿಭಾಗಾಧಿಕಾರಿ ರಕ್ಷಿತ್, ಪರಿಸರ ಅಧಿಕಾರಿ ಶುಭ, ಮಾಲಿನ್ಯ ನಿಯಂತ್ರಣ ಮಂಡಳಿಯ ಹರೀಶ್ ಶಂಕರ್, ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

> ನಿಯಮಾವಳಿಗಳನ್ನು ಅನುಸರಿಸದೆ ಇದ್ದಲ್ಲಿ ಅಂತಹವರ ವಿರುದ್ಧ ಮಾಲಿನ್ಯ ನಿಯಂತ್ರಣ ಕಾಯ್ದೆ ಅನ್ವಯ ಶಿಸ್ತು ಕ್ರಮ ಜರುಗಿಸಿ ದಂಡ ವಿಧಿಸಲಾಗುವುದು. ಧಾರ್ಮಿಕ ಆಚರಣೆಗಳಿಗೆ ಧಕ್ಕೆ ಬರದಂತೆ ಜಾಗೃತಿಯಿಂದ ಹಬ್ಬವನ್ನು ಆಚರಿಸಿ. ಪಾಲಿಕೆ ಮತ್ತು ತಾಲೂಕು ವ್ಯಾಪ್ತಿಗಳಲ್ಲಿ ಗಣಪತಿ ವಿಸರ್ಜನೆಗೆ ಮೊಬೈಲ್ ಟ್ಯಾಂಕ್ ವ್ಯವಸ್ಥೆಯಿದ್ದಲ್ಲಿ ಉಪಯೋಗಿಸಿಕೊಳ್ಳಿ. ಏಕಬಳಕೆ ಪ್ಲಾಸ್ಟಿಕ್ ಸಂಪೂರ್ಣ ನಿಷೇಧಿಸಲಾಗಿದ್ದು, ಬಳಕೆಗಳು ಕಂಡುಬಂದಲ್ಲಿ ತಕ್ಷಣ ಕ್ರಮ ಜರುಗಿಸಿ, ದಂಡ ವಿಧಿಸಿ. **–ಡಾ.ಕೆ.ವಿ.ರಾಜೇಂದ್ರ, ಡಿಸಿ.**

ನಕ್ಕರೆ ಅದೇ ಸ್ವರ್ಗ

ಅವರು : (ಸ್ಯಾರಿ ಅಂಗಡಿಯ ಮುಂದೆ ನಿಂತಿದ್ದವರಿಗೆ) "ಬೆಳಗ್ಗೆಯಿಂದ ಸಂಜೆಯಾದರೂ ನಿಂತಿದ್ದೀರಲ್ಲಾ ಏಕೆ?"

ಇವರು : "ಯಾಕೆ ಅಂತ ಕೇಳ್ತೀರಾ? ನನ್ನ ಹೆಂಡತಿ ಒಳಗೆ ಶಾಪಿಂಗ್ ಮಾಡ್ತಿದ್ದಾಳೆ"

ಮೈಸೂರು ಮಿತ್ರ

ಭಾನುವಾರ, 3 ಸೆಪ್ಟೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಯಾವತ್ತೂ ಕೆಳಗೆ ಬೀಳದೆ ಇರುವುದರಲ್ಲಿ ನಮ್ಮ ಕೀರ್ತಿ ಅಡಗಿಲ್ಲ. ಆದರೆ ಬಿದ್ದ ತಕ್ಷಣ ಮೇಲೇಳುವುದರಲ್ಲಿ ಅಡಗಿದೆ –ಆಲಿವರ್ ಗೋಲ್ಡ್‌ಸ್ಮಿತ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಾತು ಚಿಕ್ಕದಿರಲಿ, ಕೆಲಸ ಚೊಕ್ಕವಾಗಿರಲಿ

ನಿಮ್ಮ ಪತ್ರಗಳು

ಕಾವೇರಿ ಜಲ ವಿವಾದಕ್ಕೆ ಕೊನೆ ಎಂದು?

ಮಾನ್ಯರೆ,

ಕನ್ನಡ ನಾಡಿನ ಜೀವನದಿ ನಮ್ಮ ಕಾವೇರಿಯ ವಿವಾದ ಎಂದಿಗೆ ಕೊನೆಯಾಗುತ್ತದೆ ತಿಳಿದವರ್ಯಾರು? ಭವಿಷ್ಯ ಆ ಭಗವಂತನಿಗೂ ಸಹ ಗೊತ್ತಿಲ್ಲವೇನೊ. ನಮ್ಮ ಮೈಸೂರು ಸಂಸ್ಥಾನದ ದೊರೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕನಸಿನ ನಮ್ಮ ಕನ್ನಂಬಾಡಿ ಕಟ್ಟೆಗೆ ಮುಕ್ತಿ ಎಂದು ಸಿಗುತ್ತದೆ. ಈ ತಮಿಳರ ಮೊಂಡುತನ ಎಂದಿಗೆ ಕೊನೆಯಾಗುತ್ತದೆ ಎಂಬುದು ಪ್ರತಿಯೊಬ್ಬ ಕನ್ನಡಿಗರ ಪ್ರಶ್ನೆಯಾಗಿದೆ ಎಂದರೆ ತಪ್ಪಾಗಲಾರದು. 1924 ರಲ್ಲಿ ಆಗಿದ್ದ ಒಪ್ಪಂದವು 50 ವರ್ಷಗಳ ನಂತರ 1974 ರಲ್ಲಿ ಮುಕ್ತಾಯವಾಗಿದ್ದರೂ ತಮಿಳುನಾಡಿನ ಕುತಂತ್ರಿ ರಾಜಕಾರಣಿಗಳು ಇಂದಿಗೂ ತಮ್ಮ ಬೇಳೆಯನ್ನು ಬೇಯಿಸಿಕೊಳ್ಳಲು ತುದಿಗಾಲಿನಲ್ಲಿ ನಿಂತಿರುವುದು ತುಂಬಾ ಖೇದಕರ ಸಂಗತಿಯಾಗಿದೆ.

ತಮಿಳುನಾಡಿನ ರಾಜಕಾರಣಿಗಳಿಗೆ, ಅಧಿಕಾರಿ ವರ್ಗದವರಿಗೆ ಮತ್ತು ಸಾಮಾನ್ಯ ಜನರಲ್ಲಿ ಇರುವ ಹೋರಾಟದ ಮನೋಭಾವ ಹಾಗೂ ಬದ್ಧತೆ ನಮ್ಮ ರಾಜ್ಯದ ರಾಜಕಾರಣಿಗಳಿಗೆ, ಅಧಿಕಾರಿ ವರ್ಗದವರಿಗೆ ಹಾಗೂ ಸಾಮಾನ್ಯ ಜನರಲ್ಲಿ ಇರುವ ಹೋರಾಟದ ಮನೋಭಾವ ಹಾಗೂ ಬದ್ಧತೆ ಕಡಿಮೆಯಾಗಿದೆಯಾ ಅಂತ ಅನಿಸದೆ ಇರುವುದಿಲ್ಲ. ಇನ್ನು ಮುಂದಾದರೂ ನಮ್ಮ ರಾಜ್ಯದ ಚುಕ್ಕಾಣಿ ಹಿಡಿದಿರುವ ಯಾವುದೇ ಪಕ್ಷದ ಮತ್ತು ಸರ್ಕಾರದ ಭಾಗವಾಗಿರುವ ಮುಖ್ಯಸ್ಥರು ಹೆಚ್ಚಿನ ಮುತುವರ್ಜಿ ವಹಿಸಿ ಪ್ರತಿಯೊಂದು ಹಂತದಲ್ಲೂ ಕಾನೂನು ತಜ್ಞರ ಹೆಗಲಿಗೆ ಹೆಗಲಾಗಿ, ವಿವಾದಕ್ಕೆ ಸಂಬಂಧಿಸಿದ ನೂರಾರು ವರ್ಷಗಳಿಂದ ಇರುವ ಕಡತಗಳನ್ನು ಸರಿಯಾದ ಸಮಯಕ್ಕೆ ಒದಗಿಸಿ, ಕೆಆರ್‌ಎಸ್‌ನಲ್ಲಿ ಇರುವ ನೀರಿನ ವಸ್ತುಸ್ಥಿತಿಯನ್ನು ಸುಪ್ರೀಂಕೋರ್ಟ್‌ಗೆ ಮನದಟ್ಟು ಮಾಡಲು ನೆರವಾಗಬೇಕು. ನಮ್ಮ ರಾಜ್ಯಕ್ಕೆ ಸಂಬಂಧಿಸಿದ ಯಾವುದೇ ಜಲವಿವಾದವೇ (ಮಹದಾಯಿ, ಕಾವೇರಿ, ಕೃಷ್ಣ) ಆಗಲಿ, ಇವುಗಳಿಗೆ ಸಂಬಂಧಿಸಿದಂತೆ ಜಲ ಸಂಪನ್ಮೂಲಕ್ಕೆ ಸಂಬಂಧಪಟ್ಟ ತಜ್ಞರನ್ನು (ರೈತರು, ಇಂಜಿನಿಯರ್‌ಗಳು, ಕಾನೂನು ತಜ್ಞರು, ಪರಿಸರವಾದಿಗಳು) ಒಳಗೊಂಡಂತೆ ಒಂದು ಪ್ರಾಧಿಕಾರವನ್ನು ರಚನೆ ಮಾಡಿ ಪ್ರಾಧಿಕಾರವು ಸೂಕ್ತವಾದ ಮಾಹಿತಿಯನ್ನು ಕಾನೂನು ತಜ್ಞರಿಗೆ ಪ್ರತಿಯೊಂದು ಹಂತದಲ್ಲೂ ಒದಗಿಸಿಕೊಡುವ ಮೂಲಕ ಕಾನೂನು ಹೋರಾಟಕ್ಕೆ ನೆರವಾಗುವುದು ಸೂಕ್ತ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.


ಮಂಗಳಮುಖಿಯರ ಹಾವಳಿ ತಪ್ಪಿಸಿ

ಮಾನ್ಯರೆ,

ಮಾನ್ಯ ಪೊಲೀಸ್ ಆಯುಕ್ತರೇ, ತಾವುಗಳು ಮೈಸೂರು ನಗರಕ್ಕೆ ಬಂದು ಹಲವು ತಿಂಗಳು ಕಳೆದು ಹೋಗಿವೆ. ಆದರೆ ತಾವು ನಿಷ್ಠಾವಂತ, ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿ ಎಂಬುದರಲ್ಲಿ ಎರಡು ಮಾತಿಲ್ಲ. ಹಾಗೂ ಮೈಸೂರು ನಗರದ ವ್ಯಾಪ್ತಿಯಲ್ಲಿ ಯಾವ ಯಾವ ಪೊಲೀಸ್ ಠಾಣೆಯ ಸರಹದ್ದಿನಲ್ಲಿ ಏನೇನು ಕಾರ್ಯ ಚಟುವಟಿಕೆಗಳು ನಡೆಯುತ್ತಿವೆ ಎಂಬೆಲ್ಲಾ ಮಾಹಿತಿ ತಮಗೆ ಗೊತ್ತಿರುವ ವಿಚಾರವೇ ಸರಿ. ಆದರೆ ಮೈಸೂರು ನಗರದ ಹೃದಯ ಭಾಗದಲ್ಲಿರುವ ಗ್ರಾಮಾಂತರ ಸಾರಿಗೆ ಬಸ್ ನಿಲ್ದಾಣದ ಎದುರುಗಡೆ ಇರುವ ಟ್ಯಾಕ್ಸಿ ಸ್ಟ್ಯಾಂಡ್ ಪಕ್ಕದಲ್ಲಿ ತಲೆ ಎತ್ತಿರುವ ಟಾಯ್ಲೆಟ್ ರೂಮ್ ಪಕ್ಕದಲ್ಲಿ ಪ್ರತಿನಿತ್ಯ ಮಂಗಳಮುಖಿಯರ ಹಾವಳಿ ಜಾಸ್ತಿಯಾಗಿದೆ. ಇಲ್ಲಿ ಪ್ರತಿ ರಾತ್ರಿ ಓಡಾಡುವ ಸಾರ್ವಜನಿಕರಿಗೆ ಹೆದರಿಸಿ ಬೆದರಿಸಿ ಅವರ ಮನಸೋ ಇಚ್ಛೆಯಂತೆ ಮೊಬೈಲ್, ಹಣ, ಮತ್ತಿತರ ವಸ್ತುಗಳನ್ನು ರಾಜಾರೋಷವಾಗಿ ದೋಚುತ್ತಿರುವುದು ಎಷ್ಟು ಸರಿ? ಇದನ್ನು ಖಂಡಿಸಿದ ಸಾರ್ವಜನಿಕರ ಪಾಡು ಮುಗಿದೇ ಹೋಯ್ತು ಇದನ್ನು ಕೇಳೋಕೆ ನೀನ್ಯಾರೋ ಸೂ.. ಮಗನೇ ಬೋ... ಮಗನೇ ಅಂತ ಅವನ ಕಪಾಳಮೋಕ್ಷ ಮಾಡಿದ್ದಲ್ಲದೆ ಇದಕ್ಕೆಲ್ಲಾ ಸಹಕಾರ ನೀಡುತ್ತಿರುವ ಪೊಲೀಸರಿಗೇ ನಾವು ವಸೂಲಿ ಕೊಡ್ತಿದ್ದೀವಿ ಅಂತ ಅವರು ಸಾರ್ವಜನಿಕವಾಗಿ ಹೇಳಿಕೊಂಡು, ನಜರ್‌ಬಾದ್ ಪೊಲೀಸ್ ಠಾಣೆಯ ಸಿಬ್ಬಂದಿ ವರ್ಗದವರ ಹೆಸರು ಹೇಳುತ್ತಿರುವುದು ತಮ್ಮ ಇಲಾಖೆಗೆ ನಾಚಿಕೆಗೇಡಿತನವಾಗಿ ಕಾಣಿಸುತ್ತಿದೆ. ಇದನ್ನು ನಾನು ಬಹಿರಂಗವಾಗಿ ವಿಡಿಯೋ ಮಾಡಿಕೊಂಡಾಗ ನನಗೂ ಇಂತಹದ್ದೆ ಸನ್ನಿವೇಶ ಎದುರಾಗಿ ನನ್ನ ಮೊಬೈಲ್ ಕಸಿದುಕೊಂಡು ನನಗೂ ಕೂಡ ಹಲ್ಲೆ ನಡೆಸಲು ಮುಂದಾಗಿರುತ್ತಾರೆ. ಇದರ ವಿಡಿಯೋ ತುಣುಕುಗಳು ನನ್ನ ಮೊಬೈಲ್‌ನಲ್ಲಿ ಆದಷ್ಟು ಸೆರೆ ಹಿಡಿದಿರುತ್ತೇನೆ, ಆದುದರಿಂದ ತಾವುಗಳು ದಯಮಾಡಿ ಇದಕ್ಕೆ ಪ್ರೋತ್ಸಾಹ ನೀಡುತ್ತಿರುವ ನಜರ್‌ಬಾದ್ ಪೊಲೀಸ್ ಠಾಣೆಯ ಸಿಬ್ಬಂದಿಗಳು ಹಾಗೂ ಮಂಗಳಮುಖಿಯರ ಅಟ್ಟಹಾಸಕ್ಕೆ ಕಡಿವಾಣ ಹಾಕಬೇಕೆಂದು ತಮ್ಮಲ್ಲಿ ಮನವಿ

–ಸಾಮಾಜಿಕ ಕಾರ್ಯಕರ್ತ, ಮೈಸೂರು

ಎಂ.ಎಸ್.ಗುರುಪಾದಸ್ವಾಮಿಯವರ ನಾಮಫಲಕದ ಲೋಪ ಸರಿಪಡಿಸಿ



ಮಾನ್ಯರೆ,

ಎಂ.ಎಸ್. ಗುರುಪಾದ ಸ್ವಾಮಿಯವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಅವರು 1942ರಲ್ಲಿ ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ಭಾಗವಹಿಸಿದ್ದರು. ಆ ಸಮಯದಲ್ಲಿ ಅವರು ಅಖಿಲ ಭಾರತ ವಿದ್ಯಾರ್ಥಿಗಳ ಒಕ್ಕೂಟದ ಸದಸ್ಯರಾಗಿದ್ದರು. ಭಾರತದ ಸ್ವಾತಂತ್ರ್ಯದ ನಂತರ, ಅವರು ಕಿಸಾನ್ ಮಜ್ದೂರ್ ಪ್ರಜಾ ಪಕ್ಷಕ್ಕೆ ಸೇರಿದರು. 1952 ರ ಸಾರ್ವತ್ರಿಕ ಚುನಾವಣೆಯಲ್ಲಿ ಅವರು ಮೈಸೂರಿನಿಂದ ಲೋಕಸಭೆಗೆ ಆಯ್ಕೆಯಾದರು. 1952ರಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಅವರ ಪಕ್ಷ ಮತ್ತು ಸಮಾಜವಾದಿ ಪಕ್ಷವನ್ನು ವಿಲೀನಗೊಳಿಸಿದ ನಂತರ, ಗುರುಪಾದಸ್ವಾಮಿ ಸಂಸದೀಯ ಪಕ್ಷದ ಪ್ರಧಾನ ಕಾರ್ಯದರ್ಶಿಯಾದರು.

ಗುರುಪಾದಸ್ವಾಮಿ ಅವರು ಮೈಸೂರಿನಿಂದ 1960 ರಿಂದ 1966 ರವರೆಗೆ, ಉತ್ತರ ಪ್ರದೇಶದಿಂದ 1966 ರಿಂದ 1972 ರವರೆಗೆ ಮತ್ತು ಕರ್ನಾಟಕದಿಂದ 1984 ರಿಂದ 1990 ರವರೆಗೆ ಮತ್ತು 1990 ರಿಂದ 1992 ರವರೆಗೆ 4 ಅವಧಿಗೆ ರಾಜ್ಯಸಭೆ ಸದಸ್ಯರಾಗಿದ್ದರು. ಅವರು 1967 ರಲ್ಲಿ ಪರಮಾಣು ಶಕ್ತಿ ರಾಜ್ಯ ಸಚಿವರಾಗಿದ್ದರು. ಅವರು 1967–69ರ ಅವಧಿಯಲ್ಲಿ ಇಂದಿರಾಗಾಂಧಿಯವರ ಸಂಪುಟದಲ್ಲಿ ಕೃಷಿ ಮತ್ತು ಆಹಾರ, ಸಮುದಾಯ ಅಭಿವೃದ್ಧಿ ಮತ್ತು ಸಹಕಾರ ಸಚಿವರಾಗಿದ್ದರು. ಗುರುಪಾದಸ್ವಾಮಿ ಅವರು 1971 ರಲ್ಲಿ ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದರು. ಅವರು ಜನತಾ ಪಕ್ಷದ ಸಂಸ್ಥಾಪಕರಲ್ಲಿ ಒಬ್ಬರು. ಗುರುಪಾದಸ್ವಾಮಿ ಅವರು 1989 ರಿಂದ 1990 ರವರೆಗೆ ವಿಪಿ ಸಿಂಗ್ ಸಚಿವಾಲಯದಲ್ಲಿ ಪೆಟ್ರೋಲಿಯಂ ಮತ್ತು ರಾಸಾಯನಿಕ ಸಚಿವರಾಗಿ ಸೇವೆ ಸಲ್ಲಿಸಿದ್ದರು.


ಇಷ್ಟೆಲ್ಲಾ ಹುದ್ದೆಗಳನ್ನು ಅಲಂಕರಿಸಿ ದೇಶದ ಪ್ರಗತಿಗೆ ಅಪಾರ ಕೊಡುಗೆ ನೀಡಿರುವ ಎಂ.ಎಸ್. ಗುರುಪಾದಸ್ವಾಮಿ ಅವರ ನಾಮಫಲಕವನ್ನು ಜೆ.ಪಿ.ನಗರದ ಮುಖ್ಯರಸ್ತೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ಅಳವಡಿಸಿದೆ. ನಾಮಫಲಕದಲ್ಲಿ ಎಂ.ಎಸ್.ಗುರುಪಾದ ಸ್ವಾಮಿ ಮಾಜಿ ಸಂಸದರು ಎಂದಷ್ಟೇ ಬರೆಯಲಾಗಿದೆ. ಇದು ಅವರ ಅಭಿಮಾನಿಯಾದ ನನಗೆ ಬಹಳಷ್ಟು ನೋವುಂಟು ಮಾಡಿದೆ. ಮಾಜಿ ಸಂಸದರು ಎನ್ನುವುದಕ್ಕಿಂತ ಹೆಚ್ಚಿನ ಸ್ಥಾನಗಳಲ್ಲಿ ಅವರು ಕಾರ್ಯನಿರ್ವಹಿಸಿದ್ದಾರೆ. ಮಹಾನಗರ ಪಾಲಿಕೆ ಈ ಕೂಡಲೇ ಎಚ್ಚೆತ್ತು, ಎಂ.ಎಸ್.ಗುರುಪಾದಸ್ವಾಮಿ ಅವರ ನಾಮಫಲಕದಲ್ಲಿ ಮಾಜಿ ಸಂಸದರು ಎಂಬುದನ್ನು ತೆಗೆದು ಕೇಂದ್ರದ ಮಾಜಿ ಸಚಿವರು ಎಂದು ಬರೆಯಬೇಕಾಗಿ ಮನವಿ –ಕೆ.ವಿ.ಮಲ್ಲೇಶ್, ಪಾಲಿಕೆ ಮಾಜಿ ಸದಸ್ಯ, ಮೈಸೂರು.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು,
ರಾಮಕೃಷ್ಣ ವಿದ್ಯಾಶಾಲೆ,
ಮೈಸೂರು. ಮೊ.: 9036389640

ಈ ಜೀವನ...

ಏಕೆ ಹಾಗೆ ಮಾಡಿದೆ... ನಿನ್ನಾ ನೆನಪು ಕಾಡಿದೆ...



ಜಯಕವಿ, ಮೈಸೂರಿನ ಕವಿ ಎಂದೇ ಚಿರಪರಿಚಿತರಾಗಿರುವ ಜಯಪ್ಪ ಹೊನ್ನಾಳಿ ಅವರು ಬರೆದಿರುವ ಕವಿತೆಗಳು ಒಂದಕ್ಕಿಂತ ಒಂದು ಭಿನ್ನವಾಗಿದೆ.ಪ್ರೀತಿ, ಪ್ರೇಮ ಮತ್ತು ವಿರಹ ಗೀತೆಗಳನ್ನು ತಮ್ಮದೇ ಆದ ವಿಶಿಷ್ಟ ಪದಪುಂಜಗಳ ಮೂಲಕ ಬಳಸಿ ಸುಂದರ ಲೋಕವನ್ನು ಕಟ್ಟಿಕೊಡುವಂತಹ ಕೆಲಸವನ್ನು ಮಾಡಬಲ್ಲವರು, ತಮ್ಮ ವಿಶೇಷ ಪದ ಬಳಕೆಯಿಂದ ಕೇಳುಗರ ಮನಸ್ಸನ್ನು ಮಂತ್ರಮುಗ್ಧರನ್ನಾಗಿಸುವಂತಹ ಶಕ್ತಿ ಅವರ ಬರವಣಿಗೆಗೆ ಇದೆ.ಅವರ ಹಲವಾರು ಕವಿತೆಗಳಲ್ಲಿ ಸದಾ ಕಾಡುವಂತಹ ಭಾವಗೀತೆಯೊಂದಿದೆ. ಅದುವೇ ನಿನ್ನಾ ನೆನಪು ಕಾಡಿದೆ.

> "ಪ್ರಸ್ತುತ ದಿನಗಳಲ್ಲಿ ಪ್ರೀತಿ ಹೆಸರಿನಲ್ಲಿ ನಡೆಯುತ್ತಿರುವ ಮೋಸ, ಆ ಮೋಸದಿಂದ ಹೊರಬರಲಾಗದೇ ಅಗಾಧವಾದ ನೋವನ್ನು ಪ್ರತಿನಿತ್ಯವೂ ಅನುಭವಿಸುತ್ತಿರುವ ವಿರಹ ವೇದನೆಯನ್ನು ತುಂಬಾ ಸೊಗಸಾಗಿ ಮನಮುಟ್ಟುವಂತೆ ವ್ಯಕ್ತಪಡಿಸಿದ ಕವಿತೆ / ಭಾವಗೀತೆ ಇದಾಗಿದೆ. ಪ್ರೀತಿಸಿದವರಿಗಷ್ಟೇ ಅರ್ಥವಾಗಬೇಕೆಂಬ ಅಥವಾ ನೊಂದವರಿಗಷ್ಟೇ ಆಪ್ತವಾಗುತ್ತದೆ ಎಂಬ ಸುಳ್ಳನ್ನು ನಂಬದೇ ಒಮ್ಮೆ ಸಹೃದಯದ ದೃಷ್ಟಿಯಿಂದ ಓದಿ, ಯುಟ್ಯೂಬ್ ಅಲ್ಲಿಯೂ ಕೂಡ ಈ ಹಾಡನ್ನು ಮನತಾಗುವಂತೆ ಸೊಗಸಾಗಿ ದೃಶ್ಯ ಮಾಧ್ಯಮದಿ ಬಿತ್ತರಿಸಿರುವರು ನೋಡಿ, ಕೇಳಿ, ಆಗ ಭಾವಗೀತೆ ಮತ್ತಷ್ಟು, ಮಗದಷ್ಟು, ಮತ್ತೆ, ಮತ್ತೆ ಕೇಳಬೇಕೆನಿಸುವಷ್ಟು ಆಪ್ತವಾಗುವುದರಲಿ ಯಾವುದೇ ಸಂದೇಹವಿಲ್ಲ. ಕವಿಯ ಭಾವವನ್ನು ಸರಿಯಾಗಿ ಅರ್ಥಮಾಡಿಕೊಂಡವನೇ ನಿಜವಾದ ಸಹೃದಯ,

ನಿನ್ನಾ ನೆನಪು ಕಾಡಿದೆ
ಏಕೆ ಹಾಗೆ ಮಾಡಿದೆ...!?
ಪ್ರಶ್ನೆ ಹಾಗೇ ಉಳಿದಿದೆ...
ಏಕೆ ಹಾಗೇ ಮಾಡಿದೆ...!?
ನಂಬಿದಂಥ ಜೀವಕೆ...
ಏಕೆ ನರಕ ನೀಡಿದೆ...!?

ನಿಜವಾದ ಪ್ರೇಮಿಯೊಬ್ಬನ ವಿರಹವನ್ನು ವರ್ಣಿಸಿದಂತಹ ಭಾವಗೀತೆ ಇದಾಗಿದೆ. ಯಾವುದೋ ಕಾರಣದಿಂದ ಪ್ರಿಯತಮೆ ದೂರ ಮಾಡಿ ಹೋಗಿದ್ದಾಳೆ. ಆದರೆ ಅದನ್ನು ಅರಗಿಸಿಕೊಳ್ಳುವ ಶಕ್ತಿ ಪ್ರಿಯಕರನಿಗಿಲ್ಲ.ಅದಕ್ಕಾಗಿಯೇ ಅವನು ಹೀಗೆ ಹೇಳುತ್ತಿದ್ದಾನೆ–ನಿನ್ನಾ ನೆನಪು ಕಾಡಿದೆ, ಅದು ಅನುಕ್ಷಣವೂ ಕೂಡ ಕಾಡುವಂತದ್ದು. ನಿಜವಾದ ಪ್ರೇಮಿಗೆ ಮಾತ್ರ ತನ್ನ ಪ್ರೀತಿಯ ಬೆಲೆ ತಿಳಿಯಬಲ್ಲದು. ಇಲ್ಲಿಯ ಪ್ರೇಮಿಗೆ ತನ್ನ ಪ್ರಿಯತಮೆ ಮಾಡಿದ ಮೋಸಕ್ಕೆ ಕಾರಣ ತಿಳಿದಿಲ್ಲ. ಅದಕ್ಕಾಗಿಯೇ ನೀನು ಏಕೆ ಹಾಗೇ ಮಾಡಿದೆ ಎಂದು ಪ್ರಶ್ನಿಸುವ ಮೂಲಕ ಅವಳ ನಿರ್ಧಾರಕ್ಕೆ ಕಾರಣವೇನು ಎಂದು ತಿಳಿಯುವ ಪ್ರಯತ್ನ ಮಾಡುತ್ತಿದ್ದಾನೆ.ಆದರೆ ಅದು ವ್ಯರ್ಥವಾಗಿದೆ. ಏಕೆಂದರೆ ತನ್ನನ್ನು ದೂರ ಮಾಡಿ ಹೋಗಿದ್ಯಾಕೆ ಎಂಬ ಪ್ರಶ್ನೆ ಅವನಿಗೆ ಪ್ರಶ್ನೆಯಾಗಿಯೇ ಉಳಿದಿದೆಯೇ ವಿನಹಃ ಉತ್ತರ ದೊರಕಿಲ್ಲ. ಅದಕ್ಕಾಗಿಯೇ ಮತ್ತೆ ಏಕೆ ಹಾಗೆ ಮಾಡಿದೆ ಎಂಬ ಪ್ರಶ್ನೆಯನ್ನು ಕೇಳುತ್ತಿದ್ದಾನೆ.ನಿನ್ನ ಮೇಲೆ ನಾನು ಇಟ್ಟಿರುವ ನಂಬಿಕೆಗೆ ದ್ರೋಹ ಮಾಡಿರುವೆ, ನೀನೇ ಜೀವ ಎಂದು ನಂಬಿದಂತಹ ನನಗೆ ಏಕೆ ಈ ಬಗೆಯ ನರಕವನ್ನು ಈ ಭುವಿಯಲ್ಲಿಯೇ ತೋರುತ್ತಿರುವೆ ಎನ್ನುವ ಮೂಲಕ ತನ್ನಿಂದ ಕಾರಣವನ್ನು ಹೇಳದೇ ದೂರಾದ ಪ್ರಿಯತಮೆಗಾಗಿ ಪರಿತಪಿಸುಮತಹ ಪ್ರೇಮಿಯ ಪಾಡನ್ನು ಇಲ್ಲಿ ನೋಡಬಹುದು.

ಇಲ್ಲಿ ಮುಖ್ಯವಾಗಿ ಹುಡುಗಿ ಬಿಟ್ಟು ಹೋಗಿರುವ ನೋವು ಒಂದೆಡೆಯಾದರೆ, ಈ ಪರಿತ್ಯಾಗಕ್ಕೆ ಕಾರಣವನ್ನು ತಿಳಿಸದೇ ಹೋದದ್ದು ಹುಡುಗನಿಗೆ ಬಗೆಹರಿಸಲಾಗದ ಯಕ್ಷಪ್ರಶ್ನೆಯಾಗಿ ಕಾಡುತ್ತಲಿರುವುದನ್ನು ಇಲ್ಲಿ ಗಮನಿಸಬಹುದು. ಪ್ರಸ್ತುತ ದಿನಗಳಲ್ಲಿ ಪ್ರಥಮ ನೋಟದಲ್ಲೇ ಪ್ರೇಮ, ಸುತ್ತಾಟ, ಬೇಸರ, ನಂತರ ದೂರಾಗುವಿಕೆ, ಮತ್ತೊಬ್ಬ ಪ್ರೇಮಿ ಅಥವಾ ಪ್ರೇಯಸಿಗಾಗಿ ಹುಡುಕಾಟ ನಡೆಸುವಂತಹ ಕೆಲವು ಯುವಕ–ಯುವತಿಯರಿಗೆ ಈ ಸ್ವಚ್ಛಂದ ಪ್ರೇಮದ ತುಡಿತ ಅರ್ಥವಾಗಲಾರದು. ನಿಜವಾದ ಪ್ರೀತಿಯನ್ನು ಮಾಡಿದವರಿಗೆ ಮಾತ್ರ ಅದರ ಆಳ, ಅಗಲ ತಿಳಿಯಬಲ್ಲದು. ಹಾಗಾಗಿ ಈ ಭಾವನೆಯಿಂದ ನೋಡಿದರೆ ಮಾತ್ರ ಭಾವಗೀತೆ ಮತ್ತಷ್ಟು,ಮಗದಷ್ಟು ಆಪ್ತವಾಗಬಲ್ಲದು.

ಬೇರೆ ಏನೂ ಬೇಡಲಿಲ್ಲ...
ನಿನ್ನ ಒಲವನ್ನಲ್ಲದೆ..!
ನಿನ್ನ ಒರಟು ಬಗೆಯ ತಿಳಿದೂ
ನಿಂತೆ ಬೇರೆ ಒಲ್ಲದೆ...!
ಅಂಥ ನನಗೆ ಎರಡು ಬಗೆದು...
ಏಕೆ ದೂರ ಓಡಿದೆ...!?
ಅಂತರಾಳ ಗಾಯಗೊಳಿಸಿ
ಹೃದಯವನ್ನೇ ಹಿಂಡಿದೆ..!
ಬದುಕೆ ಬರಡು ಎನಿಸಿದೆ...
ಪ್ರೀತಿ ಕುರುಡು ಎನಿಸಿದೆ..!

ಇಲ್ಲಿ ಪ್ರೇಮಿಯ ಮನದಾಳದ ಬೇಸರ ಮುಂದುವರೆದಿದೆ. ನಿನ್ನಲ್ಲಿ ನಾನು ಒಲವನ್ನಲ್ಲದೇ ಬೇರೆ ಏನೂ ಬೇಡಲಿಲ್ಲ. ಅಂದರೆ ನಿನ್ನಿಂದ ನಾನು ಅಪೇಕ್ಷೆ ಪಟ್ಟದ್ದು, ಆಸೆ ಪಟ್ಟದ್ದು, ನಿರೀಕ್ಷೆಯನ್ನು ಹೊತ್ತದ್ದು ಪ್ರೀತಿಯನ್ನೇ ಹೊರತು ಬೇರೆ ಏನನ್ನೂ ಅಲ್ಲ ಎನ್ನುವ ಮೂಲಕ ನಿಷ್ಕಲ್ಮಶವಾದ ಪ್ರೀತಿಗೆ ಪ್ರೀತಿಯೊಂದೇ ಮಾನದಂಡವಾಗಿರುವುದೇ ವಿನಹಃ ಬೇರೆ ಏನನ್ನೂ ಅದು ಬಯಸಲಾರದೆಂಬ ಸೂಚನೆಯನ್ನು ಇಲ್ಲಿ ತಿಳಿಸಿದಂತಿದೆ. ಅದರ ಮುಂದಿನ ಸಾಲುಗಳು ಗಮನಾರ್ಹವಾದುದು –ನಿನ್ನ ಒರಟು ಬಗೆಯ ತಿಳಿದೂ ನಿಂತೆ ಬೇರೆ ಒಲ್ಲದೆ –ಒಮ್ಮೆ ಪ್ರೀತಿಯ ಬಲೆಯಲ್ಲಿ ಸಿಲುಕಿದರೆ ಸಾಕು ಅದರಿಂದ ಯಾರಿಂದಲೂ ಅಷ್ಟು ಸುಲಭವಾಗಿ ಹೊರಬರಲು ಸಾಧ್ಯವಾಗದು, ಅದನ್ನೇ ಇಲ್ಲಿ ಹೇಳುತ್ತಿದ್ದಾನೆ. ನಿನ್ನ ಮಾತು, ಗುಣ ಒರಟಾಗಿದ್ದರೂ ಕೂಡ ಅದೆಲ್ಲವೂ ನಗಣ್ಯವಾಗಿಯೇ ತೋರಿತು ಎನಗೆ, ನಿನ್ನ ಪ್ರೀತಿ ಮುಖ್ಯವಾಯಿತೇ ಹೊರತು ಬೇರೆ ಏನೂ ಇಲ್ಲ ಎಂಬುದನ್ನು ಇಲ್ಲಿ ಸೂಚ್ಯವಾಗಿ ಹೇಳಿದಂತಿದೆ.ನಿನ್ನ ಪ್ರತಿಯೊಂದು ಬೇಕು ಬೇಡಗಳನ್ನೆಲ್ಲ, ತಪ್ಪು–ಒಪ್ಪುಗಳನ್ನೆಲ್ಲ ಅನುಸರಿಸಿಕೊಂಡು ನಿಂತ ನನಗೆ ಯಾಕೆ ಎರಡು ಬಗೆದೆ ಅಂದರೆ ಮೋಸ ಮಾಡಿದೆ ಎಂದು ಕೇಳುವ ಮೂಲಕ ಅವಳು ಮಾಡಿದ ಮೋಸವನ್ನು ಸಹಿಸಲಾಗದೆಂದು, ಅವಳ ಪ್ರೇಮಬಂಧನದಿಂದ ಬಿಡಿಸಲಾಗದೆಂದು ಕೂಗಿ ಹೇಳಿದಂತಿದೆ. ಮುಂದುವರೆದು ಯಾಕೆ ನನ್ನ ಬಿಟ್ಟು ದೂರ ಓಡಿರುವೆ? ಎಂದು ಪ್ರಶ್ನಿಸುತ್ತಾ ಅವಳ ನೆನಪು ಸದಾ ಜೀವಂತ ಎಂಬ ಭಾವವನ್ನು ಮತ್ತೆ ಮತ್ತೆ ಒತ್ತಿ ಹೇಳುವ ಪ್ರಯತ್ನ ಮಾಡಿದ್ದಾನೆ. ನೀನು ಮಾಡಿರುವ ಗಾಯ ಎಲ್ಲರಿಗೂ ಕಾಣುವಂತದ್ದಲ್ಲ, ಯಾರಿಗೂ ಕಾಣದ, ಎಂದಿಗೂ ಮಾಸದಂತಹ ಅಂತರಾಳದೊಳಗೆ ಶಾಶ್ವತವಾಗಿ ಬೇರೂರುವಂತೆ ಮಾಡಿರುವ ಗಾಯವದು, ಆ ಗಾಯ ನನ್ನ ಹೃದಯವನ್ನೇ ಹಿಂಡಿದೆ, ಅಸಾಧ್ಯವಾದಷ್ಟು, ವಾಸಿಮಾಡಲಾಗದಷ್ಟು ನೋವುಂಟು ಮಾಡಿದೆ ಎಂದು ಪರಿತಪಿಸುವ ಭಗ್ನ ಪ್ರೇಮಿಯ ಚಿತ್ರಣ ಇಲ್ಲಿ ಕಂಡುಬರುತ್ತಿದೆ. ಇವೆಲ್ಲಾ ಕಾರಣದಿಂದ ನನಗೆ ಈ ಬದುಕೆ ಬರಡು ಎನಿಸಿದೆ ಅಂದರೆ ಈ ಜೀವನಕ್ಕೆ ಅರ್ಥವೇ ಇಲ್ಲ, ಏನೂ ಬೆಳೆಯಲಾಗದ, ಉಪಯೋಗಕ್ಕೆ ಬಾರದ ಬರಡು ನೆಲದಂತೆ ಈ ಬದುಕು ಭಾಸವಾಗುತ್ತಿದೆ ಎನ್ನುವ ಮೂಲಕ ಪ್ರೇಯಸಿ ಇಲ್ಲದ ತನ್ನ ಬದುಕಿಗೆ ಯಾವ ಅರ್ಥವೂ ಇನ್ನಿಲ್ಲ ಎಂಬ ವಿಷಾದ ಭಾವ ಇಲ್ಲಿ ವ್ಯಕ್ತವಾಗಿದೆ. ಕೊನೆಯ ಸಾಲು ಗಮನಿಸುವಂತದ್ದು ಈ ಎಲ್ಲಾ ಘಟನೆಗಳಿಂದ ಆ ಹುಡುಗನಿಗೆ ಈ ಪ್ರೀತಿಯ ಮೇಲೆ ನಂಬಿಕೆ ಹೊರಟುಹೋದಂತಿದೆ. ಈ ಪ್ರೀತಿಯೇ ಕುರುಡು ಎನಿಸಿದೆ ಎನ್ನುವ ಮೂಲಕ ತನ್ನ ನಿಜವಾದ ಪ್ರೇಮದ ಭಾವವನ್ನು ಅರ್ಥಮಾಡಿಕೊಳ್ಳದೇ ಬಹು ದೂರ ಹೋಗಿರುವ ತನ್ನ ಪ್ರೇಯಸಿಯ ಪ್ರೀತಿಯೇ ಸುಳ್ಳಿರಬಹುದೆಂಬ ನೋವಿನ ತೀವ್ರತೆ ಅವನನ್ನು ಕಾಡಿದೆ.ಏಕೆಂದರೆ ನಿಜಕ್ಕೂ ಪ್ರೀತಿಗೆ ಕಣ್ಣು ಇದ್ದಿದ್ದರೆ ಅವಳಿಗೆ ನನ್ನ ಪ್ರೇಮದ ಮಿಡಿತ, ತುಡಿತ ಗೋಚರಿಸುತ್ತಿತ್ತು ,ಬಹುಶಃ ಆ ಪ್ರೀತಿ ಕುರುಡಾಗಿರುವುದರಿಂದಲೋ ಏನೋ ಅವಳಿಗೆ ನನ್ನ ಮನಸ್ಸು ಅರ್ಥವಾಗದೆ ನನ್ನನ್ನು ಬಿಟ್ಟು ಹೋಗಿರಬಹುದೆಂಬ ಉತ್ತರವನ್ನು ತಾನೇ ಕಂಡುಕೊಂಡು ನೊಂದ ಮನಕ್ಕೆ ತಾನೇ ಮುಲಾಮು ಹಚ್ಚಿಕೊಳ್ಳುವ ವ್ಯರ್ಥ ಪ್ರಯತ್ನವನ್ನಿಲ್ಲಿ ಮಾಡುತ್ತಿದ್ದಾನೆ ಎನ್ನಬಹುದು.

ದುಡ್ಡು, ಅಗತ್ಯ ವಸ್ತು, ಉಡುಗೊರೆ ತಂದು ಕೊಟ್ಟರಷ್ಟೇ ಪ್ರೀತಿ ಇಲ್ಲದಿದ್ದರೆ ಪ್ರೀತಿಯೂ ಇಲ್ಲ, ಏನೂ ಇಲ್ಲವೆಂದು ದೂರುವಂತಹ ಕೆಲವು ಯುವ ಮನಸ್ಸುಗಳಿಗೆ ನಿಷ್ಕಲ್ಮಶವಾದ ಪ್ರೀತಿಗೆ ಪ್ರೀತಿಯಲ್ಲದೇ ಬೇರೇನೂ ಬೇಕಾಗಲಾರದು ಎಂಬುದನ್ನು ಜೊತೆಗೆ, ಪ್ರೀತಿಯ ಹೆಸರಿನಲ್ಲಿ ಮಾಡುವ ಮೋಸದಿಂದ ಪ್ರೀತಿಸಿದವರ ಬದುಕಲ್ಲಿ ಎಂತಹ ಪರಿಣಾಮ ಉಂಟಾಗಬಹುದು ಎಂಬುದನ್ನು ತುಂಬಾ ಮನೋಜ್ಞವಾಗಿ ತಿಳಿಸುವುದಷ್ಟೇ ಅಲ್ಲದೇ ಮೋಸ ಮಾಡಬಾರದೆಂಬ ಎಚ್ಚರಿಕೆಯನ್ನು ಪರೋಕ್ಷವಾಗಿ ಈ ಪದ್ಯದ ಭಾಗ ತಿಳಿಸುವಂತಿದೆ.

ಶೋಕದಾಳ ಸುಳಿಗೆ ಸಿಲುಕಿ
ಮರೆಯ ಬಯಸಿ ನಿನ್ನನು...
ಮೂಕಗೊಳಿಸಿ ಭಾವದೆದೆಯ
ಕಲ್ಲು ಬಂಡೆಯಾದೆನು..!
ಆದರೂನು ಅಲ್ಲಿ ಕೂಡಾ
ನಿನ್ನದೆ ಶಿಲ್ಪ ಅರಳಿದೆ..!
ಅದನು ಕಟೆದರಾರೊ ಅರಿಯೆ
ಆತ್ಮ ಒಳಗೇ ನರಳಿದೆ...!
ಬಾಳು ಹಾಳೆ ಎನಿಸಿದೆ...
ಏನೂ ತಿಳಿಯದಾಗಿದೆ..!

ಭಾವಗೀತೆಯ ಕೊನೆಯ ಈ ಭಾಗದಲ್ಲಿ ದೂರ ಮಾಡಿ ಹೋಗಿರುವ ಹುಡುಗಿಯಿಂದ ಹುಡುಗನ ಬದುಕಿನಲ್ಲಿ ಆಗಿರುವ ಪರಿಣಾಮವನ್ನು ಮನಮುಟ್ಟುವಂತೆ ಚಿತ್ರಿಸಲಾಗಿದೆ. ನಿನ್ನ ಅಗಲುವಿಕೆಯ ಶೋಕದ ಸುಳಿಗೆ ಸಿಲುಕಿ ಅದರಿಂದ ಹೊರಬರಲಾಗದೇ ನಿನ್ನನ್ನು ಮರೆಯಬೇಕೆಂದು ಬಯಸಿದೆ, ನನ್ನ ಭಾವನೆಗಳನ್ನೆಲ್ಲಾ ಮೂಕಗೊಳಿಸಿ ಕಲ್ಲು ಬಂಡೆಯಾದೆನು ಅಂದರೆ ನೊಂದ ಹೃದಯಕ್ಕೆ ಆಗಿರುವ ನೋವು ಆ ಹೃದಯಕಷ್ಟೇ ತಿಳಿಯುತ್ತದೆ.ಬೇರೆಯವರಿಗೆ ಆ ನೋವಿನ ತೀವ್ರತೆ ತಿಳಿಯಲಾಗದು.ನಂಬಿಕೆಗೆ ಪೆಟ್ಟು ಬಿದ್ದಾಗ, ಬಯಸಿದ ವ್ಯಕ್ತಿಗಳೇ ಮೋಸ ಮಾಡಿದಾಗ ಆಗುವಂತಹ ದುಃಖವನ್ನು ಸಹಿಸಲಾಗದು. ಇಲ್ಲಿಯೂ ಕೂಡ ಆ ಹುಡುಗನಿಗೆ ಹುಡುಗಿ ಮಾಡಿರುವ ಮೋಸ ಆತನ ಭಾವನೆಗಳನ್ನು ಕಲ್ಲು ಬಂಡೆಯನ್ನಾಗಿಸಿವೆ. ಯಾವುದಕ್ಕೂ ತಲೆಕೆಡಿಸಿಕೊಳ್ಳದಂತೆ, ಯಾವುದೇ ಸ್ಪಂದನೆ ನೀಡದಂತೆ ಮಾಡಿದೆ ಎಂದರೆ ಪ್ರೀತಿ ಮಾಡಿ ಮೋಸ ಹೋಗಿರುವ ಹುಡುಗನ ಮನಸ್ಸಿನಲ್ಲಿ ಎಷ್ಟರ ಮಟ್ಟಿಗೆ ಅದು ತನ್ನ ಪರಿಣಾಮ ಬೀರಿರಬಹುದೋ ಯೋಚಿಸಿ! ಕಲ್ಲುಬಂಡೆಯಾದರೂ ಕೂಡ ಅಲ್ಲಿಯೂ ಕೂಡ ನಿನ್ನದೇ ಶಿಲ್ಪ ಅರಳಿದೆ ಎನ್ನುವ ಸಾಲು ಉತ್ಕಟ ಪ್ರೇಮದ ಸಾಕ್ಷಿಯ ಹೆಜ್ಜೆ ಗುರುತಾಗಬಲ್ಲದು. ನಾನು ಅವಳನ್ನು ಮರೆತೆ, ಅವಳೇ ನೆನಪೇ ನನಗಿಲ್ಲ ಎಂಬಿತ್ಯಾಗಿ ಮನಸ್ಸಿಗೆ ಮುದನೀಡಬಲ್ಲಂತಹ ಸುಳ್ಳುಗಳನ್ನು ನುಡಿದರೂ ಕೂಡ ಆ ಪ್ರೀತಿ ನಿಜವಾಗಿದ್ದಲ್ಲಿ ಖಂಡಿತವಾಗಿಯೂ ಅದು ತನ್ನ ನೆನಪನ್ನು ಮರೆಸದು. ಇಲ್ಲಿಯೂ ಅದನ್ನೇ ಹೇಳಲಾಗಿದೆ. ನಿನ್ನ ಮರೆಯಬೇಕೆಂದು ಕಲ್ಲುಬಂಡೆಯಾದರೂ ಕೂಡ ಅಲ್ಲಿಯೂ ನಿನ್ನದೇ ಶಿಲ್ಪ ಅರಳಿದೆ ಎನ್ನುವ ಸಾಲುಗಳು ಚಂದ್ರಶೇಖರ ಕಂಬಾರರ ಮರೆತೇನೆಂದರೆ ಮರೆಯಲಿ ಹ್ಯಾಂಗ ಎಂಬ ಸಾಲನ್ನು ನೆನಪಿಸುವಂತೆ ನಿನ್ನನ್ನು ಮರೆಯಲಾಗದು ಎಂದು ಸೂಚ್ಯವಾಗಿ ತಿಳಿಸಿದೆ.ಆ ಶಿಲ್ಪವು ಮೂಡುವಂತೆ ಚಿತ್ರಿಸಿದವರು ಯಾರೋ ನಾನು ಅರಿಯನು, ನಿನ್ನನ್ನು ನೆನಪಿಸಿಕೊಂಡು ದೇಹವಷ್ಟೇ ಅಲ್ಲ ಆತ್ಮವೂ ಕೂಡ ಒಳಗೊಳಗೆ ಯಾರಿಗೂ ತಿಳಿಯದಂತೆ ನರಳಿದೆ ಎಂದು ನಿನ್ನ ಬಿಟ್ಟಿರಲಾರೆನು, ನೀನಿಲ್ಲದ ಈ ಬಾಳೇ ಹಾಳು ಎನಿಸಿದೆ, ಏನೂ ತಿಳಿಯದಾಗಿದೆ ಎನ್ನುವ ಮೂಲಕ ಬಾಳಿಗೆ ಬೆಳಕಾಗಿ ಬರಬಹುದೆಂಬ ಭರವಸೆಯನ್ನು ಬಿತ್ತವಳು ಬಾಳಿ ಬೆಳಗದಂತೆ ಅಂಧಕಾರವನ್ನು ಎಲ್ಲೆಡೆ ಪಸರಿಸಿ ಹೋದಳೆಂದು ಈ ನಶ್ವರದ ಬದುಕಿಗೆ ನೀನಿಲ್ಲದೆ ಅರ್ಥವೇ ಇರಲಾಗದೆಂದು ತಿಳಿಸುವಂತಿದೆ.

ಗಂಡಾಗಲೀ, ಹೆಣ್ಣಾಗಲೀ ಪ್ರೀತಿ ಎಂಬ ಹೆಸರಿನಲ್ಲಿ ಯಾರೂ ಕೂಡ ಮೋಸ ಮಾಡಬಾರದು. ಗಂಡಿಗಾದರೆ ಅದು ನೋವು, ಹೆಣ್ಣಿಗಾದರೆ ಅದು ಅವಳ ಕರ್ಮ ಎಂಬ ಭಾವ ಸಲ್ಲದು. ಇಬ್ಬರಿಗೂ ಸಮಾನವಾದ ಮನಸ್ಸಿದೆ. ಒಬ್ಬರನ್ನೊಬ್ಬರು ಅರಿತುಕೊಂಡು ಬೆಲೆ ಕಟ್ಟಲಾಗದ ಭಾವನೆಗಳನ್ನು ಅರ್ಥಮಾಡಿಕೊಂಡು ಬದುಕಿದರೆ ನಿಜಕ್ಕೂ ಆ ಪ್ರೀತಿಗೆ ಸೋಲುಂಟಾಗುವುದಿಲ್ಲ, ಅಂತಹ ಪ್ರೀತಿ ಯಾರಿಗೂ ಯಾವ ಬಗೆಯ ನೋವುಂಟು ಮಾಡುವುದಿಲ್ಲ. ಹಾಗಾಗಿ ಯಾರಿಗೂ ನೋವುಂಟು ಮಾಡದ ಪ್ರೀತಿಯು ಎಲ್ಲರಿಗೂ ಸಿಕ್ಕರೆ ಒಳ್ಳೆಯದೆಂಬ ಭಾವನೆಯನ್ನು ಈ ಭಾವಗೀತೆಯೊಂದಿಗೆ ಪರೋಕ್ಷವಾಗಿ ತಿಳಿಯಬಹುದು.

ಪ್ರಸ್ತುತ ದಿನಗಳಲ್ಲಿ ಪ್ರೀತಿ ಹೆಸರಿನಲ್ಲಿ ನಡೆಯುತ್ತಿರುವ ಮೋಸ, ಆ ಮೋಸದಿಂದ ಹೊರಬರಲಾಗದೇ ಅಗಾಧವಾದ ನೋವನ್ನು ಪ್ರತಿನಿತ್ಯವೂ ಅನುಭವಿಸುತ್ತಿರುವ ವಿರಹ ವೇದನೆಯನ್ನು ತುಂಬಾ ಸೊಗಸಾಗಿ ಮನ ಮುಟ್ಟುವಂತೆ ವ್ಯಕ್ತಪಡಿಸಿದ ಕವಿತೆ / ಭಾವಗೀತೆ ಇದಾಗಿದೆ. ಪ್ರೀತಿಸಿದವರಿಗಷ್ಟೇ ಅರ್ಥವಾಗಬೇಕೆಂಬ ಅಥವಾ ನೊಂದವರಿಗಷ್ಟೇ ಆಪ್ತವಾಗುತ್ತದೆ ಎಂಬ ಸುಳ್ಳನ್ನು ನಂಬದೇ ಒಮ್ಮೆ ಸಹೃದಯದ ದೃಷ್ಟಿಯಿಂದ ಓದಿ, ಯುಟ್ಯೂಬ್ ಅಲ್ಲಿಯೂ ಕೂಡ ಈ ಹಾಡನ್ನು ಮನತಾಗುವಂತೆ ಸೊಗಸಾಗಿ ದೃಶ್ಯ ಮಾಧ್ಯಮದಿ ಬಿತ್ತರಿಸಿರುವರು ನೋಡಿ, ಕೇಳಿ, ಆಗ ಭಾವಗೀತೆ ಮತ್ತಷ್ಟು, ಮಗದಷ್ಟು, ಮತ್ತೆ, ಮತ್ತೆ ಕೇಳಬೇಕೆನಿಸುವಷ್ಟು ಆಪ್ತವಾಗುವುದರಲಿ ಯಾವುದೇ ಸಂದೇಹವಿಲ್ಲ. ಕವಿಯ ಭಾವವನ್ನು ಸರಿಯಾಗಿ ಅರ್ಥಮಾಡಿಕೊಂಡವನೇ ನಿಜವಾದ ಸಹೃದಯ, ಆ ನಿಟ್ಟಿನಿಂದ ನೋಡಿದರೆ ಕವಿಯು ಬಳಸಿರುವ ಅಕ್ಷರಗಳ ಹಿಂದೆ ಅಡಗಿರುವ ಭಾವಕ್ಕೆ ಪ್ರತಿಸ್ಪಂದಿಸಲೂ ಸಾಧ್ಯವಾಗುವುದು.

ಲಿಂಗಾಂಬುದಿ ಕೆರೆಯ ಮೀನುಗಳ ಮರಣ ತಡೆಗೆ ಸೂಕ್ತ ಕ್ರಮ ಕೈಗೊಳ್ಳಿ



ಮೈಸೂರು, ಸೆ2– ನಗರದ ಲಿಂಗಾಂಬುದಿ ಕೆರೆಯಲ್ಲಿರುವ ಮೀನುಗಳ ಮರಣ ತಡೆಗಟ್ಟುವ ಕುರಿತು ಮೀನುಗಾರಿಕೆ ಇಲಾಖೆಯವರು ಇಲಾಖೆಯಲ್ಲಿರುವ ತಜ್ಞರು ಅಥವಾ ಇತರೆ ವೃತ್ತಿಪರರೊಂದಿಗೆ ಸಮಾಲೋಚನೆ ನಡೆಸಿ ನಿರ್ವಹಣೆ ಕುರಿತು ಯೋಜನೆ ರೂಪಿಸಿ ಮೀನುಗಳ ಮರಣ ತಡೆಗಟ್ಟಲು ಸೂಕ್ತ ಕ್ರಮ ಕೈಗೊಳ್ಳಿ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೂಚಿಸಿದ್ದಾರೆ.

ಇಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಲಿಂಗಾಂಬುದಿ ಕೆರೆಯಲ್ಲಿ ಸಾಮೂಹಿಕವಾಗಿ ಮೀನುಗಳು ಮರಣ ಹೊಂದಿರುವುದರ ಸಂಬಂಧಿತ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮೀನುಗಳಿಗೆ ಅನುಕೂಲಕರ ವಾತಾವರಣ ಸೃಷ್ಟಿಸುವ ನಿಟ್ಟಿನಲ್ಲಿ ಅನುವಾಗುವ ಜಲ ಸಸ್ಯಗಳನ್ನು ಕೆರೆಯಲ್ಲಿ ಬೆಳೆಸಲು ಕ್ರಮ ಕೈಗೊಳ್ಳಲು ತಿಳಿಸಿದರು. ಕೆರೆಯಲ್ಲಿರುವ ಮೀನುಗಳ ನೈಸರ್ಗಿಕ ಸಮತೋಲನ ಕಾಪಾಡುವ ನಿಟ್ಟಿನಲ್ಲಿ ಡಿ–ಸ್ಟಾಕಿಂಗ್ ಕ್ರಮ ವಹಿಸಲು ಸೂಚಿಸಿದರು. ಕೆರೆಗೆ ಸಂಪರ್ಕವಿರುವ ಮಳೆ ನೀರು ಚರಂಡಿಗಳಲ್ಲಿ ತಕ್ಷಣವೇ Litter Trapಗಳನ್ನು ಅಳವಡಿಸಲು ಸೂಚಿಸಿದರು. ಕೆರೆಯ ಸುತ್ತಮುತ್ತಲು ಇರುವ ಪ್ರಾಧಿಕಾರದ ಬಡಾವಣೆಗಳಲ್ಲಿ ಎಸ್‌ಟಿಪಿಗಳು ವ್ಯವಸ್ಥಿತವಾಗಿ ನಿರ್ವಹಣೆ ಮಾಡುವುದರ ಬಗ್ಗೆ ಮತ್ತು ರಾಜಕಾಲುವೆಯನ್ನು ಡಿ–ಸಿಲ್ಟಿಂಗ್ ಮತ್ತು ಕ್ಲೀನಿಂಗ್ ಕುರಿತು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದವರು ಕ್ರಿಯಾ ಯೋಜನೆ ತಯಾರಿಸಿ ಕ್ರಮಕೈಗೊಳ್ಳಲು ಸೂಚಿಸಿದರು.



ಮೀನುಗಳು ಮರಣ ಹೊಂದಿರುವ ಬಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಮಾತನಾಡಿ, ಕೆರೆಯ ಸುತ್ತಮುತ್ತಲ ಬಡಾವಣೆಗಳ ಕಲುಷಿತ ನೀರು ಹರಿದು ಬಂದಿದ್ದು, ಕೆರೆ ನೀರಿನ ಉಷ್ಣತೆ ಹಾಗೂ ಆಮ್ಲಜನಕದಲ್ಲಿನ ವ್ಯತ್ಯಾಸದಿಂದಾಗಿ ಮೀನುಗಳು ಮರಣ ಹೊಂದಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ವೈಜ್ಞಾನಿಕ ತನಿಖೆಗಾಗಿ ಸತ್ತ ಮೀನು ಮರಿಗಳನ್ನು ಮಂಗಳೂರಿನಲ್ಲಿರುವ ಪ್ರಯೋಗಾಲಯಕ್ಕೆ ಕಳುಹಿಸಿರುವುದಾಗಿ ತಿಳಿಸಿದರು.

ಸಭೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು, ಮಹಾನಗರ ಪಾಲಿಕೆಯ ನಗರ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ವಿಭಾಗದ. ಕಾರ್ಯಪಾಲಕ ಅಭಿಯಂತರರು, ಮೀನುಗಾರಿಕೆ ಇಲಾಖೆ, ಸಹಾಯಕ ನಿರ್ದೇಶಕರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಅಮೃತ ವಿಶ್ವವಿದ್ಯಾಪೀಠಂನಲ್ಲಿ 'ಸಂಸ್ಕೃತ ಸಪ್ತಾಹ–2023'


ಸಂಸ್ಕೃತ ಭಾರತೀಯ ಅಖಿಲ ಭಾರತ ಕುಟುಂಬ ಶಿಕ್ಷಣ ಸಂಯೋಜಕ ಪ್ರೊ. ಟಿ.ಎನ್. ಪ್ರಭಾಕರ್ ಸಂಸ್ಕೃತ ಸಪ್ತಾಹ–2023 ಉದ್ಘಾಟಿಸಿದರು.

ಮೈಸೂರು,ಸೆ.2–ಮೈಸೂರಿನ ಅಮೃತ ವಿಶ್ವವಿದ್ಯಾಪೀಠಂ ಮೈಸೂರು ಕ್ಯಾಂಪಸ್‌ನಲ್ಲಿ ಸಂಸ್ಕೃತ ಸಪ್ತಾಹ–2023 ಆಯೋಜಿಸಲಾಗಿತ್ತು ಸಂಸ್ಕೃತ ಭಾರತೀಯ ಅಖಿಲ ಭಾರತ ಕುಟುಂಬ ಶಿಕ್ಷಣ ಸಂಯೋಜಕ ಪ್ರೊ.ಟಿ.ಎನ್.ಪ್ರಭಾಕರ್ ಸಂಸ್ಕೃತ ಸಪ್ತಾಹ–2023 ಅನ್ನು ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಭಾರತದ ಸಾಂಪ್ರದಾಯಿಕ, ಸಾಂಸ್ಕೃತಿಕ ಹಾಗೂ ವೈಜ್ಞಾನಿಕ ಕ್ಷೇತ್ರಗಳಲ್ಲಿ ಸಂಸ್ಕೃತದ ಅವಿಸ್ಮರಣೀಯ ಕೊಡುಗೆಗಳನ್ನು ಉಲ್ಲೇಖಿಸಿದ ಅವರು ಈ ಕೊಡುಗೆಗಳಿಂದಾಗಿ ಭಾರತವು ಸಂಸ್ಕೃತಿಯ ತೊಟ್ಟಿಲಾಗಿದೆ ಎಂದರು.

ಜಾಗತಿಕ ಮಟ್ಟದಲ್ಲಿ ಸಂಸ್ಕೃತ ಭಾಷೆಗಿರುವ ಮನ್ನಣೆ ಸ್ಮರಿಸಿದ ಪ್ರೊ. ಟಿ.ಎನ್ ಪ್ರಭಾಕರ್, ಜಗದ್ವಿಖ್ಯಾತ ವಿಜ್ಞಾನಿಗಳು, ವಿವಿಧ ಕ್ಷೇತ್ರಗಳ ವಿದ್ವಾಂಸರು ಸಂಸ್ಕೃತ ಭಾಷೆಯ ಪ್ರೌಢಿಮೆಯನ್ನು ಎತ್ತಿ ಹಿಡಿದಿದ್ದಾರಲ್ಲದೇ ಈ ಭಾಷೆಯ ಜೊತೆಗೆ ಬೆಸೆದಿರುವ ಅಸಾಮಾನ್ಯ ಜ್ಞಾನವನ್ನು ಕಂಡುಕೊಂಡಿದ್ದಾರೆ. ಜಗತ್ತಿನ ಜ್ಞಾನ ಪರಂಪರೆಯನ್ನು ಮತ್ತಷ್ಟು ಶ್ರೀಮಂತಗೊಳಿಸಿರುವ ಸಂಸ್ಕೃತ ಭಾಷೆಯ ಜೊತೆಗೆ ಬೆಸೆದುಕೊಂಡಿರುವ ನಾವೆಲ್ಲ ಅತ್ಯಂತ ಹೆಮ್ಮೆಪಡಬೇಕು ಎಂದು ಅಭಿಪ್ರಾಯಪಟ್ಟರು.

ಅಮೃತ ವಿಶ್ವವಿದ್ಯಾಪೀಠಂ ಮೈಸೂರು ಕ್ಯಾಂಪಸ್‌ನ ನಿರ್ದೇಶಕರಾದ ಬ್ರಹ್ಮಚಾರಿ ಅನಂತಾನಂದ ಚೈತನ್ಯ, ಸಂಚಾಲಕರಾದ ಬ್ರಹ್ಮಚಾರಿ ಮುಕ್ತಿದಾಮೃತ ಚೈತನ್ಯ, ಅಸೋಸಿಯೇಟ್ ಡೀನ್ ಪ್ರೊ.ಶೇಖರ್ ಬಾಬು, ಪ್ರಾಂಶುಪಾಲ ಡಾ.ಜಿ.ರವೀಂದ್ರನಾಥ್, ಸಹಾಯಕ ಪ್ರಾಧ್ಯಾಪಕರಾದ ಡಾ.ವಿಘ್ನೇಶ್ವರ್ ಭಟ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸಪ್ತಾಹದ ಭಾಗವಾಗಿ ಸರಣಿ ಉಪನ್ಯಾಸಗಳನ್ನು ಆಯೋಜಿಸಲಾಗಿದ್ದು, ಸೆಪ್ಟೆಂಬರ್ 1ರಿಂದ 7ರವರೆಗೆ ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಗೋಪಾಲಸ್ವಾಮಿ ಶಿಶು ವಿಹಾರ ಶಾಲೆಯಲ್ಲಿ ಸಂಜೆ 5.30ರಿಂದ 7ರವರೆಗೆ ಈ ಉಪನ್ಯಾಸಗಳು ನಡೆಯಲಿವೆ.

ಪೇಜಾವರ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳಿಂದ 'ಶ್ರೀಮದ್ ಭಾಗವತಂ' ಕೃತಿ ಬಿಡುಗಡೆ



ಮೈಸೂರು, ಸೆ.2 (ಎಸ್‌ಪಿಎನ್)– ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀ ಪಾದಂ ಸಂಗ್ರಹ, ವಿದ್ವಾನ್ ವಿಜಯೇಂದ್ರ ಆಚಾರ್ಯ ಕನ್ನಡ ಅನುವಾದ 'ಶ್ರೀಮದ್ ಭಾಗವತಂ' ಕೃತಿಯನ್ನು ಉಡುಪಿ ಪೇಜಾವರ ಮಠದ ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದಂಗಳವರು ಶನಿವಾರ ಬಿಡುಗಡೆಗೊಳಿಸಿದರು.

ಮೈಸೂರಿನ ಶ್ರೀ ಕೃಷ್ಣಧಾಮದಲ್ಲಿ ಚಾತುರ್ಮಾಸ್ಯ ಸಮಿತಿಯಿಂದ ಉಡುಪಿಯ ಪೇಜಾವರ ಮಠದ ಪೀಠಾಧ್ಯಕ್ಷರಾದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರ 36ನೇ ಚಾತುರ್ಮಾಸ್ಯ ವ್ರತ ಸಂಕಲ್ಪ ಅಂಗವಾಗಿ ನಡೆದ 'ಶ್ರೀಮದ್ರಾಮಾಯಣ' ಪ್ರವಚನ ಮಾಲೆಯಲ್ಲಿ ಶ್ರೀಗಳು ಬಿಡುಗಡೆಗೊಳಿಸಿ, ಶುಭ ಹಾರೈಸಿದರು.

ನಂತರ ವಿದ್ವಾನ್ ವಿಜಯೇಂದ್ರ ಆಚಾರ್ಯ ಮಾತನಾಡಿ, ಉಡುಪಿ ಮಠದ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರು 4ನೇ ಪರ್ಯಾಯ ಸಂದರ್ಭದಲ್ಲಿ ನೀಡಿದ ಪ್ರವಚನ ಮಾಲೆಯನ್ನು ಸಂಗ್ರಹಿಸಿರುವ ಶ್ರೀ ವಿಶ್ವ ಪ್ರಸನ್ನ ತೀರ್ಥರು, ಸ್ವಯಂ ತಾವೇ ಎಲ್ಲಾ ಶ್ಲೋಕಗಳನ್ನು ಪರಿಶೀಲಿಸಿ, ನಂತರ ಮುದ್ರಣಕ್ಕೆ ಒಪ್ಪಿಗೆ ಸೂಚಿಸಿದ ಸಂದರ್ಭವನ್ನು ವಿವರಿಸಿದರು.

ಶ್ರೀಮದ್ ಭಾಗವತಂ ಕೃತಿ ಈಗಿನ ಕಾಲದ ಅಗತ್ಯಕ್ಕೆ ತಕ್ಕಂತೆ ರಚಿತವಾಗಿದ್ದು, ಯುವ ಸಮೂಹದ ಒತ್ತಡ ನಿವಾಹರಿಸಲು ಈ ಕೃತಿ ಉತ್ತಮವಾಗಿದೆ. ಪ್ರವಚನ ಮಾಲೆ ಸಂದರ್ಭದಲ್ಲಿ ಶ್ಲೋಕಗಳನ್ನು ತಾಳ್ಮೆಹಿಸಿ, ತಮ್ಮ ಗುರುಗಳಾದ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರಿಗೆ ಈ ಕೃತಿಯನ್ನು ಸಮರ್ಪಿಸಿದ್ದಾರೆ. ಶ್ರೀಗಳು ತಮ್ಮ ವಿದ್ಯಾಭ್ಯಾಸ ಸಂದರ್ಭದಲ್ಲಿ ವಿದ್ಯೆ ಕಲಿಸಿದ ಗುರುಗಳಿಗೆ ಏನಾದರೂ ಅವರಿಗೆ ಪ್ರಿಯವಾದ ಪುಸ್ತಕವನ್ನು ನೀಡಿ, ಗೌರವಿಸಬೇಕೆಂಬುದು ಅವರ ಮನಸ್ಸಿನ ಇಚ್ಛೆಯಾಗಿತ್ತು. ಈ ನಿಟ್ಟಿನಲ್ಲಿ ಪುಸ್ತಕ ರಚನೆಯಾಗಿರುವ ಸಂದರ್ಭವನ್ನು ಎಳೆಎಳೆಯಾಗಿ ಬಿಡಿಸಿಟ್ಟರು.

ತಮ್ಮ ಪೂರ್ಣ ಜೀವಿತಾವಧಿಯಲ್ಲಿ ಹಿಂದೂ ಸಮಾಜದ ಸಂಘಟನೆಗಾಗಿ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರು ಶ್ರಮಿಸಿದ್ದರು. ಮುಂದೆಯೂ ಹಿಂದೂ ಸಮಾಜದ ಒಗ್ಗಟ್ಟಿಗೆ ಈಗಿನ ಶ್ರೀಗಳು ಶ್ರಮಿಸಲಿದ್ದಾರೆ. ಈಗಾಗಲೇ 'ಶ್ರೀಮದ್ ಭಾಗವತಂ' ಕೃತಿ ಮರಾಠಿ, ಆಂಗ್ಲ ಭಾಷೆಗೆ ಅನುವಾದವಾಗಿದ್ದು, ಇನ್ನು ಎರಡು ಮೂರು ಭಾಷೆಗಳಲ್ಲಿ ಈ ಪುಸ್ತಕ ಅನುವಾದಗೊಳ್ಳಲಿದೆ ಎಂದು ತಿಳಿಸಿದರು. ಇದಕ್ಕೂ ಮುನ್ನ ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದಂಗಳವರು, ಶ್ರೀರಾಮಾಯಣ ಪ್ರವಚನ ಮಾಲೆಯಲ್ಲಿ ಶ್ರೀರಾಮಚಂದ್ರನ ವ್ಯಕ್ತಿತ್ವ ಕುರಿತು ಮನೋಜ್ಞವಾಗಿ ವಿವರಿಸಿದರು.

ನಂತರ ವಿದುಷಿ ಅನನ್ಯ ಭಟ್ ಮತ್ತು ವಿದುಷಿ ಭೂಮಿಕಾ ಕೌಂಡಿನ್ಯ ಅವ ರಿಂದ ಹರಿದಾಸ ಗೀತೆಗಳನ್ನು ಮನೋಜ್ಞವಾಗಿ ಹಾಡಿ, ಭಕ್ತರ ಮನಸೂರೆಗೊಂಡರು.

ನಿವೃತ್ತರಿಂದ ಸಮಾಜಮುಖಿ ಬದುಕು ಅಗತ್ಯ



ಮೈಸೂರು, ಸೆ. 2– ಸೇವಾ ನಿವೃತ್ತಿ ಬಳಿಕ ಪ್ರತಿಯೊಬ್ಬರು ಸಮಾಜದ ಏಳಿಗೆಗಾಗಿ ದುಡಿಯಲಿ. ವ್ಯಕ್ತಿಗತವಾಗಿ ಬದುಕುವುದಕ್ಕಿಂತ ಸಮಾಜಮುಖಿಯಾದ ಬದುಕು ಪರಿಪೂರ್ಣತೆಯತ್ತ ಕೊಂಡೊಯ್ಯುತ್ತದೆ ಎಂದು ಕೆಆರ್ ಪೊಲೀಸ್ ಠಾಣೆ ವೃತ್ತ ನಿರೀಕ್ಷಕ ನಾಗೇಗೌಡ ಹೇಳಿದರು.

ಕೆಆರ್ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ 37 ವರ್ಷ ಸೇವೆ ಸಲ್ಲಿಸಿ ನಿವೃತ್ತಿಗೊಂಡ ವಿಶ್ವನಾಥ್ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಅವರನ್ನು ಸನ್ಮಾನಿಸಿ, ಮಾತನಾಡಿದರು.

ಸರ್ಕಾರಿ ಹುದ್ದೆಯಿಂದ ನಿವೃತ್ತಿ ಬಳಿಕ ಸಮಾಜದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಯುವಕರಿಗೆ ಮಾರ್ಗದರ್ಶನ ಮಾಡಿರಿ. ಸಾಮಾಜಿಕ ಚಟುವಟಿಕೆಗಳು ಸಮಾಜವನ್ನು ತಿದ್ದುವ ಕಾರ್ಯಕ್ಕೆ ಪೂರಕವಾಗಲಿ. ವ್ಯಕ್ತಿ ನಿರಂತರವಾಗಿ ಚಟುವಟಿಕೆಗಳಲ್ಲಿ ತೊಡಗಿಕೊಂಡಾಗ ಸಮಾಜದಲ್ಲಿ ಆರೋಗ್ಯಕರ ಬೆಳವಣಿಗೆಗಳಾಗುತ್ತವೆ ಎಂದು ಹೇಳಿದರು.

ಸಬ್‌ಇನ್ಸ್‌ಪೆಕ್ಟರ್ ಮಂಜು, ಲಕ್ಕಪ್ಪ, ಠಾಣೆ ಸಿಬ್ಬಂದಿಗಳಾದ ವಿಷಕಂಠ, ಶರೀಫ್, ಸದ್ದಾಂ, ಹೊಯ್ಸಳ ಟ್ರಸ್ಟ್ ಅಧ್ಯಕ್ಷ ಎಂ.ಪಿ. ರಾಜೇಶ್, ಕೆ.ಆರ್.ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಅಹಿಂದ ಮುಖಂಡರಾದ ನಜರ್ಬಾದ್ ನಟರಾಜ್, ಲೋಕೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಸ್ವಾತಂತ್ರ್ಯ ಹೋರಾಟಗಾರ ಬಿ.ಎಸ್.ರಾಮಚಂದ್ರರಾವ್ ನಿಧನ



ಮೈಸೂರು,ಸೆ.2–ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಮೈಸೂರಿನ ಸರಸ್ವತಿಪುರಂ ನಿವಾಸಿ ಬಿ.ಎಸ್. ರಾಮಚಂದ್ರರಾವ್ (96) ಆ.30ರ ರಾತ್ರಿ ನಿಧನರಾದರು.

ವೃತ್ತಿಯಲ್ಲಿ ಮೆಕ್ಯಾನಿಕಲ್ ಇಂಜಿನಿಯರ್ ಆದ ಬಿ.ಎಸ್. ರಾಮಚಂದ್ರರಾವ್ ಅವರು ಚಿಕ್ಕವಯಸ್ಸಿನಲ್ಲಿಯೇ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿದ್ದರು. 1946ರಲ್ಲಿ ಹಾಸನದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ಪೊಲೀಸ್ ಠಾಣೆಯ ಮೇಲೆ ಭಾರತದ ತ್ರಿವರ್ಣ ಧ್ವಜವನ್ನು ಹಾರಿಸಿದ್ದಕ್ಕಾಗಿ ಜೈಲುವಾಸ ಅನುಭವಿಸಿದ್ದರು.

ಶ್ರೀಯುತರು ಪುತ್ರ ಅರುಣ್ ಬೆಳವಾಡಿ (ರೋಟರಿ ಮೈಸೂರು ಅಧ್ಯಕ್ಷ), ಸೊಸೆ, ಇಬ್ಬರು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ಹರಿಶ್ಚಂದ್ರ ಘಾಟ್‌ನಲ್ಲಿ ಆ.31ರಂದು ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಾರಣಾಂತಿಕ ಡೆಂಗೀ ಬಗ್ಗೆ ಜಾಗೃತಿ ಮೂಡಿಸಲು ಬರುತ್ತಿದೆ 'ಡೆಂಗೀ ರಥ'

ಎರಡು ತಿಂಗಳ ಕಾಲ ಮೈಸೂರು ಜಿಲ್ಲೆಯಲ್ಲಿ ಸಂಚಾರ


ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಜಲದರ್ಶಿನಿ ಅತಿಥಿ ಗೃಹದ ಬಳಿ ಸಂಸದ ಪ್ರತಾಪ್ ಸಿಂಹ, 'ಡೆಂಗೀ ರಥ'ಕ್ಕೆ ಶನಿವಾರ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮೇಯರ್ ಶಿವಕುಮಾರ್, ಇತರರು ಉಪಸ್ಥಿತರಿದ್ದರು.

ಮೈಸೂರು, ಸೆ.2 (ಎಸ್‌ಬಿಡಿ)– ಮೈಸೂರು ಜಿಲ್ಲೆಯಲ್ಲಿ ಡೆಂಗೀ ಬಗ್ಗೆ ಜಾಗೃತಿ ಮೂಡಿಸುವ 'ಡೆಂಗೀ ರಥ', ಶನಿವಾರದಿಂದ ಸಂಚಾರ ಆರಂಭಿಸಿದೆ.

ರಾಷ್ಟ್ರೀಯ ಆರೋಗ್ಯ ಅಭಿಯಾನ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಚೇರಿ ಸಹಯೋಗದಲ್ಲಿ ವಾಹನವೊಂದನ್ನು 'ಡೆಂಗೀ ರಥ'ವಾಗಿ ಪರಿವರ್ತಿಸಲಾಗಿದ್ದು, ಇಂದಿನಿಂದ ಸುಮಾರು ಎರಡು ತಿಂಗಳ ಕಾಲ ಮೈಸೂರು ಜಿಲ್ಲೆಯಲ್ಲಿ ಸಂಚರಿಸಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಿದೆ.

ಈ ರಥದಲ್ಲೇನಿದೆ?: 'ಡೆಂಗಿ ರಥ'ದ ಮೇಲೆ ಬೃಹತ್ ಗಾತ್ರದ ಸೊಳ್ಳೆ ಮಾದರಿ ಅಳವಡಿಸಲಾಗಿದ್ದು, ನಿರ್ಲಕ್ಷಿಸಿದರೆ ಸೊಳ್ಳೆ ಎಷ್ಟೊಂದು ಅಪಾಯಕಾರಿಯಾಗಲಿದೆ ಎನ್ನುವುದನ್ನು ಮನದಟ್ಟು ಮಾಡಿದಂತಿದೆ. 'ಎಲ್ಲರ ಸಹಭಾಗಿತ್ವದೊಂದಿಗೆ ಡೆಂಗೀಯನ್ನು ಸೋಲಿಸೋಣ', 'ಸೊಳ್ಳೆಯ ಕಡಿತ ಚಿಕ್ಕದು ಆದರೆ ಅಪಾಯ ದೊಡ್ಡದು', 'ಸಿಮೆಂಟ್ ತೊಟ್ಟಿ ಹಾಗೂ ಡ್ರಮ್ಮುಗಳಲ್ಲಿ ನೀರನ್ನು ವಾರಕ್ಕೆರಡು ಬಾರಿ ಖಾಲಿ ಮಾಡಿ, ಸ್ವಚ್ಛಗೊಳಿಸಿ'. ಹೀಗೆ ಹಲವು ಜಾಗೃತಿ ಫಲಕ ಅಳವಡಿಸಲಾಗಿದೆ. ಡೆಂಗೀ ಎಂದರೇನು?, ಈ ರೋಗ ಬಾಧಿಸಲು ಕಾರಣವೇನು?, ಹೇಗೆ ಹರಡುತ್ತದೆ? ಯಾವೆಲ್ಲಾ ಮುನ್ನೆಚ್ಚರಿಕೆ ಕ್ರಮ ವಹಿಸಬೇಕು?, ರೋಗ ಬಾಧಿಸಿದರೆ ಏನು ಮಾಡಬೇಕು? ಎಂಬಿತ್ಯಾದಿ ಮಹತ್ವದ ಮಾಹಿತಿಯನ್ನೊಳಗೊಂಡ ಚೌಕಟ್ಟುಗಳನ್ನು ವಾಹನದ ಸುತ್ತ ಅಳವಡಿಸಲಾಗಿದೆ. ಜೊತೆಗೊಂದು ಧ್ವನಿವರ್ಧಕವೂ ಇದೆ.

ಜನಪ್ರತಿನಿಧಿ–ಸಿಬ್ಬಂದಿ ಭಾಗಿ: ರಾಷ್ಟ್ರೀಯ ಆರೋಗ್ಯ ಅಭಿಯಾನ(ಎನ್‌ಹೆಚ್‌ಎಂ) ರೂಪಿಸಿರುವ ಈ ಜಾಗೃತಿ ಕಾರ್ಯಕ್ರಮಕ್ಕೆ ರಾಜ್ಯ ಸರ್ಕಾರ ಅನುದಾನ ನೀಡಿದ್ದು, ಆರೋಗ್ಯ ಇಲಾಖೆ ಹಾಗೂ ವಿವಿಧ ಘಟಕಗಳ ಸಹಯೋಗದಲ್ಲಿ ಅನುಷ್ಠಾನಗೊಳಿಸಲಾಗಿದೆ. ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ. ಕುಮಾರಸ್ವಾಮಿ ಶುಕ್ರವಾರ 'ಡೆಂಗೀ ರಥ'ಕ್ಕೆ ವಿಧ್ಯುಕ್ತ ಚಾಲನೆ ನೀಡಿದ್ದರು. ಇಂದು ಮೈಸೂರು ನಗರದ ವಿವಿಧೆಡೆ ಸಂಚರಿಸಿ, ಜಾಗೃತಿ ಮೂಡಿಸಿದೆ. ಜಿಲ್ಲೆಯಾದ್ಯಂತ ಈ ರಥ ಸಂಚರಿಸಲಿದ್ದು, ಆಯಾ ಭಾಗದ ಜನಪ್ರತಿನಿಧಿಗಳೂ ಸ್ಥಳೀಯ ಜಾಗೃತಿಗೆ ಚಾಲನೆ ನೀಡಲಿದ್ದಾರೆ. ಆರೋಗ್ಯ ಇಲಾಖೆ ಹಾಗೂ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಜಾಗೃತಿ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಶಾಲಾ–ಕಾಲೇಜು ಸಮೀಪ ಸೇರಿದಂತೆ ಜನಸಂದಣಿ ಹೆಚ್ಚಿರುವ ಸ್ಥಳಗಳಲ್ಲಿ ವಾಹನವನ್ನು ಕೆಲಕಾಲ ನಿಲ್ಲಿಸಿ, ಕರಪತ್ರ ಹಂಚಿ, ಧ್ವನಿವರ್ಧಕದ ಮೂಲಕ 'ಡೆಂಗೀ' ಜಾಗೃತಿ ಮೂಡಿಸಲಾಗುತ್ತದೆ.

10 ಸಾವಿರ ಟೆಸ್ಟಿಂಗ್ ಗುರಿ: ಯಾವುದೇ ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕೆ ಜಾಗೃತಿ ಬಹಳ ಮುಖ್ಯ. ಸಾರ್ವಜನಿಕರು ಮುನ್ನೆಚ್ಚರಿಕೆ ವಹಿಸಿದರೆ ರೋಗಗಳಿಂದ ಸಾಧ್ಯವಾದಷ್ಟು ಪಾರಾಗಬಹುದು. ಈ ನಿಟ್ಟಿನಲ್ಲಿ ನಗರ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ವ್ಯಾಪಕ ಜಾಗೃತಿ ಕಾರ್ಯಕ್ರಮದ ಅಗತ್ಯತೆ ಬಗ್ಗೆ ಹಿಂದೆಯೇ ಸರ್ಕಾರದ ಗಮನಕ್ಕೆ ತಂದಿದ್ದೆವು. ಇದೀಗ 'ಡೆಂಗೀ ರಥ' ಸಂಚಾರ ಆರಂಭಿಸಲಾಗಿದೆ.

ಕಳೆದ ವರ್ಷ ಜಿಲ್ಲೆಯಲ್ಲಿ ಸುಮಾರು 4,500 ಪರೀಕ್ಷೆ (ಟೆಸ್ಟಿಂಗ್) ನಡೆಸಲಾಗಿತ್ತು. ಆದರೆ ಪ್ರಸಕ್ತ ವರ್ಷದಲ್ಲಿ ಜನವರಿಯಿಂದ ಈವರೆಗೆ 4,600ಕ್ಕೂ ಹೆಚ್ಚು ಟೆಸ್ಟಿಂಗ್ ನಡೆಸಿದ್ದು, 426 ಡೆಂಗೀ ಪ್ರಕರಣ ಪತ್ತೆಯಾಗಿವೆ. ಗ್ರಾಮೀಣ ಪ್ರದೇಶದಲ್ಲೂ ಟೆಸ್ಟಿಂಗ್ ಸಂಖ್ಯೆ ಹೆಚ್ಚಿಸಲಾಗಿದೆ. ವರ್ಷಾಂತ್ಯಕ್ಕೆ 10 ಸಾವಿರ ಟೆಸ್ಟಿಂಗ್ ಗುರಿಯೊಂದಿಗೆ ಕಾರ್ಯ ನಿರ್ವಹಿಸಲಾಗುತ್ತಿದೆ.

ಟೆಸ್ಟಿಂಗ್ ಹೆಚ್ಚಿದಂತೆ ಪತ್ತೆಯಾಗುವ ಪ್ರಕರಣಗಳೂ ಜಾಸ್ತಿಯಾಗಬಹುದು. ಆದರೆ ಇದರಿಂದ ಸಕಾಲಕ್ಕೆ ರೋಗಿಗಳಿಗೆ ಚಿಕಿತ್ಸೆ ನೀಡಿ, ಗುಣಪಡಿಸಲು ಅನುವಾಗುತ್ತದೆ ಎಂದು ಜಿಲ್ಲಾ ರೋಗ ವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಎಸ್. ಚಿದಂಬರ ತಿಳಿಸಿದ್ದಾರೆ.

ಮೈಸೂರು ನಗರದಲ್ಲೂ 'ಡೆಂಗೀ ರಥ' ಸಂಚಾರ


ಕೃಷ್ಣರಾಜ ಕ್ಷೇತ್ರದಲ್ಲಿ 'ಡೆಂಗೀ ರಥ' ಸಂಚಾರಕ್ಕೆ ಶಾಸಕ ಟಿ.ಎಸ್.ಶ್ರೀವತ್ಸ ಹಸಿರು ನಿಶಾನೆ ತೋರಿದರು.

ಮೈಸೂರು, ಸೆ.2(ಎಸ್‌ಬಿಡಿ)– ಮೈಸೂರು ನಗರದಲ್ಲಿ 'ಡೆಂಗೀ ರಥ' ಸಂಚಾರಕ್ಕೆ ಸಂಸದ ಪ್ರತಾಪ್ ಸಿಂಹ ಹಾಗೂ ಮೇಯರ್ ಶಿವಕುಮಾರ್ ಜಲದರ್ಶಿನಿ ಅತಿಥಿ ಗೃಹದ ಬಳಿ ಚಾಲನೆ ನೀಡಿದರೆ, ಕೃಷ್ಣರಾಜ ಕ್ಷೇತ್ರದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಹಸಿರು ನಿಶಾನೆ ತೋರಿದರು.

ಈ ವೇಳೆ ಶಾಸಕ ಶ್ರೀವತ್ಸ ಮಾತನಾಡಿ, ಎಲ್ಲರೂ ಆರೋಗ್ಯಕ್ಕೆ ಆದ್ಯತೆ ನೀಡಬೇಕು. ಮಳೆಗಾಲದಲ್ಲಿ ಮನೆಯ ಸುತ್ತ ನೀರು ನಿಲ್ಲದಂತೆ ಕ್ರಮ ವಹಿಸಬೇಕು. ನೀರಿನ ತೊಟ್ಟಿಗಳು, ಡ್ರಮ್‌ಗಳು, ಏರ್ ಕೂಲರ್‌ಗಳನ್ನು ವಾರಕ್ಕೊಮ್ಮೆ ಶುಚಿ ಮಾಡಬೇಕು. ಮನೆಯೊಳಗೆ ಸೊಳ್ಳೆ ಬರದಂತೆ ಎಚ್ಚರಿಕೆ ವಹಿಸಬೇಕು. ಆಟದ ಮೈದಾನ ಮತ್ತು ಬಯಲಿನಲ್ಲಿ ಟೈರು, ಎಳನೀರು ಚಿಪ್ಪು, ಹೂವಿನ ಕುಂಡಗಳು, ಒಡೆದ ಬಾಟಲಿ, ಖಾಲಿ ಲೋಟಗಳು, ಬಾಟಲ್‌ಗಳಲ್ಲಿ ನೀರು ತುಂಬದಂತೆ ನೋಡಿಕೊಳ್ಳಬೇಕು. ಸೊಳ್ಳೆ ಪರದೆ ಬಳಕೆ ಸೇರಿದಂತೆ ಸೊಳ್ಳೆಗಳಿಂದ ರಕ್ಷಿಸಿಕೊಳ್ಳುವ ಮಾರ್ಗೋಪಾಯಗಳನ್ನು ಅನುಸರಿಸಬೇಕು ಎಂದು ಸಲಹೆ ನೀಡಿದರು.

ಡೆಂಗೀ ರಥವು ಕೃಷ್ಣರಾಜ ಕ್ಷೇತ್ರದಲ್ಲಿ 3 ದಿನಗಳ ಕಾಲ ಸಂಚರಿಸಲಿದ್ದು, ವೃತ್ತಗಳು, ಮಾರ್ಕೆಟ್, ಶಾಲಾ–ಕಾಲೇಜು ಸೇರಿದಂತೆ ಜನಸಂದಣಿ ಹೆಚ್ಚಿರುವ ಸ್ಥಳದಲ್ಲಿ ಜಾಗೃತಿ ಮೂಡಿಸಲು ಕಾರ್ಯಕ್ರಮ ರೂಪಿಸಲಾಗಿದೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಿರುವ ರಾಷ್ಟ್ರೀಯ ಆರೋಗ್ಯ ಅಭಿಯಾನ ಸಾರ್ಥಕವಾಗಬೇಕಾದರೆ ಸಾರ್ವಜನಿಕರು ಜಾಗೃತರಾಗಬೇಕು. ಡೆಂಗೀ ವಿರುದ್ಧದ ಹೋರಾಟಕ್ಕೆ ಎಲ್ಲರೂ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯೆ ಸೌಮ್ಯ ಉಮೇಶ್, ಆರೋಗ್ಯ ಇಲಾಖೆ ಹಾಗೂ ಪಾಲಿಕೆ ಅಧಿಕಾರಿಗಳು, ಬಿಜೆಪಿ ವಕ್ತಾರ ಮಾ.ಮೋಹನ್, ಜಿಲ್ಲಾ ಓಬಿಸಿ ಘಟಕದ ಅಧ್ಯಕ್ಷ ಜೋಗಿ ಮಂಜು, ಪ್ರದೀಪ್, ಕಿಶೋರ್, ಕೀರ್ತಿ, ನಿಶಾಂತ್, ಶಿವರಾಜ್ ಮತ್ತಿತರರು ಉಪಸ್ಥಿತರಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಚಾಮುಂಡೇಶ್ವರಿಗೆ ಏನು ಮಾಡಿದ್ದಾರೆ ಎಂದು ನಿಮಗೂ ಗೊತ್ತು; ನಮಗೂ ಗೊತ್ತು!

ಜಿಟಿಡಿ ಹೇಳಿಕೆಗೆ ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡರ ಪ್ರತಿಕ್ರಿಯೆ


ಜಿ.ಟಿ.ದೇವೇಗೌಡ


ಕೆ. ಮರೀಗೌಡ

ಮೈಸೂರು, ಸೆ.2–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಗ್ಗೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ನೀಡಿರುವ ಹೇಳಿಕೆಯನ್ನು ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ ತೀವ್ರವಾಗಿ ಖಂಡಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, 1983ರಿಂದ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಗೆದ್ದು, ಸಿದ್ದರಾಮಯ್ಯ ಯಾವ ಪ್ರಮಾಣದಲ್ಲಿ ಅಭಿವೃದ್ಧಿ ಕೆಲಸ ಮಾಡಿದ್ದಾರೆ ಎಂಬುದು ನಿಮ್ಮ–ನಮ್ಮೆಲ್ಲರಿಗೂ ಗೊತ್ತಿರುವ ವಿಷಯ. ನಾನು ಹಾಗೂ ನೀವು (ಜಿಟಿಡಿ) ಅವರ ಜೊತೆಯಲ್ಲಿದ್ದೆವು. ನೀವು ಅವರಿಂದ ಎಲ್ಲಾ ಅಧಿಕಾರವನ್ನು ಅನುಭವಿಸಿರುವುದು ರಾಜ್ಯಕ್ಕೇ ಗೊತ್ತಿದೆ ಎಂದಿದ್ದಾರೆ.

1983ಕ್ಕೆ ಹಿಂದೆ ಚಾಮುಂಡೇಶ್ವರಿ ಕ್ಷೇತ್ರ ಹೇಗಿತ್ತು? ನಂತರ ಅದನ್ನು ಸಿದ್ದರಾಮಯ್ಯ ಯಾವ ಪ್ರಮಾಣದಲ್ಲಿ ಅಭಿವೃದ್ಧಿ ಮಾಡಿದ್ದಾರೆ ಎಂಬುದು ರಾಜ್ಯದ ಜನತೆಗೆ ತಿಳಿದಿದೆ ಎಂದಿರುವ ಅವರು, ಸಿದ್ದರಾಮಯ್ಯ ಹಣಕಾಸು ಸಚಿವರಾಗಿದ್ದಾಗ ವರುಣ ನಾಲೆ ಪೂರ್ಣಗೊಳಿಸಿದರು. ಇಲವಾಲ ಹೋಬಳಿಯ 52 ಗ್ರಾಮಗಳಿಗೆ ಕಾವೇರಿ ನದಿ ಮೂಲಕ ಕುಡಿಯುವ ನೀರನ್ನು ಕೊಟ್ಟಿರುವುದು, ಜಯಪುರ ಹೋಬಳಿಯ 40 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು, ಸುಮಾರು 26 ಗ್ರಾಮಗಳಿಗೆ, ಬೀರಿಹುಂಡಿ ಪಂಚಾಯಿತಿ, ಮರಟಿಕ್ಯಾತನಹಳ್ಳಿ, ಬೆಳವಾಡಿ ಪಂಚಾಯಿತಿ ಗ್ರಾಮಗಳಿಗೆ ಕಾವೇರಿ ನದಿಯಿಂದ ಕುಡಿಯುವ ನೀರು ಕೊಟ್ಟಿರುವುದು, ಉಂಡುವಾಡಿ ಯೋಜನೆಗಳಿಗೆ ಅನುಮತಿ ನೀಡಿ 25 ಎಕರೆ ಜಮೀನು ಮಂಜೂರು ಮಾಡಿರುವುದು ಹಾಗೂ ಸಚಿವ ಸಂಪುಟದಲ್ಲಿ ಅನುಮೋದನೆ ನೀಡಿರುವುದು ಸಿದ್ದರಾಮಯ್ಯನವರ ಕೊಡುಗೆ ಎಂದು ಕೆ.ಮರೀಗೌಡ ಹೇಳಿದ್ದಾರೆ.

2013ರಿಂದ 2018ರವರೆಗೆ ಅವರು ಮುಖ್ಯಮಂತ್ರಿಯಾಗಿದ್ದಾಗ ಚಾಮುಂಡೇಶ್ವರಿ ಕ್ಷೇತ್ರಕ್ಕೆ ನೀಡಿರುವ ಅನುದಾನ ಸುಮಾರು 500 ಕೋಟಿಗೂ ಹೆಚ್ಚು ಎಸ್‌ಸಿಪಿ ಮತ್ತು ಟಿಎಸ್‌ಪಿ, ಸಾಮಾನ್ಯ ವರ್ಗದ ಗ್ರಾಮಗಳಿಗೆ ರಸ್ತೆ, ಚರಂಡಿ, ಅಂಬೇಡ್ಕರ್ ಸಮುದಾಯ ಭವನಗಳು, ವಾಲ್ಮೀಕಿ ಸಮುದಾಯ ಭವನಗಳು, ಎಲ್ಲಾ ಜನಾಂಗದವರಿಗೂ ಸಮುದಾಯ ಭವನಗಳು, ಕೆರೆಗಳಿಗೆ ನೀರು ತುಂಬಿಸುವ ಯೋಜನೆಗಳಿಗೆ 67 ಕೋಟಿ ನೀಡಿರುವುದು, ಗ್ರಾಮೀಣ ಪ್ರದೇಶಗಳಿಗೆ 5 ಸಾವಿರ ಮನೆಗಳು, ನಗರ ಪ್ರದೇಶಕ್ಕೆ 2446 ಮನೆಗಳನ್ನು ಸಿದ್ದರಾಮಯ್ಯ ಕೊಟ್ಟಿದ್ದಾರೆ ಎಂದು ಅವರು ತಿಳಿಸಿದ್ದಾರೆ.

2023ರ ಆಯ–ವ್ಯಯಗಳ ಮೇಲೆ ಮಾತನಾಡಿರುವ ನೀವು (ಜಿಟಿಡಿ), ಸಿದ್ದರಾಮಯ್ಯ ಅವರ ಕಾರ್ಯಗಳನ್ನು ಹಾಡಿ–ಹೊಗಳಿ ಈಗ ಈ ರೀತಿ ಮಾತನಾಡುವುದನ್ನು ನೋಡಿದರೆ, ಸಿದ್ದರಾಮಯ್ಯನವರ ವಿರುದ್ಧ ಈ ರೀತಿ ಮಾತನಾಡುವ ನಿಮ್ಮನ್ನು ರಾಜ್ಯದ ಜನತೆ ತಿರಸ್ಕಾರದ ಮನೋಭಾವದಿಂದ ನೋಡುವುದನ್ನು ಬಯಸುತ್ತೀರಾ ಎಂದು ಪ್ರಶ್ನಿಸಿದ್ದಾರೆ.

ಸಾಲ, ಸಹಾಯಧನಕ್ಕೆ ಅರ್ಜಿ ಆಹ್ವಾನ

ಮೈಸೂರು, ಸೆ.2– ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ವತಿಯಿಂದ 2023–24ನೇ ಸಾಲಿಗೆ ಮತೀಯ ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ ಹಾಗೂ ಆಂಗ್ಲೋ ಇಂಡಿಯನ್ ಜನಾಂಗದವರಿಗೆ ವಿವಿಧ ಯೋಜನೆಯಡಿಯಲ್ಲಿ ನಿಗಮದಿಂದ ಸಾಲ ಹಾಗೂ ಸಹಾಯಧನ ಸೌಲಭ್ಯಗಳನ್ನು ನೀಡಲು ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಿದೆ.

ಶ್ರಮ ಶಕ್ತಿ ಯೋಜನೆ, ಶ್ರಮಶಕ್ತಿ ವಿಶೇಷ ಮಹಿಳಾ ಯೋಜನೆ, ವೃತ್ತಿ ಪ್ರೋತ್ಸಾಹ ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ, ಗಂಗಾ ಕಲ್ಯಾಣ ಯೋಜನೆ, ವಿದೇಶ ವ್ಯಾಸಂಗಕ್ಕೆ ಸಾಲ ಯೋಜನೆ, ಅರಿವು ಯೋಜನೆ, ಸಮುದಾಯ ಆಧಾರಿತ ತರಬೇತಿ ಯೋಜನೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಎಲ್ಲಾ ಯೋಜನೆಗಳಿಗೆ (https://kmdconline.karnataka.gov.in) ಆನ್‌ಲೈನ್‌ನಲ್ಲಿ ನೋಂದಣಿ ಮಾಡಲು ಸೆ.25 ಕೊನೆಯ ದಿನಾಂಕವಾಗಿದೆ. ಆನ್‌ಲೈನ್‌ನಲ್ಲಿ ಭರ್ತಿಯಾದ ಅರ್ಜಿಗಳನ್ನು ಪ್ರಿಂಟೌಟ್ ತೆಗೆದು ಸಂಬಂಧಿಸಿದ ಎಲ್ಲಾ ದಾಖಲಾತಿಗಳೊಂದಿಗೆ ಜಿಲ್ಲಾ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರ ಕಚೇರಿ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ(ನಿ) ಮೌಲಾನ ಅಜಾದ್ ಭವನ 1ನೇ ಮಹಡಿ, ಬೆಂಗಳೂರು–ಮೈಸೂರು ಮುಖ್ಯರಸ್ತೆ, ಶೋಭಗಾರ್ಡನ್ ಪಕ್ಕ ಸುಭಾಷ್‌ನಗರ, ಮೈಸೂರು ಇವರನ್ನು ಕಚೇರಿ ವೇಳೆಯಲ್ಲಿ ಅಥವಾ ಕಚೇರಿ ದೂ. ಸಂಖ್ಯೆ: 0821–2430080 ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ವ್ಯವಸ್ಥಾಪಕ ಬಿ.ಎನ್. ನಾಗೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಸಾನ್ವಿಗೆ ಯೋಗದಲ್ಲಿ ಪ್ರಥಮ ಬಹುಮಾನ



ಮೈಸೂರು,ಸೆ.2–ನೇಪಾಳದ ಪೋಕ್ರಾದಲ್ಲಿ ನಡೆದ ಇಂಡೋ–ನೇಪಾಳ್ ಆಹ್ವಾನಿತ ಯೋಗ ಚಾಂಪಿಯನ್‌ಶಿಪ್–2023 ಪಂದ್ಯಾವಳಿಯಲ್ಲಿ 10–12 ವರ್ಷ ವಯೋಮಾನದ ಯೋಗ ಸ್ಪರ್ಧೆಯಲ್ಲಿ ಮೈಸೂರಿನ ಸಾನ್ವಿ ಪ್ರಕಾಶ್ ಪ್ರಥಮ ಬಹುಮಾನ ಪಡೆದಿದ್ದಾರೆ. ಈಕೆ ಯೋಗ ಟೀಚರ್ ಶೈಲಜಾ ಬಳಿ ತರಬೇತಿ ಪಡೆಯುತ್ತಿದ್ದಾರೆ.

ಜಯಲಕ್ಷ್ಮಿ ಕೊಡವ ಅಸೋಸಿಯೇಷನ್‌ನ ವಾರ್ಷಿಕ ಕೂಟ


ವ್ಯವಸ್ಥಾಪನಾ ಸಮಿತಿ ಸದಸ್ಯರು: ಕುಳಿತಿರುವವರು (ಎಡದಿಂದ ಬಲಕ್ಕೆ): ಮುಕ್ಕಾಟ್ಟೀರಾ ಎಸ್.ಸೋಮಯ್ಯ (ಖಜಾಂಚಿ), ಜಮ್ಮಡ ಗಣೇಶ್ ಅಯ್ಯಣ್ಣ (ಕಾರ್ಯದರ್ಶಿ), ಬಾಲ್ಯಾಂಡ ಪಿ.ಉತ್ತಪ್ಪ (ಅಧ್ಯಕ್ಷ), ಪಾಂಡಿಯಂಡ ಯುಗಿರೀಶ್ (ಉಪಾಧ್ಯಕ್ಷ), ಕೋದಂಡ ಚಿತ್ರಾ ಮೇದಪ್ಪ, ಕೋಡಿರ ಜ್ಯೋತಿ ಪೂಣಚ್ಚ. ನಿಂತಿರುವವರು (ಎಡದಿಂದ ಬಲಕ್ಕೆ): ಅಜ್ಜಿನಿಕಂಡ ಮನೀಶ್ ಪೆಮ್ಮಯ್ಯ, ಚೋನಿರಾ ಕಾರಿಯಪ್ಪ, ಬಿಡ್ಡಂಡ ಬೇಬಾ ಗಣಪತಿ, ಪಟ್ಟಡ ಜೈಕುಮಾರ್, ಕಂಜಿತಂಡ ಜಯಪ್ರಕಾಶ್, ಪಾಂಡಿಯಂಡ ಅನಿಲ್ ಕಾರಿಯಪ್ಪ, ತಾತಂಡ ನಿಶಿ ಪೊಣಚ್ಚ, ಮಾಚಂಡ ರೇಷ್ಮಾ, ಮಲ್ಲಂಗಡ ಶ್ವೇತಾ ಜಯಪ್ರಕಾಶ್.


ಶಾಸಕ ಎ.ಎಸ್. ಪೊನ್ನಣ್ಣ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಸೆ.2– ಮೈಸೂರಿನ ಜಯಲಕ್ಷ್ಮಿ ಕೊಡವ ಅಸೋಸಿಯೇಷನ್‌ನ 18ನೇ ವಾರ್ಷಿಕ ಕೂಟ ಇತ್ತೀಚೆಗೆ ಜಯಲಕ್ಷ್ಮಿಪುರಂನ ಕೊಡಗು ಸಹಕಾರ ಸಂಘದಲ್ಲಿ ನಡೆಯಿತು.

ಮುಖ್ಯ ಅತಿಥಿಗಳಾಗಿ ವಿರಾಜಪೇಟೆ ಶಾಸಕ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ಭಾಗವಹಿಸಿದ್ದರು. ಕಾರ್ಯಕ್ರಮ ಪಂಡಿಯಂಡ ಅನಿಲ್ ಕಾರಿಯಪ್ಪ ಅವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು. ಸಂಘದ ಅಧ್ಯಕ್ಷ ಬಾಲ್ಯಂಡ ಉತ್ತಪ್ಪ ಸಭಿಕರನ್ನು ಸ್ವಾಗತಿಸಿ, ಅಧ್ಯಕ್ಷತೆ ವಹಿಸಿದ್ದರು. ಕಳೆದ ವರ್ಷದ ತಂಡದ ಸದಸ್ಯರು ಮುಂದಿನ 2023–2024 ಸಾಲಿಗೆ ಮುಂದುವರಿದು, ಕಾರ್ಯನಿರ್ವಹಿಸಲಿದ್ದಾರೆ. ಬಾಲ್ಯಾಂಡ ಪಿ.ಉತ್ತಪ್ಪ ಅಧ್ಯಕ್ಷರಾಗಿ, ಪಾಂಡಿಯಂಡ ಗಿರೀಶ್ ಉಪಾಧ್ಯಕ್ಷರಾಗಿ, ಜಮ್ಮಡ ಗಣೇಶ್ ಅಯ್ಯಣ್ಣ ಕಾರ್ಯದರ್ಶಿಯಾಗಿ, ಮುಕ್ಕಾಟ್ಟೀರ ಎಸ್.ಸೋಮಯ್ಯ ಖಜಾಂಚಿಯಾಗಿದ್ದಾರೆ.

ಲೇಖಕಿ ಡಾ. ಲತಾ ಮುತ್ತಣ್ಣ ಅವರು 'ದಿ ಜೈಲ್ ಅಂಡ್ ಅದರ್ ಟೇಲ್ಸ್' ಎಂಬ 3ನೇ ಪುಸ್ತಕ ಸಂಪಾದಿಸಿದ್ದಕ್ಕಾಗಿ ಅವರನ್ನು ಸನ್ಮಾನಿಸಲಾಯಿತು. ಡಾ. ಗೀತಾ ಕಾರಿಯಪ್ಪ ಚೋನಿರ ಅವರು ತಮ್ಮ ಎರಡನೇ ಇಂಗ್ಲೀಷ್ ಸ್ಟೋರಿ ಬುಕ್ 'ಗರ್ಲ್ ವಿತ್ ದಿ ಡೈರಿ' (ಕೊಡಗಿನ ಒಂದು ಕಥೆ) ಬರೆದಿದ್ದಕ್ಕಾಗಿ ಅವರನ್ನು ಸನ್ಮಾನಿಸಲಾಯಿತು.

ಡಾ. ವಿನಾಶ್ ಪೊನ್ನಪ್ಪ ಮತ್ತು ನಿಶಾ ಅವರ ಪುತ್ರಿ 8ನೇ ತರಗತಿಯ ಮುಕ್ಕಾಟ್ಟೀರಾ ದಿಯಾ ಪೊನ್ನಪ್ಪ ಅವರನ್ನು ಗುರುತಿಸಿ ಕಾರ್ನೆಲ್ ಯೂನಿವರ್ಸಿಟಿ ನ್ಯೂಯಾರ್ಕ್‌ನಲ್ಲಿ ವಾರಗಳ ಕಾಲ ನಡೆದ ಅಂತರರಾಷ್ಟ್ರೀಯ ಚರ್ಚಾ ಕಾರ್ಯಾಗಾರಕ್ಕೆ ಆಯ್ಕೆ ಮಾಡಲಾಯಿತು. ಕಾರ್ಯಾಗಾರವು ಭಾಷಣ ಕೌಶಲ್ಯಗಳನ್ನು ಪರಿಷ್ಕರಿಸುವ ಗುರಿಯನ್ನು ಹೊಂದಿದೆ. 7ನೇ ತರಗತಿಯ ಎನ್.ಮಲ್ಲಂಗಡ ಎನ್.ಜಯಪ್ರಕಾಶ್ ಮತ್ತು ಶ್ವೇತಾ ಅವರ ಪುತ್ರಿ ದೇವಾಂಶಿ ಅವರನ್ನು ಏರ್ ರೈಫಲ್ ಶೂಟಿಂಗ್ ಸ್ಪರ್ಧೆಯಲ್ಲಿನ ಸಾಧನೆಗಳನ್ನು ಗುರುತಿಸಲಾಯಿತು. ಅಧ್ಯಕ್ಷತೆ ವಹಿಸಿದ್ದ ಬಾಲ್ಯಂಡ ಉತ್ತಪ್ಪ ಸಭೆಯನ್ನು ಉದ್ದೇಶಿಸಿ ಮಾತನಾಡಿ, ಸಂಘದ ಶ್ರೇಯೋಭಿವೃದ್ಧಿಗೆ ಇರುವ ವಿವಿಧ ಸಮಸ್ಯೆಗಳ ಬಗ್ಗೆ ಚರ್ಚಿಸಿದರಲ್ಲದೆ, ಸಂಘದ ಎಲ್ಲಾ ಸದಸ್ಯರು ಒಳ್ಳೆಯ ಮತ್ತು ಕೆಟ್ಟದ್ದಕ್ಕೂ ಸಕ್ರಿಯವಾಗಿ ಭಾಗವಹಿಸುವಂತೆ ಮನವಿ ಮಾಡಿದರು.

ಖಜಾಂಚಿ ಮುಕ್ಕಾಟ್ಟೀರಾ ಸೋಮಯ್ಯ 2022–23ನೇ ಸಾಲಿನ ಆಯವ್ಯಯ ಮಂಡಿಸಿದರು. ಇದನ್ನು ಸರ್ವ ಸದಸ್ಯರ ಸಭೆ ಅಂಗೀಕರಿಸಿತು.

ನೂತನವಾಗಿ ಆಯ್ಕೆಯಾದ ವಿರಾಜಪೇಟೆ ಶಾಸಕ ಅಜ್ಜಿಕುಟ್ಟೀರಾ ಎಸ್.ಪೊನ್ನಣ್ಣ ಅವರನ್ನು ಸನ್ಮಾನಿಸಲಾಯಿತು. ಎ.ಎಸ್.ಪೊನ್ನಣ್ಣ ಮಾತನಾಡಿ, ಕೊಡಗಿನಲ್ಲಿ ಸಮಸ್ಯೆಗಳ ಸರಮಾಲೆಯೇ ಇದ್ದು, ತಾವು ಕೊಡವರು ಮತ್ತು ಕ್ಷೇತ್ರದ ಜನರ ಸಹಕಾರದಿಂದ ಅದನ್ನು ಪರಿಹರಿಸುವುದಾಗಿ ತಿಳಿಸಿದರು. ಮುಕ್ಕಾಟ್ಟೀರ ಸೋಮಯ್ಯ ಸಮಾರಂಭದ ಮುಖ್ಯಸ್ಥರಾಗಿ ಇಡೀ ಕಾರ್ಯಕ್ರಮವನ್ನು ನಿರ್ವಹಿಸಿದರು. ಪಾಂಡಿಯಂಡ ಯು. ಗಿರೀಶ್ ವಂದಿಸಿದರು.

ಮೈಸೂರು ಮಿತ್ರ ಭಾನುವಾರ 3 ಸೆಪ್ಟೆಂಬರ್ 2023

3ನೇ ದಿನಕ್ಕೆ ಹಿತರಕ್ಷಣಾ ಸಮಿತಿ ಹೋರಾಟ: ಎಎಪಿ ಸಾಥ್



ಮಂಡ್ಯ,ಸೆ.2– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ನಿಲ್ಲಿಸಬೇಕೆಂದು ಒತ್ತಾಯಿಸಿ ನಗರದ ಸರ್‌ಎಂವಿ ಪ್ರತಿಮೆ ಮುಂಭಾಗ ನಡೆಯುತ್ತಿರುವ ರೈತ ಹಿತರಕ್ಷಣಾ ಸಮಿತಿಯ ಬೃಹತ್ ಧರಣಿ ಮೂರನೇ ದಿನಕ್ಕೆ ಕಾಲಿಟ್ಟಿದ್ದು, ಆಮ್ ಆದ್ಮಿ ಪಕ್ಷದ ರಾಜ್ಯಾಧ್ಯಕ್ಷ ಹಾಗೂ ಹಿರಿಯ ನಟ ಮುಖ್ಯಮಂತ್ರಿ ಚಂದ್ರು ಸೇರಿದಂತೆ ಪಕ್ಷದ ನೂರಾರು ಮುಖಂಡರು ಭಾಗಿಯಾಗಿ ಶನಿವಾರ ಬೆಂಬಲ ಸೂಚಿಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಎಎಪಿ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು, ಕಾವೇರಿ ನದಿ ನೀರಿನ ವಿಚಾರದಲ್ಲಿ ಕನ್ನಡ ನಾಡಿಗೆ ಅನ್ಯಾಯವಾಗಿದ್ದರೂ, ಜಲಾಶಯಗಳು ಬರಿದಾಗುತ್ತಿದ್ದರೂ ಮೌನವಾಗಿರುವ ರಾಜ್ಯದ ಸಂಸದರು ದನಿ ಎತ್ತದೇ ರಾಜ್ಯದ ಹಿತ ಕಾಯಲು ವಿಫಲರಾಗಿದ್ದಾರೆ. ಬಿಜೆಪಿ ಸಂಸದರು, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಎದುರು ಗುಲಾಮರಾಗಿದ್ದಾರೆ. ಮೇಕೆದಾಟು ಪಾದಯಾತ್ರೆ ಮಾಡಿದ ಕಾಂಗ್ರೆಸ್ ಸಂಸದ ಸದ್ದು ಮಾಡುತ್ತಿಲ್ಲ. ಜೆಡಿಎಸ್ ಸಂಸದರ ಸದಸ್ಯತ್ವ ಅನರ್ಹಗೊಂಡಿದೆ. ಮಂಡ್ಯದಲ್ಲಿ ಗೆದ್ದಿರುವ ಪಕ್ಷೇತರ ಸಂಸದೆ ಸುಮಲತಾ ಅಂಬರೀಶ್ ಅಧಿಕಾರಕ್ಕಾಗಿ ಎಲ್ಲಾ ಪಕ್ಷಗಳ ಜೊತೆ ಸಂಬಂಧ ಸುಧಾರಿಸಿಕೊಳ್ಳಲು ಮುಂದಾಗಿ ಊಸರವಳ್ಳಿ ನಾಟಕವಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಕಾವೇರಿ ವಿಚಾರವಾಗಿ ಅಂಬರೀಶ್ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಆದರೆ ಇವರಿಗೆ ಏನಾಗಿದೆ, ಬೀದಿಗಿಳಿದು ಹೋರಾಡಿ ಕೇಂದ್ರ ಸರ್ಕಾರದ ವಿರುದ್ಧ ದನಿ ಎತ್ತಬೇಕಾದವರು ಅಧಿಕಾರ ದಾಹಕ್ಕಾಗಿ ಸುಮ್ಮನಿದ್ದಾರಾ? ರಾಜ್ಯದ ಶಾಸಕರು ಸಹ ಕಾವೇರಿ ವಿಚಾರದಲ್ಲಿ ಸುಮ್ಮನಿದ್ದಾರೆ. ತಮ್ಮದೇ ಸರ್ಕಾರವನ್ನು ಪ್ರಶ್ನೆ ಮಾಡುತ್ತಿಲ್ಲ. ರೈತರ ಹಿತ ಕಾಪಾಡಲು ಮುಂದಾಗುತ್ತಿಲ್ಲ ಮತ್ತೊಂದೆಡೆ ಗ್ಯಾರಂಟಿ ಹೆಸರಿನಲ್ಲಿ ಸಂಭ್ರಮ ಮಾಡುತ್ತಿದ್ದಾರೆ ಎಂದು ಹೇಳಿದರು.

ಕಾವೇರಿ ವಿಚಾರದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರವೇ ಹೋರಾಟ ಮಾಡಬೇಕಾಗಿತ್ತು ಆದರೆ ನ್ಯಾಯಾಲಯಕ್ಕೆ ಹೆದರಿ ನೀರು ಬಿಡಬೇಕಾದ ಪರಿಸ್ಥಿತಿ ಇದೆ ಎನ್ನುವ ಸರ್ಕಾರ ರಾಜ್ಯದ ಜನತೆಗೆ ಹೆದರೊಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ನುಡಿದಂತೆ ನಡೆಯಲಿಲ್ಲ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆಡಿದ ಮಾತು ಉಳಿಸಿಕೊಳ್ಳಲಿಲ್ಲ. ಕಾವೇರಿ ವಿಚಾರದಲ್ಲಿ ರಾಷ್ಟ್ರೀಯ ಪಕ್ಷಗಳ ಅಧಿಕಾರದಾಹದಿಂದ ರಾಜ್ಯಕ್ಕೆ ನಿರಂತರ ಅನ್ಯಾಯವಾಗುತ್ತಿದೆ. ಈ ಎರಡು ಪಕ್ಷಗಳ ಅಧಿಕಾರ ಕೇಂದ್ರಿತ ರಾಜಕಾರಣ ಸಂಕಷ್ಟ ತಂದೊಡ್ಡಿದೆ. ಇದುವರೆಗೆ ರಾಜ್ಯವನ್ನಾಳಿದ ಸರ್ಕಾರಗಳು ಕಾವೇರಿ ವಿಚಾರದಲ್ಲಿ ನ್ಯಾಯ ದೊರಕಿಸಿಕೊಡಲು ಸಾಧ್ಯವಾಗಿಲ್ಲ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷಗಳು ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಾಗಿದೆ ಎಂದು ಹೇಳಿದರು.

ಮೇಕೆದಾಟು ವಿಚಾರದಲ್ಲಿ ಪಾದಯಾತ್ರೆ ಮಾಡಿ 'ನಮ್ಮ ನೀರು ನಮ್ಮ ಹಕ್ಕು' ಎಂದು ಬೊಬ್ಬೆ ಹಾಕಿದ ಡಿ.ಕೆ.ಶಿವಕುಮಾರ್ ಅಧಿಕಾರಕ್ಕೆ ಬಂದ ನಂತರ ನ್ಯಾಯಾಲಯದತ್ತ ಬೊಟ್ಟು ಮಾಡುತ್ತಿದ್ದಾರೆ. ಇವರನ್ನ ನಂಬಿದರೆ ಮಣ್ಣು ಪಾಲಾಗಬೇಕಾಗುತ್ತದೆ. ಸಿದ್ದರಾಮಯ್ಯ ಮುಖ್ಯಮಂತ್ರಿಯಾದ ನಂತರ ಅವರ ವರಸೆ ಬದಲಾಗಿದೆ. ಪ್ರಾಧಿಕಾರ ಮತ್ತು ನ್ಯಾಯಾಲಯಕ್ಕೆ ವಾಸ್ತವ ಸ್ಥಿತಿಯನ್ನು ಮನವರಿಕೆ ಮಾಡಿಕೊಡಲು ವಿಫಲವಾಗಿದ್ದು, ಕಾವೇರಿ ವಿಚಾರದಲ್ಲಿ ಸಂಕಷ್ಟ ಸ್ಥಿತಿಗೆ ರಾಜ್ಯ ಸರ್ಕಾರ ನೇರ ಹೊಣೆ ಎಂದರು.

ಆಪ್ ಜಿಲ್ಲಾಧ್ಯಕ್ಷ ಬೂದನೂರು ಬೊಮ್ಮಯ್ಯ ಮಾತನಾಡಿ, ತಮಿಳುನಾಡು ಮುನ್ನೆಚ್ಚರಿಕೆ ಕ್ರಮ ವಹಿಸಿ ರೈತರ ಕಾಪಾಡಲು ಮುಂದಾಗುತ್ತದೆ. ಆದರೆ ಕರ್ನಾಟಕ ಮುನ್ನೆಚ್ಚರಿಕೆ ವಹಿಸುವುದಿಲ್ಲ. ಹಾಗಾಗಿ ಸಂಕಷ್ಟ ಎದುರಾಗಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರವನ್ನು ಸಮರ್ಥವಾಗಿ ಎದುರಿಸಲು ಸಂಘಟಿತ ಹೋರಾಟ ಅಗತ್ಯವಾಗಿದೆ. ನಾಡು, ನುಡಿ, ಜಲ ವಿಚಾರದಲ್ಲಿ ಆಮ್ ಆದ್ಮಿ ಪಕ್ಷ ಹೋರಾಟಕ್ಕೆ ಮುಂದೆ ನಿಲ್ಲಲಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕೂಡಲೇ ತಮಿಳುನಾಡಿಗೆ ಹರಿಯುತ್ತಿರುವ ನೀರನ್ನು ನಿಲ್ಲಿಸದ್ದರೆ ನಿರಂತರವಾಗಿ ನಮ್ಮ ಹೋರಾಟ ಮುಂದುವರೆಯಲಿದೆ ಎಂದು ಎಚ್ಚರಿಸಿದರು.

ಧರಣಿಯಲ್ಲಿ ಹಿತರಕ್ಷಣಾ ಸಮಿತಿಯ ಸುನಂದಾ ಜಯರಾಂ, ಕೆ.ಬೋರಯ್ಯ, ಇಂಡುವಾಳು ಬಸವರಾಜು, ಸಿ.ಟಿ. ಮಂಜುನಾಥ್, ಎಎಪಿ ಪಕ್ಷದ ರಂಗಯ್ಯ, ಶಿವಕುಮಾರ್ ಇತರರಿದ್ದರು.

ಕಾವೇರಿ ನದಿಗಿಳಿದು ಪ್ರತಿಭಟನೆ



ಶ್ರೀರಂಗಪಟ್ಟಣ, ಸೆ.2– ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿ ಮೇಲುಕೋಟೆ ಶಾಸಕ ದರ್ಶನ ಪುಟ್ಟಣ್ಣಯ್ಯ ನೇತೃತ್ವದಲ್ಲಿ ಆಮ್ ಆದ್ಮಿ ಪಕ್ಷದ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ಸೇರಿದಂತೆ ರೈತ ಸಂಘದ ಮುಖಂಡರು ವಿವಿಧ ಪ್ರಗತಿಪರ ಸಂಘಟನೆ, ಆಮ್ ಆದ್ಮಿ ಪಕ್ಷ ಮತ್ತು ನೂರಾರು ರೈತ ಸಂಘದ ಕಾರ್ಯಕರ್ತರು ಕೆಆರ್‌ಎಸ್ ಅಣೆಕಟ್ಟೆ ಬಳಿ ಕಾವೇರಿ ನದಿಗಿಳಿದು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಪ್ರತಿಭಟನೆ ನಡೆಸಿದರು.

ಅಣೆಕಟ್ಟೆಯಲ್ಲಿ ನೀರಿನ ಪ್ರಮಾಣ ದಿನದಿಂದ ದಿನಕ್ಕೆ ಕುಸಿತ ಕಂಡಿದ್ದರೂ ಕೂಡ ತಮಿಳುನಾಡಿಗೆ ನೀರು ಹರಿಸುವಂತೆ ಸೂಚನೆ ನೀಡಿರುವ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಮತ್ತು ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತ ಪಡಿಸಿದರು. ನಾಲ್ಕು ದಿನಗಳಿಂದ ನಡೆಯುತ್ತಿರುವ ಅಹೋರಾತ್ರಿ ಧರಣಿ ಅಂಗವಾಗಿ ನದಿಗಿಳಿದು ವಿಭಿನ್ನ ಹೋರಾಟದ ಮೂಲಕ ರೈತರು ಎಚ್ಚರಿಕೆ ನೀಡಿದರು.

ಈ ವೇಳೆ ಮಾತನಾಡಿದ ಮುಖ್ಯಮಂತ್ರಿ ಚಂದ್ರು, ಕಾವೇರಿ ನದಿ ನೀರಿಗಾಗಿ ಹೋರಾಟ ನಡೆಸುವ ರೈತ ಸಂಘಕ್ಕೆ ನಮ್ಮ ಪಕ್ಷದ ವತಿಯಿಂದ ಬೆಂಬಲ ಸೂಚಿಸಲು ಬಂದಿದ್ದು, ಪ್ರತಿಯೊಬ್ಬ ಕಾವೇರಿ ಜಲಾನಯನದ ಜಿಲ್ಲೆಗಳ ಜನರು ಬೆಂಬಲಿಸಬೇಕಿದೆ. ಹಿಂದಿನ ಹಾಗೂ ಇಂದಿನ ಸರ್ಕಾರಗಳು, ಸಂಪೂರ್ಣ ಬಹುಮತ ಇದ್ದರೂ ನೀರಿನ ಸಂಗ್ರಹ ಕುಸಿತ ಕಂಡಿದ್ದರೂ ಕೂಡ ಇಲ್ಲಿನ ಪರಿಸ್ಥಿತಿಯನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ತಿಳಿಸಲು ತಡಮಾಡಿದ್ದೇ ಈಗ ತಮಿಳುನಾಡಿಗೆ ನೀರು ಹರಿಸಲು ಕಾರಣ ವಾಗಿದೆ. ಯಾರ ಮುಲಾಜಿಗೂ ಒಳಗಾಗದೆ ತಕ್ಷಣದಿಂದ ಸರ್ಕಾರ ನೀರು ನಿಲ್ಲಿಸಿ, ಇಲ್ಲಿನ ರೈತರ ಸ್ಥಿತಿ ಬಗ್ಗೆ ಮನವರಿಕೆ ಮಾಡಿ ಕೊಡಬೇಕು ಎಂದರು. ಇನ್ನು ಮಂಡ್ಯ, ಮೈಸೂರು, ರಾಮನಗರ ಜಿಲ್ಲೆಗಳ ಸಂಸದರು ಏಕೆ ಮೌನವಾಗಿದ್ದಾರೆ, ಅವರು ಕಾವೇರಿ ನೀರು ಕುಡಿಯಲ್ಲವೆ? ಎಂದು ಪ್ರಶ್ನಿಸಿದರಲ್ಲದೆ, ಎಲ್ಲ ಶಾಸಕರು ಕಾವೇರಿ ಹೋರಾಟವನ್ನು ಬೆಂಬಲಿಸಬೇಕು

ಧರಣಿಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಕೆಂಪುಗೌಡ, ಆಮ್ ಆದ್ಮಿ ಪಕ್ಷದ ಮಹಿಳಾ ಘಟಕದ ಅಧ್ಯಕ್ಷೆ ಕುಶಲಸ್ವಾಮಿ, ಶ್ರೀರಂಗಪಟ್ಟಣ ತಾಲೂಕು ಅಧ್ಯಕ್ಷ ಕೃಷ್ಣೇಗೌಡ, ಪಾಂಡವಪುರ ತಾಲೂಕು ಅಧ್ಯಕ್ಷ ಪಿ.ನಾಗರಾಜು, ಕಾರ್ಯದರ್ಶಿ ವಿಜಿ ಕುಮಾರ್, ಹುಬ್ಬಳ್ಳಿ ಜಿಲ್ಲಾ ಘಟಕದ ಅಧ್ಯಕ್ಷ ಚಿದಾನಂದ, ಪ್ರಿಯಾ ರಮೇಶ್, ದಲಿತ ಸಂಘಟನೆಯ ಅಂಕಯ್ಯ, ರೈತ ಸಂಘದ ಮುಖಂಡರಾದ ಕಡತನಾಳು ಬಾಲು, ಜಗದೀಶ್, ಮುಖಂಡರುಗಳು ಸೇರಿದಂತೆ ವಿವಿಧೆಡೆಗಳಿಂದ ನೂರಾರು ರೈತರು ಭಾಗವಹಿಸಿದ್ದರು.

ಜೇನು ಹುಳುಗಳ ದಾಳಿ: 12 ಮಂದಿಗೆ ಗಾಯ

ನಾಗಮಂಗಲ, ಸೆ.2– ರಸ್ತೆಯಲ್ಲಿ ಹೋಗುತ್ತಿದ್ದವರ ಮೇಲೆ ಏಕಾಏಕಿ ಜೇನುಹುಳುಗಳು ದಾಳಿ ಮಾಡಿದ ಪರಿಣಾಮ 12 ಮಂದಿ ಗಾಯಗೊಂಡು ಆಸ್ಪತ್ರೆಗೆ ದಾಖಲಾದ ಘಟನೆ ಇಲ್ಲಿನ ಸರ್ಕಾರಿ ಕ್ರೀಡಾಂಗಣದ ಬಳಿ ನಡೆದಿದೆ.

ಶುಕ್ರವಾರ ಮಧ್ಯಾಹ್ನ 2 ಘಂಟೆ ಸಮಯದಲ್ಲಿ ಅದೇ ರಸ್ತೆಯಲ್ಲಿರುವ ರಾಜಸ್ಥಾನ ಮೂಲದ ಕೊಬ್ಬರಿ ಅಂಗಡಿ ಬಳಿಯಿರುವ ಕಟ್ಟಡದಲ್ಲಿ ಗೂಡುಕಟ್ಟಿದ್ದ ಜೇನುಹುಳುಗಳು ರಸ್ತೆಯಲ್ಲಿ ಓಡಾಡುತ್ತಿದ್ದವರ ಮೇಲೆ ಏಕಾಏಕಿ ದಾಳಿ ಮಾಡಿದೆ. ಮಂಜುನಾಥ್ ಎಂಬುವವರು ಸೇರಿದಂತೆ 12 ಜನರಿಗೆ ತೀವ್ರ ಸ್ವರೂಪದ ಗಾಯಗಳಾಗಿ ಸಾರ್ವಜನಿಕರ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಈ ದಾಳಿ ಎರಡು ಬಾರಿ ಆಗಿದ್ದು ಹಲವಾರು ಬಾರಿ ಮನೆಯ ಮಾಲೀಕ ಅಶೋಕ್ ಅವರಿಗೆ ಆ ಜೇನಿನ ಹುಟ್ಟನ್ನು ತೆಗೆಸಬೇಕೆಂದು ಹೇಳಿದರೂ ಕೇಳದಿರುವುದು, ಈ ಬಾರಿಯೂ ಪುನರಾವರ್ತನೆಯಾಗಿದೆಯೆಂದು ಸಾರ್ವಜನಿಕರು ಪೋಲೀಸರಿಗೆ ದೂರಿದ್ದಾರೆ.

ಶುಕ್ರವಾರದಿಂದ ಸಮೀಪದಲ್ಲಿರುವ ಕ್ರೀಡಾಂಗಣದಲ್ಲಿ ವಿದ್ಯಾರ್ಥಿಗಳ ಆಟೋಟ ಸ್ಪರ್ಧೆ ನಡೆಯುತ್ತಿದ್ದು, ಅದೃಷ್ಟವಶಾತ್ ಜೇನುಹುಳಗಳು ಅತ್ತ ದಾಳಿ ಮಾಡದಿರುವುದು ವಿದ್ಯಾರ್ಥಿಗಳು ಅಪಾಯದಿಂದ ಪಾರಾಗಿದ್ದಾರೆ.

ನಂದಿನಿ ಬೋರ್ಡ್ ಹಾಕಿಕೊಂಡು ಖಾಸಗಿ ಕಂಪನಿ ಉತ್ಪನ್ನ ಮಾರಾಟ ಮಾಡಿದರೆ ಲೈಸೆನ್ಸ್ ರದ್ದು

ಮನ್‌ಮುಲ್ ನಿರ್ದೇಶಕ ಕಾಡೇನಹಳ್ಳಿ ರಾಮಚಂದ್ರು ಎಚ್ಚರಿಕೆ



ಪಾಂಡವಪುರ, ಸೆ2– ನಂದಿನಿ ಬೋರ್ಡ್ ಹಾಕಿಕೊಂಡು ಬೇಕರಿಗಳಲ್ಲಿ ಖಾಸಗಿ ಕಂಪನಿಯ ಉತ್ಪನ್ನ ಮಾರಾಟ ಮಾಡಿದರೆ ಲೈಸೆನ್ಸ್ ರದ್ದುಪಡಿಸಲಾಗುವುದು ಎಂದು ಮನ್‌ಮುಲ್ ನಿರ್ದೇಶಕ ಕಾಡೇನಹಳ್ಳಿ ರಾಮಚಂದ್ರು ಎಚ್ಚರಿಕೆ ನೀಡಿದರು.

ಪಟ್ಟಣದ ವೆಂಕಟೇಶ್ವರ ಕನ್ವೆನ್ಷನ್ ಹಾಲ್‌ನಲ್ಲಿ ಮನ್‌ಮುಲ್ ಒಕ್ಕೂಟದ ವತಿಯಿಂದ ಪಾಂಡವಪುರ ತಾಲೂಕಿನ ರೀಟೆಲ್ ಮಾರಾಟಗಾರರ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ನಂದಿನಿ ಬೇಕರಿಗಳಲ್ಲಿ ನಂದಿನಿ ಹಾಲು, ಮೊಸರು, ನಂದಿನಿ ಸಿಹಿ ಪದಾರ್ಥಗಳನ್ನೇ ಮಾರಾಟ ಮಾಡಬೇಕು. ಹೊರಗಡೆ ನಂದಿನಿ ಬೋರ್ಡ್ ಹಾಕಿಕೊಂಡು ಖಾಸಗಿ ಡೇರಿಯ ಪದಾರ್ಥಗಳನ್ನು ಮಾರಾಟ ಮಾಡುವುದು ಹೆತ್ತ ತಾಯಿಗೆ ದ್ರೋಹ ಬಗೆದಂತೆ. ರೀಟೆಲ್ ಮಾರಾಟಗಾರರ ಸಮಸ್ಯೆ ಆಲಿಸಬೇಕು ಎಂಬ ಉದ್ದೇಶದಿಂದ ಸಭೆ ಕರೆಯಾಗಿದೆ. ನಿಮ್ಮ ಯಾವುದೇ ಸಮಸ್ಯೆಗಳು ಇದ್ದರೆ ನಮ್ಮ ಬಳಿ ಹೇಳಿಕೊಳ್ಳಿ ಅದನ್ನು ಬಿಟ್ಟು ಖಾಸಗಿ ಡೇರಿಗಳ ಉತ್ಪನ್ನ ಮಾರಾಟ ಮಾಡುವ ಪ್ರಕರಣಗಳು ಕಂಡು ಬಂದರೆ ಅಂತಹ ಬೇಕರಿ ಲೈಸೆನ್ಸ್ ರದ್ದುಪಡಿಸಲಾಗುವುದು ಎಂದು ಎಚ್ಚರಿಸಿದರು.

ಮನ್‌ಮುಲ್ ಅಧ್ಯಕ್ಷ ಬೋರೇಗೌಡ ಮಾತನಾಡಿ, ಒಕ್ಕೂಟಕ್ಕೆ ರೈತರು ಹಾಗೂ ರೀಟೆಲ್ ಮಾರಾಟಗಾರರು ಎರಡು ಕಣ್ಣು ಇದ್ದಂತೆ. ಇಬ್ಬರ ಸಹಕಾರ ಇದ್ದರೆ ಮಾತ್ರ ಒಕ್ಕೂಟ ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಸಾಧ್ಯ. ನಂದಿನಿ ಹಾಲು ಗುಣಮಟ್ಟದಿಂದ ಕೂಡಿದ್ದು ಯಾವುದೇ ಖಾಸಗಿ ಕಂಪನಿಗಳ ರೀತಿಯಲ್ಲಿ ಹಾಲು ಹೊಡೆಯದಂತೆ ರಾಸಾಯನಿಕ ಮಿಶ್ರಣ ಮಾಡಲ್ಲ ಎಂದರು.

ನಂದಿನ ಬೇಕರಿಗಳಲ್ಲಿ ಸಂಪೂರ್ಣವಾಗಿ ನಂದಿನಿ ಪದಾರ್ಥಗಳನ್ನೇ ಮಾರಾಟ ಮಾಡಿ, ಒಕ್ಕೂಟದಲ್ಲಿ ಹಲವು ಬದಲಾವಣೆ ಮಾಡುವುದು ಅನಿವಾರ್ಯವಾಗಿದೆ. ಮಾರುಕಟ್ಟೆಗೆ ಖಾಸಗಿ ಕಂಪನಿಗಳು ಲಗ್ಗೆ ಇಟ್ಟಿರುವುದರಿಂದ ಹಾಲು ಮಾರಾಟದಲ್ಲಿ ಸಾಕಷ್ಟು ಪೈಪೋಟಿ ಎದುರಾಗಿದೆ. ಮುಂದಿನ ದಿನಗಳಲ್ಲಿ ಪ್ರತಿ ತಾಲೂಕಿನಲ್ಲೂ ನಂದಿನಿಯ ಎಲ್ಲಾ ಪದಾರ್ಥಗಳು ಸಿಗುವಂತಹ ದೊಡ್ಡಮಟ್ಟದ ಬೇಕರಿಗಳನ್ನು ನಿರ್ಮಾಣ ಮಾಡಲು ಒಕ್ಕೂಟ ಚಿಂತನೆ ನಡೆಸಿದೆ ಎಂದು ಹೇಳಿದರು.

ಇದೇ ವೇಳೆ ಸಭೆಯಲ್ಲಿ ಭಾಗವಹಿಸಿದ್ದ ರೀಟೆಲ್ ಮಾರಾಟಗಾರರು ಹಾಲಿನ ವ್ಯಾನ್ ಸರಿಯಾದ ಸಮಯಕ್ಕೆ ಬರೋದಿಲ್ಲ, ತಡವಾಗಿ ಬರುತ್ತದೆ. ಬೇಡಿಕೆಗೆ ತಕ್ಕಂತೆ ಐಸ್ ಕ್ರೀಂ, ಲಸ್ಸಿ, ಮಜ್ಜಿಗೆ ಪೂರೈಕೆ ಮಾಡಿ, ರೀಟೆಲ್ ಮಾರಾಟಗಾರರಿಗೆ ವಿಮೆ ಮಾಡಿಸಿ ಎಂದು ಮನವಿ ಮಾಡಿದರು.

ಸಭೆಯಲ್ಲಿ ಮನ್‌ಮುಲ್ ಒಕ್ಕೂಟದ ಮಾರ್ಕೆಟಿಂಗ್ ವಿಭಾಗದ ವ್ಯವಸ್ಥಾಪಕ ಪ್ರದೀಪ್, ಉಪ ವ್ಯವಸ್ಥಾಪಕ ಸಾಗರ್, ಮಾರ್ಕೆಟಿಂಗ್ ಅಧಿಕಾರಿ ಮಂಜೇಶ್, ಉಪವ್ಯವ ಸ್ಥಾಪಕರಾದ ಬಿಂಧು, ಕವಿತ, ಆರ್.ಪ್ರಸಾದ್, ಸಹಾಯಕ ಉಪ ವ್ಯವಸ್ಥಾಪಕಿ ಎಸ್.ಬಿ.ನಿವೇದಿತ, ಮಾರ್ಗ ವಿಸ್ತರ್ಣಾಧಿಕಾರಿಗಳಾದ ಅಭಿಲಾಷ್, ಉಷಾ, ನಿತಿನ್, ಪ್ರಜ್ವಲ್, ಜಗದೀಶ್ ಸೇರಿದಂತೆ ಹಲವರು ಹಾಜರಿದ್ದರು.

ಖಾಸಗಿ ಸಾರಿಗೆ ಒಕ್ಕೂಟಗಳಿಂದ ಬೆಂಗಳೂರು ಬಂದ್‌ಗೆ ಕರೆ

ಸಿಎಂ ಸಿದ್ದರಾಮಯ್ಯ ಜೊತೆಗೆ ಚರ್ಚೆ: ಡಿಸಿಎಂ

ಬೆಂಗಳೂರು, ಸೆ.2– ಶಕ್ತಿ ಯೋಜನೆಯಿಂದಾಗಿ ನಷ್ಟಕ್ಕೆ ಸಿಲುಕಿರುವ ರಾಜ್ಯ ಖಾಸಗಿ ಸಾರಿಗೆ ಒಕ್ಕೂಟ ಸೆಪ್ಟೆಂಬರ್ 11ರಂದು ಬೆಂಗಳೂರು ಬಂದ್‌ಗೆ ಕರೆ ನೀಡಿದ್ದು, ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರೊಂದಿಗೆ ಚರ್ಚಿಸುವುದಾಗಿ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಶನಿವಾರ ತಿಳಿಸಿದ್ದಾರೆ. ಶಕ್ತಿ ಯೋಜನೆ ವಿರೋಧಿಸಿ ಖಾಸಗಿ ಸಾರಿಗೆ ಒಕ್ಕೂಟ ಬಂದ್‌ಗೆ ಕರೆ ನೀಡಿರುವ ಬೆನ್ನಲ್ಲೇ ಉಪ ಮುಖ್ಯಮಂತ್ರಿ ಈ ರೀತಿ ಹೇಳಿಕೆ ನೀಡಿದ್ದಾರೆ. ಶಕ್ತಿ ಯೋಜನೆ ಜಾರಿಯಾದ ಬಳಿಕ ತಮ್ಮ ವಹಿವಾಟು ತೀವ್ರ ಕುಸಿದಿದೆ ಎಂದು ಖಾಸಗಿ ಸಾರಿಗೆ ಸಂಸ್ಥೆಗಳ ಮಾಲೀಕರು ದೂರುತ್ತಿದ್ದಾರೆ. ಆಟೋ ರಿಕ್ಷಾ ಚಾಲಕರು, ಖಾಸಗಿ ಟ್ಯಾಕ್ಸಿ ಚಾಲಕರು, ಶಾಲಾ ಬಸ್ ಮತ್ತು ಕ್ಯಾಬ್ ಮಾಲೀಕರು ಸೇರಿದಂತೆ ಸುಮಾರು 32 ಸಂಸ್ಥೆಗಳು ಬಂದ್‌ಗೆ ಬೆಂಬಲ ವ್ಯಕ್ತಪಡಿಸಿವೆ. ಪ್ರತಿ ಚಾಲಕನಿಗೆ ರೂ 10,000 ಆರ್ಥಿಕ ನೆರವು ಮತ್ತು ಬೈಕ್ ಟ್ಯಾಕ್ಸಿ ನಿಷೇಧ ಸೇರಿದಂತೆ ಹಲವು ಪ್ರಮುಖ ಬೇಡಿಕೆಗಳನ್ನು ಈ ಹಿಂದೆ ಒಕ್ಕೂಟ ಸರ್ಕಾರಕ್ಕೆ ಸಲ್ಲಿಸಿತ್ತು.

ಒಂದನೇ ಪುಟದಿಂದ

ಜೆಟಿಡಿ, ಸಿಎಸ್ಪಿ ನೇತೃತ್ವದಲ್ಲಿ ಭಾರೀ ಪ್ರತಿಭಟನೆ

ತುರ್ತು ಅಗತ್ಯವಿದೆ. ಆದರೆ ರಾಜ್ಯ ಕಾಂಗ್ರೆಸ್ ಸರ್ಕಾರ ಇದರಲ್ಲಿಯೂ ಸಂಪೂರ್ಣ ವಿಫಲವಾಗಿದ್ದು, ರಾಜ್ಯದ ಬಹುಪಾಲು ಭಾಗ ಬರಪೀಡಿತ ಪ್ರದೇಶವಾಗಿದೆ. ಇಂತಹ ವಿಷಯವನ್ನು ಪ್ರಾಧಿಕಾರದ ಗಮನಕ್ಕೆ ತರುವ ಪ್ರಯತ್ನ ಮಾಡಬೇಕು. ನೆರೆ ರಾಜ್ಯಕ್ಕೆ ಹರಿಸುತ್ತಿರುವ ಕಾವೇರಿ ನೀರನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಶಾಸಕ ಹೆಚ್.ಟಿ.ಮಂಜು, ಮಾಜಿ ಶಾಸಕರಾದ ಡಿ.ಸಿ.ತಮ್ಮಣ್ಣ, ಡಾ.ಕೆ.ಅನ್ನದಾನಿ, ಕೆ.ಸುರೇಶ್‌ಗೌಡ, ಕೆ.ಟಿ.ಶ್ರೀಕಂಠೇಗೌಡ, ಜಿ.ಬಿ.ಶಿವಕುಮಾರ್, ರವೀಂದ್ರ ಶ್ರೀಕಂಠಯ್ಯ, ಮುಖಂಡ ಬಿ.ಆರ್.ರಾಮಚಂದ್ರ, ಕಂಸಾಗರ ರವಿ, ಜಿಲ್ಲಾಧ್ಯಕ್ಷ ಡಿ.ರಮೇಶ್ ಸೇರಿದಂತೆ ಹಲವು ಮಂದಿ ಭಾಗವಹಿಸಿದ್ದರು.

ರೈತರ ಕಷ್ಟ ಪರಿಹರಿಸಿ: ಜಿ.ಟಿ.ದೇವೇಗೌಡ

ಮನಬಂದಂತೆ ವರ್ತಿಸುತ್ತಿದೆ. ಕುಡಿಯುವ ನೀರಿಗೆ ಬರಗಾಲವಿದ್ದು, ರೈತರ ಬೆಳೆಗಳು ಒಣಗುತ್ತಿವೆ. ಈ ಎಲ್ಲಾ ವಿಚಾರಗಳ ಬಗ್ಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಮುಂದೆ ಸಮರ್ಥವಾಗಿ ವಾದ ಮಾಡಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ತಮಿಳುನಾಡಿನಲ್ಲಿ ಸಮರ್ಪಕ ನೀರಿದ್ದರೂ ನೀರಿಲ್ಲವೆಂದು ಪ್ರಾಧಿಕಾರದ ಮುಂದೆ ವಾದ ಮಂಡಿಸಿ ತಮಿಳುನಾಡು ನೀರು ಪಡೆಯುತ್ತಿದೆ. ಆದರೆ ಸಮರ್ಥ ವಾದ ಮಾಡಲು ವಿಫಲರಾಗಿ ನೆರೆ ರಾಜ್ಯಕ್ಕೆ ನೀರು ಬಿಡುತ್ತಾ ರಾಜ್ಯ ಸರ್ಕಾರ ನಮ್ಮ ರೈತರನ್ನು ಮುಗಿಸಲು ಹೊರಟಿದೆ. ಪಕ್ಕದ ತಮಿಳುನಾಡಿನಲ್ಲಿ ಡಿಎಂಕೆ– ಕಾಂಗ್ರೆಸ್ ಮೈತ್ರಿ ಸರ್ಕಾರ ಇದೆ. ಇಬ್ಬರೂ ಕುಳಿತು ಮಾತನಾಡಿ, ಸಂಕಷ್ಟ ಸೂತ್ರವನ್ನು ರೂಪಿಸಬೇಕು. ತಮಿಳುನಾಡಿಗೆ ಸಂಕಷ್ಟ ಸೂತ್ರದಡಿ ಕುಡಿಯಲು, ಬೆಳೆ ಬೆಳೆಯಲು ನೀರಿಲ್ಲ ಎಂಬುದನ್ನು ಮನವರಿಕೆ ಮಾಡಲು ನಮ್ಮ ರಾಜ್ಯ ಸರ್ಕಾರ ವಿಫಲವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮಂಡ್ಯ, ಮೈಸೂರು, ರಾಮನಗರ, ಬೆಂಗಳೂರಿನ ಜನ ಕಾವೇರಿ ನೀರನ್ನು ಕುಡಿಯುತ್ತಾರೆ. ಆದರೆ ಬೆಂಗಳೂರಿಗರು ನಮಗೂ ಕಾವೇರಿಗೂ ಸಂಬಂಧವಿಲ್ಲವೇನೋ ಎಂಬ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ಕುಡಿಯಲು ಅವರಿಗೆ ಕಾವೇರಿ ನೀರು ಬೇಕು. ಹೋರಾಟಕ್ಕೆ ಮಾತ್ರ ಬರುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದ ಅವರು, ಹೋರಾಟಕ್ಕೆ ಬೆಂಗಳೂರಿಗರು ಸಹ ಧುಮುಕಬೇಕೆಂದು ಒತ್ತಾಯಿಸಿದರು. ಕರ್ನಾಟಕ ಕಾವೇರಿ ವಿಚಾರದಲ್ಲಿ ಮುಂಜಾಗ್ರತೆ ವಹಿಸುವುದಿಲ್ಲ. ಆದರೆ ತಮಿಳುನಾಡು ಮುಂಚೆಯೇ ಪ್ರಾಧಿಕಾರ ಹಾಗೂ ಸುಪ್ರೀಂ ಮೊರೆ ಹೋಗಿ ತಮ್ಮ ಹಕ್ಕನ್ನು ಪಡೆಯುತ್ತದೆ. ಆದರೆ ಇಲ್ಲಿ ಐದು ಗ್ಯಾರಂಟಿ... ಐದು ಗ್ಯಾರಂಟಿ ಎಂದು ರಾಜ್ಯವನ್ನು ಸುತ್ತುತ್ತಿದ್ದಾರೆಯೇ ಹೊರತು ಅನ್ನ ಕೊಡುವ ರೈತ ಸಂಕಷ್ಟದಲ್ಲಿದ್ದರೂ ಅವರ ಕಷ್ಟ ಬಗೆಹರಿಸದೇ ರೈತರ ಜೀವದ ಜೊತೆಗೆ ಕಾಂಗ್ರೆಸ್ಸಿಗರು ಆಟವಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಂಡ್ಯ ಜಿಲ್ಲೆಯಿಂದ ಹೋರಾಟ ಆರಂಭವಾಗಿದೆ. ಕೂಡಲೇ ನಿತ್ಯ ಹರಿಯುತ್ತಿರುವ ಐದು ಸಾವಿರ ಕ್ಯೂಸೆಕ್ ನೀರು ನಿಲ್ಲಿಸಿ. ಸುಪ್ರೀಂಕೋರ್ಟ್ ಮುಂದೆ ಸಮರ್ಥವಾಗಿ ವಾದ ಮಂಡಿಸದೇ ಇರುವುದರಿಂದ ನಿಟ್ಟಿನಲ್ಲಿ ತೀರ್ಪು ಮುಂದೆ ಹೋಗಿದೆ. ಇತ್ತ ತಮಿಳುನಾಡಿನೊಂದಿಗೆ ರಾಜೀ ಮಾಡಿಕೊಂಡು ನೀರು ಹರಿಸುತ್ತಿರುವ ನಿಮಗೆ ನಾಚಿಕೆಯಾಗಬೇಕು. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಮಾತೆತ್ತಿದರೆ ರೈತರ ಪರ ಎನ್ನುತ್ತಾರೆ. ಆದರೆ ತಮಿಳುನಾಡಿಗೆ ನೀರು ಹರಿಸಿ ನಮ್ಮ ರೈತರ ಮೇಲೆ ಚಪ್ಪಡಿ ಕಲ್ಲು ಹಾಕಲು ಮುಂದಾಗಿರುವ ನಿಮಗೆ ದೇವರು ಒಳಿತು ಮಾಡುವುದಿಲ್ಲ. ಕೂಡಲೇ ನೀರು ನಿಲ್ಲಿಸಿ ಎಂದು ಆಗ್ರಹಿಸಿದರು.

ಭಾರತದಲ್ಲಿ ಕುರುಡುತನ ಕಡಿಮೆ ಆಗುವ ಲಕ್ಷಣಗಳು ಕಾಣುತ್ತಿಲ್ಲ

ಪಾವಗಡದ ರಾಮಕೃಷ್ಣ ಸೇವಾಶ್ರಮದ ಸಂಸ್ಥಾಪಕ ಜಪಾನಂದ ಮಹಾರಾಜ್ ಸ್ವಾಮೀಜಿ ವಿಷಾದ

ಮೈಸೂರು, ಸೆ.2 (ಸಿಎನ್)–ಭಾರತದಲ್ಲಿ ವರ್ಷದಿಂದ ವರ್ಷಕ್ಕೆ, ಕುರುಡುತನ ಮತ್ತು ದೋಷಯುಕ್ತ ದೃಷ್ಟಿ ಪೀಡಿತರ ಸಂಖ್ಯೆ ಕಡಿಮೆಯಾಗುವ ಲಕ್ಷಣಗಳು ಕಾಣದಿರುವುದು ವಿಷಾಧದ ಸಂಗತಿಯಾಗಿದೆ. ಸರ್ಕಾರಗಳು ಇದನ್ನು ಗಂಭೀರವಾಗಿ ಪರಿಗಣಿಸಿ ಪರಿಣಾಮಕಾರಿಯಾಗಿ ಕಣ್ಣಿನ ಶಸ್ತ್ರ ಚಿಕಿತ್ಸೆ ನಡೆಸುವ ವೈದ್ಯರನ್ನು ನಿಯೋಜಿಸಬೇಕಿದೆ ಎಂದು ಪಾವಗಡದ ರಾಮಕೃಷ್ಣ ಸೇವಾಶ್ರಮ ಸಂಸ್ಥಾಪಕರಾದ ಜಪಾನಂದ ಮಹಾರಾಜ್ ಸ್ವಾಮೀಜಿ ಅಭಿಪ್ರಾಯಪಟ್ಟರು.

ವಿಶ್ವೇಶ್ವರ ನಗರದ ಅಕ್ಕಮಹಾದೇವಿ ರಸ್ತೆಯಲ್ಲಿರುವ ಬಿಲ್ಡರ್ಸ್ ಅಸೋಸಿಯೇಷನ್ ಸಭಾಂಗಣದಲ್ಲಿ ರೋಟರಿ ಅವೈಡಬಲ್ ಬ್ಲೈಂಡ್‌ನೆಸ್ ಫೌಂಡೇಶನ್ ಸಹಯೋಗದಲ್ಲಿ ಶನಿವಾರ ನಡೆದ 'ಸಮುದಾಯ ನೇತ್ರವಿಜ್ಞಾನದ 2ನೇ ರೋಟರಿ ರಾಷ್ಟ್ರೀಯ ಸಮ್ಮೇಳನ' ಉದ್ಘಾಟಿಸಿ ಮಾತನಾಡಿದರು.



ಅಂಧರ ತವರು ಭಾರತ: ಭಾರತವು ಹೆಚ್ಚಿನ ಸಂಖ್ಯೆಯ ಅಂಧರಿಗೆ ನೆಲೆಯಾಗಿದ್ದು, ಈಗ 1 ಲಕ್ಷ ಜನಸಂಖ್ಯೆಗೆ ಒಬ್ಬ ನೇತ್ರ ತಜ್ಞರನ್ನು ಹೊಂದಿದೆ. ಜಗತ್ತಿನಾದ್ಯಂತ ಇರುವ 37 ಮಿಲಿಯನ್ ಅಂಧರ ಪೈಕಿ, 15 ಮಿಲಿಯನ್‌ಗಿಂತಲೂ ಹೆಚ್ಚು ಜನರು ಭಾರತದಲ್ಲೇ ಇದ್ದಾರೆ. ಕಣ್ಣಿನ ಆರೈಕೆ ಕ್ಷೇತ್ರದಲ್ಲಿ ನಾವು ಸಾಧಿಸಬೇಕಾದ್ದು ಬಹಳಷ್ಟಿದೆ ಎಂದರು.

ಶೇ.75%ರಷ್ಟು ತಪ್ಪಿಸಬಹುದಾದ ಕುರುಡುತನದ ಪ್ರಕರಣಗಳಿವೆ. ಭಾರತಕ್ಕೆ 40,000 ನೇತ್ರ ತಜ್ಞರ ಅಗತ್ಯವಿದ್ದರೂ, ಕೇವಲ 8000 ಮಂದಿಯಷ್ಟೇ ಇದ್ದಾರೆ. ಅಲ್ಲದೇ ನಮಗೆ ಪ್ರತಿ ವರ್ಷಕ್ಕೆ 2.5 ಲಕ್ಷ ದಾನ ಮಾಡಿದ ಕಣ್ಣುಗಳು ಬೇಕಾಗಿವೆ. ಆದರೆ ದೇಶದ 109 ನೇತ್ರ ಬ್ಯಾಂಕ್‌ಗಳಲ್ಲಿ ಗರಿಷ್ಠ 25000 ಕಣ್ಣುಗಳನ್ನು ಮಾತ್ರ ಸಂಗ್ರಹಿಸಲಾಗುತ್ತಿದೆ. ಅದರಲ್ಲಿ 30% ಬಳಕೆಗೆ ಯೋಗ್ಯವಾಗಿಲ್ಲ ಎಂದರು.

ಕಣ್ಣಿನ ಅಧ್ಯಯನ ಸಮರ್ಪಕವಾಗಿಲ್ಲ: ಕಣ್ಣಿನ ಬಗ್ಗೆ ಸೂಕ್ತ ಅಧ್ಯಯನ ವಿಧಾನಗಳಿಲ್ಲ. ಮಸುಕಿನ ದೃಷ್ಟಿದೋಷಗಳು ಕುರುಡುತನದ ಪ್ರಮುಖ ಕಾರಣಗಳಲ್ಲಿ ಒಂದಾಗಿದ್ದರೂ, ಅದರ ಬಗ್ಗೆ ಹೆಚ್ಚಿನ ಅಧ್ಯಯನದ ಅಗತ್ಯವಿದೆ. ಉತ್ತಮ ತರಬೇತಿ ಪಡೆದ ನೇತ್ರ ತಜ್ಞರು ಭಾರತಕ್ಕೆ ಅಗಾಧ ಸೇವೆ ಮಾಡಬಹುದು ಎಂದು ತಜ್ಞರು ಒಪ್ಪುತ್ತಾರೆ. ಆದರೆ ಅವರ ಕೊರತೆಯಿಂದಾಗಿ ಭಾರತದಲ್ಲಿ 15 ಮಿಲಿಯನ್ ಅಂಧ ಜನರಲ್ಲಿ, ಮೂರು ಮಿಲಿಯನ್–26% ರಷ್ಟು ಮಕ್ಕಳು ಕಾರ್ನಿಯಲ್ ಅಸ್ವಸ್ಥತೆಯಿಂದ ಬಳಲುತ್ತಿವೆ ಎಂದರು.

ಕಣ್ಣಿನ ಪೊರೆ: ಇತ್ತೀಚಿನ ವರದಿಗಳ ಪ್ರಕಾರ ಭಾರತದಲ್ಲಿ 22 ದಶಲಕ್ಷಕ್ಕೂ ಹೆಚ್ಚು ಮಂದಿ ಕುರುಡರಾಗಿದ್ದಾರೆ. ಈ ಪ್ರಕರಣಗಳಲ್ಲಿ 80.1%ರಷ್ಟು ಕಣ್ಣಿನ ಪೊರೆ ಕಾರಣವಾಗಿದೆ. ಕಣ್ಣಿನ ಪೊರೆಯಿಂದ ಕುರುಡುತನ ಕಾಲ ಕ್ರಮೇಣ ಕಡಿಮೆಯಾಗುವುದಾದರೂ, ಕಣ್ಣಿನ ಪೊರೆ ಪ್ರಕರಣಗಳ ಸಂಪೂರ್ಣ ಸಂಖ್ಯೆಯು 2001ರಲ್ಲಿ 7.7 ಮಿಲಿಯನ್ ಇತ್ತು, ಆದರೆ 2020ರ ವೇಳೆಗೆ 8.25 ಮಿಲಿಯನ್‌ಗೆ ಏರಿದೆ. ಈ ಎಲ್ಲಾ ನಕಾರಾತ್ಮಕ ದೃಷ್ಟಿಕೋನದ ನಡುವೆ 2022–23ರ ರಾಷ್ಟ್ರೀಯ ಅಂಧತ್ವ ಮತ್ತು ದೃಷ್ಟಿಹೀನತೆ ನಿಯಂತ್ರಣ ವರದಿ ಪ್ರಕಾರ, ಭಾರತದಲ್ಲಿ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗಳ ಸಂಖ್ಯೆ 83,44,824 ಆಗಿರುವುದು ಸಕಾರಾತ್ಮಕ ಬೆಳವಣಿಗೆಯಾಗಿದೆ ಎಂದರು.

ಈ ವೇಳೆ ಖ್ಯಾತ ನೇತ್ರ ತಜ್ಞರಾದ ಡಾ. ಎಂ.ಎಸ್.ರವೀಂದ್ರ, ಡಾ.ಸುಂದರರಾಂ ಶೆಟ್ಟಿ, ಡಾ.ಮುಸ್ತಾಲಿ ವಾಫ್ ಮತ್ತು ಡಾ. ಉಮೇಶ್ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಅಲ್ಲದೇ ಮೈಸೂರಿನ ಉಷಾ ಕಿರಣ್ ಆಸ್ಪತ್ರೆಯ ಡಾ.ರವಿಶಂಕರ್ ಮತ್ತು ಬೆಂಗಳೂರಿನ ರಂಗಲಕ್ಷ್ಮಿ ನೇತ್ರಾಲಯದ ಡಾ.ವೆಂಕಟಸುಬ್ರಮಣ್ಯಂ ಅವರು ಪಶ್ಚಿಮ ಆಫ್ರಿಕಾದ ಘಾನಾ ಪ್ರದೇಶದಲ್ಲಿ 125 ಮಂದಿಂಗೆ ಉಚಿತ ನೇತ್ರ ಶಸ್ತ್ರಚಿಕಿತ್ಸೆ ಒದಗಿಸುವ ಯೋಜನೆಯನ್ನು ಅ.14ರಿಂದ 21ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಘೋಷಿಸಿದರು.

ಕಾರ್ಯಕ್ರಮದಲ್ಲಿ ಆರ್‌ಐ ನಿರ್ದೇಶಕರಾದ ಅನಿರುದ್ಧ ರಾಯ್ ಚೌಧರಿ, ಡಿ–3181 ಜಿಲ್ಲಾ ಗವರ್ನರ್ ಎಚ್.ಆರ್.ಕೇಶವ್, ಸಂಘಟನಾ ಸಮಿತಿ ಅಧ್ಯಕ್ಷ ಡಾ.ಎಂ.ವಿ. ರವಿಕುಮಾರ್, 3191 ರೋಟರಿ ಜಿಲ್ಲಾ ಗವರ್ನರ್ ಉದಯ್ ಭಾಸ್ಕರ್, 3192 ರೋಟರಿ ಜಿಲ್ಲಾ ಗವರ್ನರ್ ಶ್ರೀನಿವಾಸ್ ಮೂರ್ತಿ ಸೇರಿದಂತೆ ಹಲವಾರು ರೋಟರಿಯನ್ಸ್ ಉಪಸ್ಥಿತರಿದ್ದರು.

ನಿದ್ರೆಗೆ ಜಾರಲಿವೆ ಪ್ರಗ್ಯಾನ್ ರೋವರ್, ವಿಕ್ರಮ್ ಲ್ಯಾಂಡರ್

ಚಂದ್ರಯಾನ–3ರ ಮುಂದಿನ ಕಥೆ ಏನು?

ಬೆಂಗಳೂರು: ಭಾರತದ ಹೆಮ್ಮೆಯ ಬಾಹ್ಯಾಕಾಶ ಸಂಸ್ಥೆ ಇಸ್ರೋ, ಚಂದ್ರಯಾನ–3 ಯೋಜನೆಯನ್ನೂ ಶೇ.100ರಷ್ಟು ಯಶಸ್ಸಿನೊಂದಿಗೆ ಪೂರ್ಣಗೊಳಿಸಿದ್ದು, ಇದೀಗ ಚಂದ್ರ ಮೇಲೆ ಇಳಿದಿರುವ ಪ್ರಗ್ಯಾನ್ ರೋವರ್, ವಿಕ್ರಮ್ ಲ್ಯಾಂಡರ್ ನಿದ್ರೆಗೆ ಜಾರುವ ಕಾಲ ಸನ್ನಿಹಿತವಾಗಿದೆ.

ಚಂದ್ರಯಾನ 3 ರ ರೋವರ್ ಮತ್ತು ಲ್ಯಾಂಡರ್ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಈಗಾಗಲೇ ರೋವರ್ ಮತ್ತು ಲ್ಯಾಂಡರ್ ಚಂದ್ರನ ಕುರಿತ ಸಾಕಷ್ಟು ನಿಗೂಢ ಅಂಶಗಳ ಮೇಲೆ ಬೆಳಕು ಚೆಲ್ಲಿವೆ. ಚಂದ್ರನ ಮೇಲ್ಮೈ ವಾತಾವರಣದ ತಾಪಮಾನ, ಸಲ್ಫರ್ ಇರುವಿಕೆ, ಚಂದ್ರನೊಳಗಿನ ಕಂಪನಗಳು ಸೇರಿದಂತೆ ಹಲವು ವಿಚಾರಗಳ ಬಗ್ಗೆ ಬೆಳಕು ಚೆಲ್ಲಿದೆ. ಇದೀಗ ಚಂದ್ರನಲ್ಲಿ ರಾತ್ರಿ ಆವರಿಸುತ್ತಿದ್ದು ಹೀಗಾಗಿ ಪ್ರಗ್ಯಾನ್ ರೋವರ್, ಮತ್ತು ವಿಕ್ರಮ್ ಲ್ಯಾಂಡರ್‌ಗಳನ್ನು ಸ್ಲೀಪಿಂಗ್ ಮೋಡ್ ಅಂದರೆ ನಿದ್ರೆಯಲ್ಲಿರಿಸಲು ಸಿದ್ಧತೆ ನಡೆಸಿದೆ.

ಅಂದ ಹಾಗೆ ಚಂದ್ರನಲ್ಲಿ ಒಂದು ರಾತ್ರಿ ಎಂದರೆ ಭೂಮಿಯಲ್ಲಿ ಸುಮಾರು 14 ದಿನಗಳು... ಇಷ್ಟು ದಿನ ಇದ್ದ ಹಗಲು ಸುಮಾರು 14 ದಿನಗಳ ಕಾಲ ಇತ್ತು. ಹೀಗಾಗಿ ಈ 14 ದಿನಗಳ ಕಾಲ ರೋವರ್ ಮತ್ತು ಲ್ಯಾಂಡರ್ ನಿರಂತರವಾಗಿ ಕಾರ್ಯನಿರ್ವಹಿಸಿತ್ತು. ಇದೀಗ ಚಂದ್ರನಲ್ಲಿ ರಾತ್ರಿಯಾಗುತ್ತಿದ್ದು, ಈ ವೇಳೆ ಚಂದ್ರನ ಮೇಲೆ ಸೂರ್ಯನ ಬೆಳಕು ಬೀಳುವುದಿಲ್ಲ. ಹೀಗಾಗಿ



ಆ ಕಾರ್ಗತ್ತಲಿನಲ್ಲಿ ಕೆಲಸ ಮಾಡುವುದು ಅಸಾಧ್ಯ. ಇದೇ ಕಾರಣಕ್ಕೆ ಇಸ್ರೋ ರೋವರ್ ಮತ್ತು ಲ್ಯಾಂಡರ್‌ಗಳನ್ನು ನಿದ್ರೆಗೆ ಜಾರಿಸಲು ಮುಂದಾಗಿದೆ. ಈ ಬಗ್ಗೆ ಸ್ವತಃ ಇಸ್ರೋ ಅಧ್ಯಕ್ಷ ಎಸ್.ಸೋಮನಾಥ್ ಮಾಹಿತಿ ನೀಡಿದ್ದು, ಚಂದ್ರನ ಮೇಲಿನ ರಾತ್ರಿಯನ್ನು ತಡೆದುಕೊಳ್ಳಲು ಅವುಗಳನ್ನು ಶೀಘ್ರದಲ್ಲೇ "ನಿದ್ರೆ" ಮಾಡಿಸಲಾಗುವುದು ಎಂದು ಹೇಳಿದ್ದಾರೆ.

ಅಲ್ಲದೆ ಲ್ಯಾಂಡರ್ ಮತ್ತು ರೋವರ್, ಕ್ರಮವಾಗಿ 'ವಿಕ್ರಮ್' ಮತ್ತು 'ಪ್ರಜ್ಞಾನ್' ಇನ್ನೂ ಕಾರ್ಯನಿರ್ವಹಿಸುತ್ತಿವೆ ಮತ್ತು "ವೈಜ್ಞಾನಿಕ ಉಪಕರಣಗಳನ್ನು ಹೊಂದಿರುವ ನಮ್ಮ ತಂಡವು ಈಗ ಸಾಕಷ್ಟು ಕೆಲಸ ಮಾಡುತ್ತಿದೆ ಎಂದು ಹೇಳಿದ್ದಾರೆ.

100 ಮೀಟರ್‌ಗಳಷ್ಟು ಚಲಿಸಿದ ಪ್ರಗ್ಯಾನ್ ರೋವರ್: ಇದೇ ವೇಳೆ ಮತ್ತೊಂದು ಮಹತ್ವದ ಮಾಹಿತಿ ಹಂಚಿಕೊಂಡಿರುವ ಸೋಮನಾಥ್ ಅವರು, ಲ್ಯಾಂಡರ್‌ನಿಂದ ಪ್ರಗ್ಯಾನ್ ರೋವರ್ ಸುಮಾರು 100 ಮೀಟರ್‌ಗಳಷ್ಟು ದೂರ ಕ್ರಮಿಸಿದೆ ಎಂದು ಹೇಳಿದ್ದಾರೆ. 'ಒಳ್ಳೆಯ ಸುದ್ದಿ ಏನೆಂದರೆ, ರೋವರ್ ಲ್ಯಾಂಡರ್‌ನಿಂದ ಸುಮಾರು 100 ಮೀಟರ್‌ಗಳಷ್ಟು ಚಲಿಸಿದೆ ಮತ್ತು ಮುಂಬರುವ ಒಂದು ಅಥವಾ ಎರಡು ದಿನಗಳಲ್ಲಿ ಈ ಎರಡೂ ವ್ಯವಸ್ಥೆಗಳನ್ನು ನಿದ್ರಿಸುವ ಪ್ರಕ್ರಿಯೆಯನ್ನು ನಾವು ಪ್ರಾರಂಭಿಸಲಿದ್ದೇವೆ. ಏಕೆಂದರೆ ಅವು ರಾತ್ರಿಯನ್ನು ತಡೆದುಕೊಳ್ಳಬೇಕು" ಎಂದು ಅವರು ಹೇಳಿದರು.

> “ ಇನ್ನು ಪ್ರಸ್ತುತ ರೋವರ್ ಮತ್ತು ಲ್ಯಾಂಡರ್‌ಗಳು ನಿದ್ರೆಗೆ ಜಾರಲಿದ್ದು ಆ ಬಳಿಕ ಮುಂದಿನ ಕಥೆ ಏನು ಎಂಬ ಪ್ರಶ್ನೆ ಮೂಡುತ್ತದೆ. 14 ದಿನಗಳ ರಾತ್ರಿ ಕಳೆದ ಬಳಿಕ ಮತ್ತೆ 15ನೇ ದಿನ ಚಂದ್ರನಲ್ಲಿ ಬೆಳಕಾಗುತ್ತದೆ. ಆಗ ಪ್ರಗ್ಯಾನ್ ರೋವರ್ ಮತ್ತು ವಿಕ್ರಮ್ ಲ್ಯಾಂಡರ್‌ಗೆ ಸೂರ್ಯ ಬಿಸಿಲು ತಾಗಿ ಅವುಗಳಲ್ಲಿನ ಸೋಲಾರ್ ಫಲಕಗಳು ಚಾಲ್ತಿಗೊಳ್ಳಬಹುದು. ಒಂದು ವೇಳೆ ಸೋಲಾರ್ ಫಲಕಗಳು ಚಾಲ್ತಿಗೊಂಡು ಇಂಧನ ಭರ್ತಿಯಾದರೆ ಮತ್ತೆ ಎಂದಿನಂತೆ ಪ್ರಗ್ಯಾನ್ ರೋವರ್ ಮತ್ತು ವಿಕ್ರಮ್ ಲ್ಯಾಂಡರ್ ತಮ್ಮ ಕೆಲಸಗಳಲ್ಲಿ ತೊಡಗಿಕೊಳ್ಳಲಿವೆ.
>
> **–ಸೋಮನಾಥ್, ಇಸ್ರೋ ಅಧ್ಯಕ್ಷ**

ಒಂದು ದೇಶ, ಒಂದು ಚುನಾವಣೆ: ಕೇಂದ್ರದಿಂದ ಇಂದು ಮಹತ್ವದ ಹೆಜ್ಜೆ!

ನವದೆಹಲಿ, ಸೆ.2– ಸೆ.18ರಿಂದ 22 ರವರೆಗೆ ನಡೆಯಲಿರುವ ಸಂಸತ್ತಿನ ವಿಶೇಷ ಅಧಿವೇಶನದಲ್ಲಿ 'ಒಂದು ದೇಶ, ಒಂದು ಚುನಾವಣೆ ವಿಧೇಯಕ' ಮಂಡನೆ ಮಾಡಲಿರುವುದಾಗಿ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ ನಿನ್ನೆಯಷ್ಟೇ ಹೇಳಿದ್ದರು.

ಆ ನಿಟ್ಟಿನಲ್ಲಿ ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ನೇತೃತ್ವದ ಸಮಿತಿಯನ್ನೂ ರಚನೆ ಮಾಡಲಾಗಿತ್ತು. ಇಂದು ಆ ಸಮಿತಿಗೆ 7 ಮಂದಿ ಸದಸ್ಯರನ್ನು ಕೂಡ ನೇಮಿಸಲಾಗಿದೆ. ಈ ಮೂಲಕ ಒಂದು ದೇಶ, ಒಂದು ಚುನಾವಣೆ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಮಹತ್ವದ ಹೆಜ್ಜೆಯನ್ನು ಇಟ್ಟಿದೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ, ಕಾಂಗ್ರೆಸ್ ಸಂಸದ ಅಧಿರ್ ರಂಜನ್ ಚೌಧರಿ, ಮಾಜಿ ಸಂಸದ ಗುಲಾಂ ನಬಿ ಆಜಾದ್, 15ನೇ ಹಣಕಾಸು ಆಯೋಗದ ಮಾಜಿ ಛೇರ್ಮನ್ ಎನ್.ಕೆ.ಸಿಂಗ್, ಲೋಕಸಭೆಯ ಮಾಜಿ ಸೆಕ್ರೆಟರಿ ಜನರಲ್ ಡಾ.ಸುಭಾಷ್ ಸಿ.ಕಶ್ಯಪ್, ಹಿರಿಯ ವಕೀಲ ಹರೀಶ್ ಸಾಳ್ವೆ, ಮಾಜಿ ಚೀಫ್ ವಿಜಿಲೆನ್ಸ್ ಕಮಿಷನರ್ ಸಂಜಯ್ ಕೊಠಾರಿ ಅವರನ್ನು ಸಮಿತಿ ಸದಸ್ಯರನ್ನಾಗಿ ನೇಮಿಸಲಾಗಿದೆ. ಅಂದ ಹಾಗೆ, ಈ ವಿಧೇಯಕ ಜಾರಿಗೆ ಬಂದಲ್ಲಿ ದೇಶದಲ್ಲಿ ಲೋಕಸಭೆ ಹಾಗೂ ವಿಧಾನಸಭೆ ಚುನಾವಣೆಗಳು ಏಕ ಕಾಲದಲ್ಲಿ ನಡೆಯಲಿವೆ.

ಸಿಸ್ಟರ್ ಜಿನೆವೀವ್ ವೈಲೆಟ್ ನಿಧನ



ಬೆಂಗಳೂರು, ಸೆ.2– ಮೈಸೂರು ಪ್ರಾಂತ್ಯದಲ್ಲೂ ಸೇವೆ ಸಲ್ಲಿಸಿದ್ದ ಸಿಸ್ಟರ್ ಜಿನೆವೀವ್ ವೈಲೆಟ್ ಅವರು ಬೆಂಗಳೂರಿನಲ್ಲಿ ಶನಿವಾರ ಸಂಜೆ ನಿಧನರಾದರು. ಬೆಂಗಳೂರು ವಸಂತನಗರದ ಮೌಂಟ್ ಕಾರ್ಮೆಲ್ ಕಾಲೇಜು ಪ್ರಾರ್ಥನಾ ಮಂದಿರದಲ್ಲಿ ಭಾನುವಾರ ಮಧ್ಯಾಹ್ನ 3ಕ್ಕೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ತಿಳಿದುಬಂದಿದೆ. ಸಿಸ್ಟರ್ ಜಿನೆವೀವ್ ವೈಲೆಟ್ ಅವರು ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜಿನ ಪ್ರಾಂಶುಪಾಲರಾಗಿ, ಕರ್ನಾಟಕ ಪ್ರಾದೇಶಿಕ ಶಿಕ್ಷಣ ಆಯೋಗದ ಕಾರ್ಯದರ್ಶಿಯಾಗಿ, ಮೈಸೂರು ಪ್ರಾಂತ್ಯ ಹಾಗೂ ಕರ್ನಾಟಕ ಪಿಎಂಐನ ಸಹಾಯಕ ಸಂಯೋಜಕಿಯಾಗಿ, ಕಾರ್ಮೆಲೈಟ್ ಸಿಸ್ಟರ್ಸ್ ಆಫ್ ಸೇಂಟ್ ತೆರೇಸಾ ಪ್ರಾಂತೀಯವಾಗಿ ಕಾರ್ಯ ನಿರ್ವಹಿಸಿದ್ದರು.

ಎಂ.ಟಿ.ಯೋಗೇಶ್ ಕುಮಾರ್
ಮೊ. 9880813195





ಇವರೇ ದಸರಾ ಕಲಿಗಳು...

ನಾಡಹಬ್ಬ ದಸರಾ ಮಹೋತ್ಸವಕ್ಕೂ ಗಜಪಡೆಗೂ ಅವಿನಾಭಾವ ಸಂಬಂಧವಿದೆ. 1610ರಲ್ಲಿ ಆರಂಭವಾದ ಮೈಸೂರು ದಸರಾ ಮಹೋತ್ಸವಕ್ಕೆ 413 ವರ್ಷಗಳ ಇತಿಹಾಸವಿದ್ದು, ಅಂದಿನಿಂದಲೂ ಜಂಬೂಸವಾರಿಯಲ್ಲಿ ಗಜಪಡೆಯದ್ದೇ ಕಾರುಬಾರು. ಆ ಪರಂಪರೆಯನ್ನು ಇಂದಿಗೂ ಗಜಪಡೆ ಮುಂದುವರೆಸಿಕೊಂಡು ಹೋಗುತ್ತಿದೆ.ಅಪಾರ ಜನಸ್ತೋಮದ ನಡುವೆ ಚಿನ್ನದ ಅಂಬಾರಿಯನ್ನು ಹೊತ್ತು ರಾಜಗಾಂಭಿರ್ಯದಿಂದ ಸಾಗುವ ಗಜಪಡೆ ಪ್ರಮುಖ ಆಕರ್ಷಣೆ. ವಿಜಯನಗರ ಅರಸರ ಕಾಲದಿಂದ ಮೈಸೂರು ರಾಜಮನೆತನ ಹಾಗೂ ಇದೀಗ ಸರ್ಕಾರದ ವತಿಯಿಂದ ಆಚರಿಸಲ್ಪಡುತ್ತಿರುವ ದಸರಾ ಮಹೋತ್ಸವದಲ್ಲಿ ಗಜಪಡೆಗೆ ಅದೇ ಮಹತ್ವವಿದೆ. ರಾಜರ ಆಳ್ವಿಕೆಯ ಕಾಲದಲ್ಲಿ ಜಯರಾಮ, ಬಲರಾಮ, ಮಹೇಂದ್ರ, ಜಯಮಾರ್ತಾಂಡ, ಬಿಳಿಗಿರಿ, ರಾಜೇಂದ್ರ, ಗಜೇಂದ್ರ ಸೇರಿದಂತೆ ಹಲವು ಆನೆಗಳು ಚಿನ್ನದ ಅಂಬಾರಿಯನ್ನು ಹೊತ್ತು ಸೈ ಎನಿಸಿಕೊಂಡಿದ್ದವು. ನಂತರ ಪ್ರಜಾಪ್ರಭುತ್ವದ ವ್ಯವಸ್ಥೆಯಡಿ ಆಚರಿಸಲ್ಪಟ್ಟ ದಸರೆಯಲ್ಲಿ ದ್ರೋಣ, ಬಲರಾಮ, ಅರ್ಜುನ ಚಿನ್ನದ ಅಂಬಾರಿ ಹೊತ್ತು ಸೈ ಎನಿಸಿಕೊಂಡಿದ್ದವು. 2023ನೇ ಸಾಲಿನ ದಸರಾ ಮಹೋತ್ಸವಕ್ಕೆ ಅಂಬಾರಿ ಆನೆ ಅಭಿಮನ್ಯು ನೇತೃತ್ವದಲ್ಲಿ 14 ಆನೆಗಳು ಆಯ್ಕೆಯಾಗಿದ್ದು, ಮೊದಲ ತಂಡದಲ್ಲಿ 9 ಈಗಾಗಲೇ ಆಗಮಿಸಿದ್ದರೆ, ಎರಡನೇ ತಂಡದಲ್ಲಿ 5 ಆನೆಗಳು ಆಗಮಿಸಲಿವೆ. 2023ನೇ ಸಾಲಿನ ದಸರಾ ಉತ್ಸವದಲ್ಲಿ ಪಾಲ್ಗೊಳ್ಳುತ್ತಿರುವ ಗಜಪಡೆ ಕಿರು ಪರಿಚಯ ಇಲ್ಲಿದೆ;

ಅಭಿಮನ್ಯು (ಗಜಪಡೆ ನಾಯಕ)



ಕೂಂಬಿಂಗ್ ಸ್ಟಾರ್ ಅಭಿಮನ್ಯು(57) ಈ ಬಾರಿಯೂ ಅಂಬಾರಿ ಹೊರಲಿದ್ದಾನೆ. ಇದರೊಂದಿಗೆ ಸತತ ನಾಲ್ಕನೇ ಬಾರಿಗೆ ಅಂಬಾರಿ ಹೊತ್ತಂತಾಗುತ್ತದೆ. ಮತ್ತಿಗೋಡು ಶಿಬಿರ ಅಭಿಮನ್ಯು ನೆಲೆ. 1970ರಲ್ಲಿ ಕೊಡಗು ಜಿಲ್ಲೆ ಹೆಬ್ಬಳ್ಳ ಅರಣ್ಯ ಪ್ರದೇಶದಲ್ಲಿ ಸೆರೆ ಸಿಕ್ಕಿದ್ದ. ಇದುವರೆಗೆ 200ಕ್ಕೂ ಹೆಚ್ಚು ಪುಂಡಾನೆ ಸೆರೆ, 40ಕ್ಕೂ ಹೆಚ್ಚು ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದಾನೆ. ಕಳೆದ 26 ವರ್ಷದಿಂದಲೂ ದಸರಾದಲ್ಲಿ ಪಾಲ್ಗೊಂಡ ಅನುಭವ. ಮೊದಲು ಕರ್ನಾಟಕ ವಾದ್ಯಗೋಷ್ಠಿ ತಂಡದ ಗಾಡಿಯನ್ನು 5–6 ವರ್ಷ ಎಳೆದಿದ್ದ. 2020 ರಿಂದ ಅಂಬಾರಿ ಹೊರುವ ಜವಾಬ್ದಾರಿ ಹೊತ್ತಿದ್ದಾನೆ. 2.74 ಮೀಟರ್ ಎತ್ತರವಿದ್ದು, 4700 ರಿಂದ 5000 ಕೆ.ಜಿ. ತೂಗುತ್ತಾನೆ. ಈತನ ಪಾಲನೆ ಹೊಣೆ ಹೊತ್ತವರು ಮಾವುತ ಜೆ.ಎಸ್.ವಸಂತ ಹಾಗೂ ಕಾವಾಡಿ ಜೆ.ಕೆ.ರಾಜು.

ಅರ್ಜುನ




ಹೆಚ್.ಡಿ.ಕೋಟೆ ತಾಲೂಕಿನ ಬಳ್ಳೆ ಆನೆ ಶಿಬಿರ ವ್ಯಾಪ್ತಿ. ಈತ ಗಜಪಡೆಯ ಮಾಜಿ ನಾಯಕ. 65 ವರ್ಷ ವಯಸ್ಸಾಗಿದ್ದು, 5800 ರಿಂದ 6000 ಕೆ.ಜಿ ತೂಕವಿದ್ದಾನೆ. 22 ವರ್ಷದಿಂದ ದಸರಾದಲ್ಲಿ ಪಾಲ್ಗೊಳ್ಳುತ್ತಿದ್ದಾನೆ. 2012 ರಿಂದ 2019 ರವರೆಗೆ ಅಂಬಾರಿ ಹೊತ್ತಿದ್ದಾನೆ. 3.75 ಮೀಟರ್ ಉದ್ದ, 2.98 ಮೀಟರ್ ಎತ್ತರವಿದ್ದು, 1968ರಲ್ಲಿ ಖೆಡ್ಡಾ ವಿಧಾನದಲ್ಲಿ ಕಾಕನಕೋಟೆ ಅರಣ್ಯ ಪ್ರದೇಶದಲ್ಲಿ ಸೆರೆ ಸಿಕ್ಕಿದ್ದ. ಈಗ ದಸರೆಯ ನಿಶಾನೆ ಆನೆಯಾಗಿ ಮೆರವಣಿಗೆಯ ಮುಂಚೂಣಿಯಲ್ಲಿ ಸಾಗಲಿದ್ದಾನೆ. ಮಾವುತ ವಿನು, ಕಾವಾಡಿ ಡಿ.ರಾಜ ಇವನ ಪಾಲನೆ–ಪೋಷಣೆ ಮಾಡುತ್ತಿದ್ದಾರೆ.

ಧನಂಜಯ



ದುಬಾರೆ ಆನೆ ಶಿಬಿರ ವಾಸಿ. 43 ವರ್ಷದ ಇವನನ್ನು 2013ರಲ್ಲಿ ಹಾಸನ ಜಿಲ್ಲೆ ಯಸಳೂರು ವಲಯದಲ್ಲಿ ಸೆರೆ ಹಿಡಿಯಲಾಗಿತ್ತು. ಕಾಡಾನೆ ಮತ್ತು ಹುಲಿಗಳ ಸೆರೆ ಕಾರ್ಯಾಚರಣೆಯಲ್ಲಿ ಭಾಗಿ. ನಾಲ್ಕು ವರ್ಷದಿಂದ ದಸರಾದಲ್ಲಿ ಭಾಗವಹಿಸುತ್ತಿದ್ದು, 2.80 ಮೀಟರ್ ಎತ್ತರ, 4000 ರಿಂದ 4200 ಕೆ.ಜಿ. ತೂಗುತ್ತಾನೆ. ಈತ ದಸರೆಯ ನೌಫತ್. ಈತನ ಉಸ್ತುವಾರಿ ಮಾವುತ ಜೆ.ಸಿ.ಭಾಸ್ಕರ, ಕಾವಾಡಿ ಜೆ.ಎಸ್.ರಾಜಣ್ಣ.

ಭೀಮ




ಭವಿಷ್ಯದಲ್ಲಿ ಅಂಬಾರಿ ಆನೆಯಾಗುವ ಭರವಸೆ. 23 ವರ್ಷದ ಭೀಮ ಮೂರನೇ ಬಾರಿ ದಸರಾದಲ್ಲಿ ಪಾಲ್ಗೊಳ್ಳುತ್ತಿದ್ದಾನೆ. ಮತ್ತಿಗೋಡು ಕ್ಯಾಂಪ್‌ನಲ್ಲಿ ವಾಸ. 2.85 ಮೀ. ಎತ್ತರ, 3.05 ಮೀ. ಉದ್ದವಿದ್ದು, 3800 ರಿಂದ 4000 ಕೆ.ಜಿ. ತೂಕವಿದ್ದಾನೆ. ಕಳೆದ ವರ್ಷದಿಂದ ಪಟ್ಟದ ಆನೆಯೊಂದಿಗೆ ಅರಮನೆಯ ಪೂಜಾ ಕಾರ್ಯದಲ್ಲಿ ಪಾಲ್ಗೊಳ್ಳುತ್ತಿದ್ದಾನೆ. 2009ರಲ್ಲಿ ಹಾಸನ ಜಿಲ್ಲೆಯ ಸಕಲೇಶಪುರದ ಎತ್ತೂರಿನಲ್ಲಿ ಸೆರೆ ಹಿಡಿಯಲಾಗಿತ್ತು. ಭೀಮನನ್ನು ಮಾವುತ ಗುಂಡ, ಕಾವಾಡಿ ನಂಜುಂಡಸ್ವಾಮಿ ನೋಡಿಕೊಳ್ಳುತ್ತಿದ್ದಾರೆ.

ಮಹೇಂದ್ರ



ಮೊದಲ ಬಾರಿ ಶ್ರೀರಂಗಪಟ್ಟಣ ದಸರೆಯಲ್ಲಿ ಅಂಬಾರಿ ಹೊತ್ತು ಸೈ ಎನಿಸಿಕೊಂಡಿದ್ದ. 40 ವರ್ಷದ ಈತನಿಗೆ ಅಂಬಾರಿ ಹೊರುವ ಸಾಮರ್ಥ್ಯವಿದೆ. ಎರಡನೇ ಬಾರಿಗೆ ಆಗಮಿಸಿರುವ ಮತ್ತೀಗೋಡು ಶಿಬಿರದ ಈತ 2.75 ಮೀ. ಎತ್ತರ, 3.25 ಮೀ. ಉದ್ದ ಹಾಗೂ 3800–4000 ಕೆ.ಜಿ. ತೂಕವಿದ್ದಾನೆ. ಕಾಡಾನೆ ಹಾಗೂ ಹುಲಿ ಸೆರೆ ಕಾರ್ಯಾಚರಣೆಯಲ್ಲೂ ಪಾಲ್ಗೊಂಡಿದ್ದಾನೆ. ಮಾವುತ ರಾಜಣ್ಣ, ಕಾವಾಡಿ ಮಲ್ಲಿಕಾರ್ಜುನ ಈತನ ಸಲಹುತ್ತಿದ್ದಾರೆ.

ಗೋಪಿ



ದುಬಾರೆ ಶಿಬಿರ ವಾಸಿ 41 ವರ್ಷದ ಗೋಪಿ, ಭರವಸೆ ಮೂಡಿಸಿದ್ದಾನೆ. 12ನೇ ಬಾರಿಗೆ ಜಂಬೂ ಸವಾರಿಯಲ್ಲಿ ಪಾಲ್ಗೊಳ್ಳುತ್ತಿದ್ದಾನೆ. 1990ರಲ್ಲಿ ಹಾಸನದ ದೊಡ್ಡಬೆಟ್ಟ ಅರಣ್ಯ ಪ್ರದೇಶದಲ್ಲಿ ಸೆರೆ ಸಿಕ್ಕಿದ್ದ. 2015ರಲ್ಲಿ ಪಟ್ಟದ ಆನೆಯಾಗಿ ಅರಮನೆಯ ಪೂಜಾ ಕೈಂಕರ್ಯದಲ್ಲಿ ಭಾಗಿಯಾಗಿದ್ದ. 2.86 ಮೀ. ಎತ್ತರ, 3700 ರಿಂದ 3800 ಕೆ.ಜಿ. ತೂಕವಿರುವ ಈತನನ್ನು ಮಾವುತ ಪಿ.ಬಿ.ನವೀನ್‌ಕುಮಾರ್, ಕಾವಾಡಿ ಜೆ.ಆರ್.ಶಿವು ನೋಡಿಕೊಳ್ಳುತ್ತಿದ್ದಾರೆ.

ವಿಜಯ




ದುಬಾರೆ ಶಿಬಿರದ ವಾಸಿ 63 ವರ್ಷದ ವಿಜಯ, ಈ ಬಾರಿ ಕುಮ್ಕಿ ಆನೆಯಾಗಿ ಸಾಗಲಿದ್ದಾಳೆ. 2.44 ಮೀ, 3 ಮೀಟರ್ ಉದ್ದ ಹಾಗೂ 3250 ರಿಂದ 3500 ಕೆ.ಜಿ. ತೂಕವಿದ್ದಾಳೆ. 12 ಬಾರಿ ದಸರಾ ಅನುಭವ ಹೊಂದಿದ್ದಾಳೆ. ಈಕೆಯ ಮಾವುತ ಜೆ.ಕೆ.ಬೋಜಪ್ಪ, ಕಾವಾಡಿ ಬಿ.ಪಿ.ಭರತ್.

ವರಲಕ್ಷ್ಮೀ




ಭೀಮನಕಟ್ಟೆ ಶಿಬಿರದ 67 ವರ್ಷದ ವರಲಕ್ಷ್ಮೀ ಗಜಪಡೆಯ ಹಿರಿಯ ಸದಸ್ಯೆ. 2.36 ಎತ್ತರ, 3300 ರಿಂದ 3500 ಕೆ.ಜಿ. ತೂಕವಿದ್ದಾಳೆ. ಈ ಬಾರಿ ಕುಮ್ಕಿ ಆನೆ. 10ನೇ ಬಾರಿಗೆ ಜಂಬೂಸವಾರಿಯಲ್ಲಿ ಪಾಲ್ಗೊಳ್ಳುತ್ತಿರುವ ಈಕೆಯನ್ನು 1977ರಲ್ಲಿ ಕಾಕನಕೋಟೆ ಅರಣ್ಯದಲ್ಲಿ ಸೆರೆ ಹಿಡಿಯಲಾಗಿತ್ತು. ಮಾವುತ ಜೆ.ಕೆ.ರವಿ, ಕಾವಾಡಿ ಕೆ.ಎಸ್.ಲವ ಈಕೆಯ ಪಾಲನೆ ಮಾಡುತ್ತಿದ್ದಾರೆ.

ಕಂಜನ್




ಇದೇ ಮೊದಲ ಬಾರಿಗೆ ದಸರಾದಲ್ಲಿ ಪಾಲ್ಗೊಳ್ಳುತ್ತಿರುವ ದುಬಾರೆ ಕ್ಯಾಂಪ್‌ನ 24 ವರ್ಷದ ಕಂಜನ್, ಭಾರೀ ನಿರೀಕ್ಷೆ ಹುಟ್ಟಿಸಿದ್ದಾನೆ. 2014ರಲ್ಲಿ ಹಾಸನದ ಆಲೂರು ಬಳಿ ಸೆರೆ ಹಿಡಿದು ಪಳಗಿಸಲಾಗಿದೆ. ಹುಲಿ ಸೆರೆ, ಕಾಡಾನೆ ಸೆರೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದಾನೆ. 2.62 ಎತ್ತರ, 3700 ರಿಂದ 3900 ಕೆ.ಜಿ. ತೂಕವಿದ್ದಾನೆ. ಈತನ ಮಾವುತ ಜೆ.ಬಿ.ವಿಜಯ, ಕಾವಾಡಿ ಮಣಿಕಂಠ ಪಾಲನೆ ಮಾಡುತ್ತಿದ್ದಾರೆ.

ಲಕ್ಷ್ಮೀ



ಕಳೆದ ಬಾರಿ ರಾಂಪುರ ಕ್ಯಾಂಪ್‌ನ ಲಕ್ಷ್ಮಿ, ಅರಮನೆ ಆವರಣದಲ್ಲೇ ಗಂಡು ಮರಿಗೆ(ದತ್ತಾತ್ರೇಯ) ಜನ್ಮ ನೀಡಿದ್ದರಿಂದ ಈ ಬಾರಿ ದೊಡ್ಡ ಹರವೆ ಶಿಬಿರದ 52 ವರ್ಷದ ಲಕ್ಷ್ಮಿಯನ್ನು ಕರೆತರಲಾಗುತ್ತಿದೆ. ಇದೇ ಮೊದಲ ಬಾರಿಗೆ ದಸರಾದಲ್ಲಿ ಪಾಲ್ಗೊಳ್ಳುತ್ತಿರುವ ಲಕ್ಷ್ಮೀ, 2.52 ಎತ್ತರ, 3000 ರಿಂದ 3200 ಕೆ.ಜಿ. ತೂಕವಿದ್ದಾಳೆ. ಮಾವುತ ರವಿ, ಕಾವಾಡಿ ಮಂಜು ಈಕೆಯ ಪಾಲನೆ ಮಾಡುತ್ತಿದ್ದಾರೆ.

ರೋಹಿತ



ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ರಾಂಪುರ ಕ್ಯಾಂಪ್‌ನಲ್ಲಿರುವ 21 ವರ್ಷದ ರೋಹಿತ ಇದೇ ಮೊದಲ ಬಾರಿಗೆ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದಾನೆ. ಗಜಪಡೆಯ ಅತ್ಯಂತ ಕಿರಿಯ ಸದಸ್ಯ. 2.70 ಮೀ. ಎತ್ತರ, 2900 ರಿಂದ 3000 ತೂಕವಿದ್ದಾನೆ. ಮಾವುತ ಮಹದೇವ, ಕಾವಾಡಿ ಮಣಿ ಈತನನ್ನು ನೋಡಿಕೊಳ್ಳುತ್ತಿದ್ದಾರೆ.

ಹಿರಣ್ಯಾ



ಬಂಡೀಪುರದ ರಾಂಪುರ ಕ್ಯಾಂಪ್‌ನ ಚೈತ್ರ ಗರ್ಭಿಣಿಯಾದ ಹಿನ್ನೆಲೆಯಲ್ಲಿ ದಸರಾದಿಂದ ದೂರವುಳಿದಳು. ಈ ಸ್ಥಾನಕ್ಕೆ ಹಿರಣ್ಯಾಳ ಕರೆತರಲಾಗುತ್ತಿದೆ. ಇದೇ ಮೊದಲ ಬಾರಿಗೆ ದಸರಾದಲ್ಲಿ ಪಾಲ್ಗೊಳ್ಳುತ್ತಿದ್ದಾಳೆ. 46 ವರ್ಷದ ಹಿರಣ್ಯಾ 2.50 ಮೀ. ಎತ್ತರ, 3000 ರಿಂದ 3200 ಕೆ.ಜಿ. ತೂಕವಿದ್ದಾಳೆ. ಮಾವುತ ಚಂದ್ರಶೇಖರ್, ಕಾವಾಡಿ ಮನ್ಸೂರ್ ಪಾಲನೆ ಮಾಡುತ್ತಿದ್ದಾರೆ.

ಪ್ರಶಾಂತ



ದುಬಾರೆ ಆನೆ ಶಿಬಿರದ ಮತ್ತೊಬ್ಬ ಸದಸ್ಯ. ಈತ 50 ವರ್ಷದವನಾಗಿದ್ದು, 14ನೇ ಬಾರಿ ದಸರಾದಲ್ಲಿ ಪಾಲ್ಗೊಳ್ಳುತ್ತಿದ್ದಾನೆ. 1993ರಲ್ಲಿ ಕಾರೇಕೊಪ್ಪ ಅರಣ್ಯ ಪ್ರದೇಶದಲ್ಲಿ ಸೆರೆ ಸಿಕ್ಕಿದ್ದ. ಅತ್ಯಂತ ಬಲಿಷ್ಠನಾಗಿದ್ದಾನೆ. 4000 ರಿಂದ 4200 ಕೆ.ಜಿ. ತೂಕ, 2.61 ಮೀಟರ್ ಎತ್ತರ, 3.46 ಮೀಟರ್ ಉದ್ದವಿದ್ದಾನೆ. ಮಾವುತ ಚಿನ್ನಪ್ಪ, ಕಾವಾಡಿ ಚಂದ್ರನ ಪಾಲನೆಯಲ್ಲಿದ್ದಾನೆ.

ಸುಗ್ರೀವ



ದುಬಾರೆ ಶಿಬಿರದ 41 ವರ್ಷದ ಸುಗ್ರೀವ ಎರಡನೇ ಬಾರಿ ದಸರಾದಲ್ಲಿ ಪಾಲ್ಗೊಳ್ಳುತ್ತಿದ್ದಾನೆ. 2.77 ಮೀ. ಎತ್ತರ, 4300ರಿಂದ 4500 ಕೆ.ಜಿ.ತೂಕ ಹೊಂದಿದ್ದಾನೆ. ಇವನ ಪಾಲನೆ–ಪೋಷಣೆ ಮಾವುತ ಜೆ.ಬಿ.ಶಂಕರ್, ಕಾವಾಡಿ ಜೆ.ಬಿ.ಹರೀಶ್ ಜವಬ್ದಾರಿ.

ಕೊಡವ ಭೂಮಿ, ಜನಾಂಗದ ಸಂರಕ್ಷಣೆಯ ಅನಿವಾರ್ಯತೆ ಇದೆ

ಸಿಎನ್‌ಸಿಯಿಂದ 29ನೇ ವರ್ಷದ ಕೈಲ್ ಪೊಳ್ದ್ ಹಬ್ಬ ಆಚರಣೆ

ಮಡಿಕೇರಿ,ಸೆ.2– ಬದಲಾದ ಇಂದಿನ ಕಾಲಘಟ್ಟದಲ್ಲಿ ಕೊಡವ ಭೂಮಿ ಮತ್ತು ಅತ್ಯಂತ ಸೂಕ್ಷ್ಮ ಕೊಡವ ಬುಡಕಟ್ಟು ಜನಾಂಗದ ಸಂರಕ್ಷಣೆಯ ಅನಿವಾರ್ಯತೆ ಎದುರಾಗಿದೆ ಎಂದು ಹೈಕೋರ್ಟ್ ನ್ಯಾಯವಾದಿ ಕೀರನ್ ನಾರಾಯಣ್ ಪ್ರತಿಪಾದಿಸಿದ್ದಾರೆ.

ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಮಡಿಕೇರಿ ನಗರದ ಹೊರ ವಲಯದ ಕ್ಯಾಪಿಟಲ್ ವಿಲೇಜ್ ಮಂದ್‌ನಲ್ಲಿ ನಡೆದ 29ನೇ ವರ್ಷದ ಸಾರ್ವತ್ರಿಕ 'ಕೈಲ್ ಪೊಳ್ದ್' ಹಬ್ಬದ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.



ಕೊಡವರ ಅನನ್ಯ ಭೂಮಿ ಮತ್ತು ಸುಂದರವಾದ ಕೊಡವ ರೇಸ್ ಅನ್ನು ಒಟ್ಟಿಗೆ ಸಂರಕ್ಷಿಸಬೇಕಾಗಿದೆ. ಶಿಕ್ಷಣ, ಆರ್ಥಿಕ ಪ್ರಗತಿ ಮತ್ತು ಭವಿಷ್ಯವನ್ನು ಹುಡುಕಿಕೊಂಡು ಇಂದು ಯುವ ಜನಾಂಗ ಕೊಡಗಿನಿಂದ ಹೊರ ಹೋಗುತ್ತಿದ್ದಾರೆ. ಆದ್ದರಿಂದ ಭೂಮಿ ಮತ್ತು ಕೊಡವ ಜನಾಂಗವನ್ನು ಒಟ್ಟಿಗೆ ಸಂರಕ್ಷಿಸುವುದು ಬಹಳ ಮುಖ್ಯ ಎಂದರು.

ಕೊಡವಲ್ಯಾಂಡ್ ಭೂ–ರಾಜಕೀಯ ಸ್ವಾಯತ್ತತೆಯನ್ನು ಸಾಧಿಸುವ ಮೂಲಕ ಆ ಎಲ್ಲಾ ಉತ್ತಮ ಅವಕಾಶಗಳನ್ನು ಸೃಷ್ಟಿಸಲಾಗುತ್ತದೆ ಮತ್ತು ಕೊಡವ ಜನಾಂಗದ ಸರ್ವಾಂಗೀಣ ಸಬಲೀಕರಣ ಸಶಕ್ತಗೊಳಿಸಲು ಹಾದಿ ಸುಗಮವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಸಿಎನ್‌ಸಿ ಸಂಘಟನೆಯ ನ್ಯಾಯಸಮ್ಮತ ಬೇಡಿಕೆಗಳನ್ನು ಬೆಂಬಲಿಸಿ ಖ್ಯಾತ ಅರ್ಥಶಾಸ್ತ್ರಜ್ಞ ಡಾ.ಸುಬ್ರಮಣಿಯನ್ ಸ್ವಾಮಿ ಅವರು ಕರ್ನಾಟಕದ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ. ನಾವು ಕಾನೂನು ಪ್ರಕ್ರಿಯೆಗಳಲ್ಲಿ ಅವರಿಗೆ ಸಹಾಯ ಮಾಡುತ್ತಿದ್ದೇವೆ ಎಂದು ಕೀರನ್ ನಾರಾಯಣ್ ಹೇಳಿದರು.

ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಮಾತನಾಡಿ, ಕೊಡವ ಜನಾಂಗದ ಹಬ್ಬಗಳು ಪ್ರಕೃತಿ ಪೂಜೆಗೆ ಪೂರಕವಾಗಿವೆ. ಇವುಗಳನ್ನು ಎಲ್ಲಾ ಕೊಡವರು ಸಾರ್ವತ್ರಿಕವಾಗಿ ಆಚರಿಸುವ ಮೂಲಕ ಕೊಡವ ಬುಡಕಟ್ಟು ಜನಾಂಗದ ಶ್ರೀಮಂತ ಮತ್ತು ವಿಶಿಷ್ಟ ಸಂಸ್ಕೃತಿಯನ್ನು ಇಡೀ ವಿಶ್ವಕ್ಕೆ ಸಾಕ್ಷೀಕರಿಸಬೇಕೆಂದು ಕರೆ ನೀಡಿದರು. ಕೊಡವ ಲ್ಯಾಂಡ್ ಭೂ–ರಾಜಕೀಯ ಸ್ವಾಯತ್ತತೆ ಸೇರಿದಂತೆ ವಿವಿಧ ಬೇಡಿಕೆಗಳ ಹಕ್ಕೊತ್ತಾಯಗಳನ್ನು ಇದೇ ಸಂದರ್ಭ ಅವರು ಮಂಡಿಸಿದರು.

ಸಭಾ ಕಾರ್ಯಕ್ರಮಕ್ಕೂ ಮುನ್ನ 'ಕೈಲ್ ಪೊಳ್ದ್' ಪ್ರಯುಕ್ತ ಶಾಸ್ತ್ರೋಕ್ತ ಪ್ರಾರ್ಥನೆ ಮತ್ತು ಆರಾಧನೆ ನಡೆಯಿತು. ಕೊಡವ ರಕ್ಷಕರು ಹಾಗೂ ಪೂರ್ವಜರು, ಭೂದೇವಿ, ಪ್ರಕೃತಿ ಮತ್ತು ಪರ್ವತ ದೇವತೆ, ದೈವಿಕ ವಸಂತ ಕಾವೇರಿ ಮಾತೆ, ಸೂರ್ಯ ಹಾಗೂ ಚಂದ್ರರಿಗೆ ವಿಶೇಷ ಪ್ರಾರ್ಥನೆ ಸಲ್ಲಿಸಿ ಮೀಧಿ ಅರ್ಪಿಸಲಾಯಿತು.

ಸಂಸ್ಕಾರದ ಬಂದೂಕು–ಆಯುಧಗಳು ಮತ್ತು ಕೃಷಿ ಉಪಕರಣಗಳನ್ನು ಥೋಕ್ ಪೂಗಳಿಂದ ಅಲಂಕರಿಸಿ ಕೊಡವ ಜನಾಂಗದ 'ಮಂದ್'ನ ಗರ್ಭಗುಡಿಯಲ್ಲಿಟ್ಟು ಪೂಜಿಸಲಾಯಿತು. ಸಾಂಸ್ಕೃತಿಕ ಕಾರ್ಯಕ್ರಮಗಳಾದ 'ತೆಂಗೆ ಬೋಡಿ', ಪರೆಯ ಕಳಿ, ಶಕ್ತಿಕೋಲ್ ಬಲಿ, ಮುಕ್ಕೋಡ್ಲು ವ್ಯಾಲಿ ಡ್ಯೂ ಸಾಂಸ್ಕೃತಿಕ ಸಂಘದಿಂದ ಕತ್ತಿಯಾಟ್, ಕೋಲಾಟ್ ಮತ್ತು ಕೊಡವ, ಕೊಡವತಿಯರ ಜಾನಪದ ಕುಣಿತ, ಕೊಡವ ಜಾನಪದ ಆಟಗಳೊಂದಿಗೆ ಸಂಭ್ರಮಿಸಲಾಯಿತು. ಮುಖ್ಯ ಅತಿಥಿಗಳಾಗಿ ಶ್ರುತಿ ಕಿರಣ್ ಉಪಸ್ಥಿತರಿದ್ದರು.

ಸಿಎನ್‌ಸಿ ಪ್ರಮುಖರಾದ ಬೊಪ್ಪಂಡ ಬೊಳ್ಳಮ್ಮ, ಕಲಿಯಂಡ ಮೀನಾ, ಲೆಫ್ಟಿನೆಂಟ್ ಕರ್ನಲ್ ಬಿ.ಎಂ.ಪಾರ್ವತಿ, ನಂದಿನೆರವಂಡ ನಿಶಾ, ಪುಲ್ಲೇರ ಸ್ವಾತಿ ಕಾಳಪ್ಪ, ಪಟ್ಟಮಾಡ ಲಲಿತಾ, ಚೋಳಪಂಡ ಜ್ಯೋತಿ, ಬಾಚಮಂಡ ಕಸ್ತೂರಿ, ನಂದೇಟಿರ ಕವಿತ ರವಿ, ಕರುಮಂಡ ಸರಸು, ಬಾಚರಣಿಯಂಡ ಪ್ರಮೀಳಾ ಚಿಪ್ಪಣ್ಣ, ಚಾಮೇರ ಚಿಯಣ್ಣ, ಮುಕ್ಕಾಟ್ಟೀರ ಪೊನ್ನಪ್ಪ ಮತ್ತಿತರರು ಉಪಸ್ಥಿತರಿದ್ದು ಹಬ್ಬದ ಸಂಭ್ರಮ ಹಂಚಿಕೊಂಡರು.

ಬುಡಕಟ್ಟು ಜನರ ಶೋಷಣೆ ವಿರುದ್ಧ ಹೋರಾಟ ಅಗತ್ಯ

ವಿಶ್ವ ಆದಿವಾಸಿ ಹಕ್ಕುಗಳ ದಿನಾಚರಣೆಯಲ್ಲಿ ಅರ್ಜುನ್ ಮೌರ್ಯ ಕರೆ

ಗೋಣಿಕೊಪ್ಪ, ಸೆ.2: ಆದಿವಾಸಿ ಜನಾಂಗ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿಂದುಳಿದು ನಿರಂತರ ಶೋಷಣೆಗೆ ಒಳಗಾಗಿದೆ. ಯಾವುದೇ ಸರ್ಕಾರ ಬಂದರೂ ಕಾಡಿನ ಮಕ್ಕಳಿಗೆ ನ್ಯಾಯ ಸಿಗುತ್ತಿಲ್ಲ. ಈ ನಿಟ್ಟಿನಲ್ಲಿ ಬುಡಕಟ್ಟು ಜನಾಂಗ ಸಂಘಟಿತ ಹೋರಾಟ ಮಾಡುವುದು ಅನಿವಾರ್ಯ ಎಂದು ಕವಿ, ವಿರಾಜಪೇಟೆ ಸಂತ ಅನ್ನಮ್ಮ ಪದವಿ ಕಾಲೇಜು ಉಪನ್ಯಾಸಕ ಅರ್ಜುನ್ ಮೌರ್ಯ ಅಭಿಪ್ರಾಯಪಟ್ಟರು.



ಗೋಣಿಕೊಪ್ಪಲು ಮಹಿಳಾ ಸಮಾಜದ ಆವರಣದಲ್ಲಿ ನಡೆದ ವಿಶ್ವ ಆದಿವಾಸಿ ಹಕ್ಕುಗಳ ದಿನಾಚರಣೆ ಹಾಗೂ ಜಿಲ್ಲಾ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ವಿಶ್ವದ ಸುಮಾರು 90 ರಾಷ್ಟ್ರಗಳಲ್ಲಿ 476 ಮಿಲಿಯನ್ ಆದಿವಾಸಿಗಳಿದ್ದಾರೆ. ಶೇ.50 ರಷ್ಟು ಬುಡಕಟ್ಟು ಜನಾಂಗ ಹಸಿವಿನಿಂದ ಕಂಗೆಟ್ಟಿದ್ದು ಸರ್ಕಾರದ ಅನುದಾನಗಳು ಶೋಷಿತರಿಗೆ ನ್ಯಾಯೋಚಿತವಾಗಿ ಸಿಗುತ್ತಿಲ್ಲ. ಕೊಡಗು ಜಿಲ್ಲೆಯ ಶೇ.43ರಷ್ಟು ಅರಣ್ಯ ಸಂರಕ್ಷಣೆಗೆ ಆದಿವಾಸಿ ಜನಾಂಗದ ಆಚಾರ, ವಿಚಾರ ಕಾರಣವಾಗಿದೆ.

ಜೇನು ಕುರುಬ, ಬೆಟ್ಟ ಕುರುಬ, ಪಂಜರಿಯರವ ಜನಾಂಗದ ನಡುವೆ ವೈಷಮ್ಯ ಬಿತ್ತಿ ಪರಸ್ಪರ ಸಂಘರ್ಷ ಹುಟ್ಟು ಹಾಕಲಾಗುತ್ತಿದೆ ಎಂದು ಅವರು ವಿಷಾದ ವ್ಯಕ್ತಪಡಿಸಿದರು. ಬುಡಕಟ್ಟು ಸಮುದಾಯ ಮೊದಲು ಸಂಘಟಿತರಾಗಬೇಕು. ಸರ್ಕಾರದ ಅನುದಾನ ಕಟ್ಟ ಕಡೆಯ ವ್ಯಕ್ತಿಗೆ ಸಿಗುವಂತಾಗಬೇಕು. ಭೂಮಿ, ವಸತಿ ಹಾಗೂ ಮೂಲಭೂತ ಹಕ್ಕುಗಳಿಗೆ ಹೋರಾಡುವ ಅನಿವಾರ್ಯತೆ ಎದುರಾಗಿದೆ ಎಂದ ಅವರು, ಪ್ರಕೃತಿ ಆರಾಧಕರು, ಪಂಚಭೂತಗಳ ಧರ್ಮವನ್ನು ಪಾಲಿಸುವವರು ಕಾಡಿನ ಮಕ್ಕಳು ಎಂದು ಬಣ್ಣಿಸಿದರು.

ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ರಾಜ್ಯ ಸಹ ಸಂಚಾಲಕ ಡಾ.ಎಸ್.ವೈ. ಗುರುಶಾಂತ್ ಮಾತನಾಡಿ, ಅನ್ಯ ಜನಾಂಗ, ಆರ್ಥಿಕವಾಗಿ ಬಲಾಢ್ಯರಾದವರು ಬುಡಕಟ್ಟು ಸ್ಥಾನಮಾನ ಪಡೆಯಲು ಹೊಂಚು ಹಾಕುತ್ತಿದ್ದಾರೆ. ಇವರ ವಿರುದ್ಧ ರಾಜ್ಯ ಮಟ್ಟದಲ್ಲಿ ಆದಿವಾಸಿಗಳು ಸಂಘಟಿತ ಹೋರಾಟ ನಡೆಸುವ ಅನಿವಾರ್ಯತೆ ಎದುರಾಗಿದೆ ಎಂದರು.

ನಮ್ಮ ಜನಾಂಗದ ಹಕ್ಕುಗಳು ಕಸಿಯಲು ಸರ್ಕಾರದ ಮಟ್ಟದಲ್ಲಿಯೂ ಪ್ರಚೋದನೆ ನಡೆಯುತ್ತಿದೆ. ಆದಿವಾಸಿ ದೇವರುಗಳನ್ನು, ಭದ್ರಕಾಳಿ ದೇವರ ಸಂಸ್ಕೃತಿಯನ್ನು, ಪಾರಂಪರಿಕ ಹಕ್ಕನ್ನು ಪ್ರಬಲರು ಕಬಳಿಸಲು ಹುನ್ನಾರ ನಡೆಸಿದ್ದಾರೆ ಎಂದು ಅವರು ತಿಳಿಸಿದರು.

ರಾಜ್ಯ ಸರ್ಕಾರ ಎಸ್‌ಸಿ, ಎಸ್‌ಟಿ ಅಭ್ಯುದಯಕ್ಕೆ ಬಜೆಟ್‌ನಲ್ಲಿ 34 ಸಾವಿರ ಕೋಟಿ ರೂ. ಅನುದಾನ ಮೀಸಲಿಟ್ಟಿದ್ದು, ಈಗಾಗಲೇ ಸುಮಾರು 11 ಸಾವಿರ ಕೋಟಿ ರೂ. ಹಣವನ್ನು ಬೇರೆ ಉದ್ದೇಶಕ್ಕೆ ಬಳಸಿಕೊಂಡಿರುವುದು ಅಕ್ಷಮ್ಯ. ಈ ನಿಟ್ಟಿನಲ್ಲಿಯೂ ಹೋರಾಟ ಅನಿವಾರ್ಯವಾಗಿದೆ ಎಂದರು.

ಗ್ಯಾರಂಟಿ ಯೋಜನೆಯಿಂದ ಬಡವರು, ಬುಡಕಟ್ಟು ಜನಾಂಗ ಸೋಮಾರಿಗಳಾಗಿದ್ದಾರೆ ಎಂಬ ಆರೋಪದಲ್ಲಿ ಹುರುಳಿಲ್ಲ ಎಂದು ಡಾ.ಗುರುಶಾಂತ್ ತಿಳಿಸಿದರು.

ಕೊಡಗು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಸದಸ್ಯ ಅಬ್ದುಲ್ ಲತೀಫ್ ಅವರು, ಆದಿವಾಸಿಗಳು ಶೈಕ್ಷಣಿಕವಾಗಿ, ಆರ್ಥಿಕವಾಗಿ ಪ್ರಗತಿ ಸಾಧಿಸಲು ಸಂಘಟಿತ ಪ್ರಯತ್ನ ಮಾಡಬೇಕೆಂದರು. ದಲಿತ ಸಂಘರ್ಷ ಸಮಿತಿ ಜಿಲ್ಲಾ ಪ್ರಮುಖ ಕೃಷ್ಣಪ್ಪ, ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್‌ನ ಹೆಚ್.ಬಿ. ರಮೇಶ್, ನಾಗರಹೊಳೆ ಜಮ್ಮಾ ಪಾಳೆ ಹಕ್ಕು ಸ್ಥಾಪನಾ ಸಮಿತಿ ಕಾರ್ಯದರ್ಶಿ ಶಿವು, ಯುವ ವಕೀಲರಾದ ಕುಮಾರಿ ವಿದ್ಯಾ ಮುಂತಾದವರು ಉಪಸ್ಥಿತರಿದ್ದರು.

ಕರ್ನಾಟಕ ರಾಜ್ಯ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಸಂಚಾಲಕ ಮತ್ತು ಕೊಡಗು ಜಿಲ್ಲಾ ಆದಿವಾಸಿ ಹಕ್ಕು ಸಮನ್ವಯ ಸಮಿತಿ ಅಧ್ಯಕ್ಷ ವೈ.ಕೆ. ಗಣೇಶ್ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಂಘಟನೆಯ ರಾಜ್ಯ ಸಹ ಸಂಚಾಲಕಿ ಪ್ರೇಮಾ ಸ್ವಾಗತ ಹಾಗೂ ಪುಷ್ಪಾ ವಂದಿಸಿದರು.

ವಿರಾಜಪೇಟೆಯಿಂದ ಮಹಿಳೆ ನಾಪತ್ತೆ

ವಿರಾಜಪೇಟೆ, ಸೆ.2– ನಗರದ ಬಂಗಾಳಬೀದಿ ನಿವಾಸಿ ಐಸಮ್ಮ ಆ.26 ರಿಂದ ನಾಪತ್ತೆಯಾಗಿದ್ದಾರೆ. ಅಂದು ಸಂಜೆ ಮನೆಯಿಂದ ಹೋದವರು ಇದುವರೆಗೂ ಮನೆಗೆ ಹಿಂದಿರುಗಿಲ್ಲ. ಅಕ್ಕಪಕ್ಕದವರನ್ನು ವಿಚಾರಿಸಿದಾಗ ಮನೆಯ ಹೊರಗೆ ಹೋಗುವುದನ್ನು ಕಂಡಿದ್ದೇವೆ ಎನ್ನುತ್ತಾರೆ. ಕಾಣೆಯಾಗಿರುವ ಐಸಮ್ಮಳನ್ನು ಹುಡುಕಿಕೊಡುವಂತೆ ಅವರ ಪತಿ ಹೆಚ್.ಎಸ್. ಹಸೈನಾರ್ ನಗರ ಠಾಣೆ ಪೊಲೀಸರಿಗೆ ದೂರು ನೀಡಿದ್ದಾರೆ.



ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಈಕೆಯ ಬಗ್ಗೆ ಸುಳಿವು ಸಿಕ್ಕಲ್ಲಿ ದೂ.08274 257330– 9480804955 ಅನ್ನು ಸಂಪರ್ಕಿಸುವಂತೆ ಕೋರಿದ್ದಾರೆ.

ಅಕ್ರಮ ಗಾಂಜಾ ಮಾರಾಟ: ಏಳು ಮಂದಿ ಬಂಧನ

ಕುಶಾಲನಗರ,ಸೆ.2– ತಾಲೂಕಿನ ವಿವಿಧೆಡೆ ಅಕ್ರಮವಾಗಿ ಗಾಂಜಾ ಸರಬರಾಜು ಮತ್ತು ಮಾರಾಟ ಮಾಡುತ್ತಿದ್ದ ಏಳು ವ್ಯಕ್ತಿಗಳನ್ನು ಕೊಡಗು ಜಿಲ್ಲಾ ಪೊಲೀಸ್ ತಂಡ ಬಂಧಿಸಿದೆ.

ಕೊಡಗು ಜಿಲ್ಲಾ ವ್ಯಾಪ್ತಿಯ ಕುಶಾಲನಗರ ನಗರ ಪೊಲೀಸ್ ಠಾಣೆ ಸರಹದ್ದಿನಲ್ಲಿ ಡಿವೈಎಸ್ಪಿ ಆರ್.ವಿ.ಗಂಗಾಧರಪ್ಪ, ಪಿಐ ಯಶವಂತ್, ಠಾಣಾಧಿಕಾರಿಗಳಾದ ಚಂದ್ರಶೇಖರ್.ಹೆಚ್.ವಿ, ಹೆಚ್.ಟಿ. ಗೀತಾ ಹಾಗೂ ಸಿಬ್ಬಂದಿಗಳ ತಂಡ ಮಾದಾಪಟ್ಟಣ ಗ್ರಾಮದ ಬಳಿ ಮಾದಕ ವಸ್ತು ಮಾರಾಟ, ಬಳಕೆ ಮಾಡುತ್ತಿರುವ ಕುರಿತು ಖಚಿತ ಮಾಹಿತಿ ಹಿನ್ನೆಲೆಯಲ್ಲಿ ದಾಳಿ ನಡೆಸಿ ಕೇರಳ ರಾಜ್ಯ ವೈನಾಡು ಜಿಲ್ಲೆ ಮೂಲದವರಾದ ಶಾಫಿ,(25) ಅಬ್ದುಲ್ ರೆಹಮಾನ್, (33) ಅಬ್ದುಲ್ ಲತೀಫ್, (40), ವಿಷ್ಣು (23) ವರ್ಷ ಕುಂಞ ಮೊಹಮ್ಮದ್, (43) ಜಿನೇಶ್(41) ಮಹೇಶ್(20) ಎಂಬುವವರನ್ನು 76 ಗ್ರಾಂ ಗಾಂಜಾ ಮಾದಕ ವಸ್ತುವಿನೊಂದಿಗೆ ದಸ್ತಗಿರಿ ಮಾಡಿದ್ದಾರೆ. ಏಳು ಮಂದಿ ವಿರುದ್ಧ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು.

ಮಾಜಿ ಸೈನಿಕರ ಸಹಕಾರ ಸಂಘಕ್ಕೆ ಆಯ್ಕೆ



ವಿರಾಜಪೇಟೆ, ಸೆ.2– ಕೊಡಗು ಜಿಲ್ಲಾ ಮಾಜಿ ಸೈನಿಕರ ಸಹಕಾರ ಸಂಘದ ಅಧ್ಯಕ್ಷರಾಗಿ ಚಪ್ಪಂಡ ಹರೀಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಮಾಜಿ ಸೈನಿಕರ ಸಹಕಾರ ಸಂಘದ ಸಭಾಂಗಣದಲ್ಲಿ ನಡೆದ ಚುನಾವಣೆಯಲ್ಲಿ ಉಪಾಧ್ಯಕ್ಷರಾಗಿ ಚಂದ್ರಶೇಖರ್ ರಾಜ, ಕಾರ್ಯದರ್ಶಿಯಾಗಿ ಮುಗ್ಗೆರ ನಂದಾ, ಖಜಾಂಚಿಯಾಗಿ ತೋರೆರ ಪೂವಯ್ಯ, ಕಾನೂನು ಸಲಹೆಗಾರರಾಗಿ ಚೇಂದ್ರಿಮಾಡ ಕೆ ನಂಜಪ್ಪ ನಿರ್ದೇಶಕರಾಗಿ ಪಟ್ರಪಂಡ ಎಂ.ಕರುಂಬಯ್ಯ, ಹೆಚ್.ಕೆ.ಅಪ್ಪಯ್ಯ, ಕೊಂಗಂಡ ಎ.ಭೀಮಯ್ಯ, ಅಣ್ಣಳಮಾಡ ಸುಬ್ಬಯ್ಯ, ಬಾಳೆಕುಟ್ಟಿರ ಎ.ಬೋಪಯ್ಯ, ಕಬ್ಬಚ್ಚಿರ ಕೆ ಬೋಪಯ್ಯ, ಪಟ್ರಪಂಡ ಎನ್.ಚಂಗಪ್ಪ, ಎಂ.ಕೆ.ಸಲಾಂ ಅವರುಗಳು ಆಯ್ಕೆಯಾಗಿದ್ದಾರೆ.

ಮಡಿಕೇರಿ ಉಪ ನಿಬಂಧಕರ ಕಚೇರಿಯ ಕರುಣ್ ಕಾರ್ಯಪ್ಪ ಹಾಗೂ ಆಶಾ ಅವರು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದರು.

ಸೆ.11 ರಿಂದ ತಾಲೂಕು ದಸರಾ ಕ್ರೀಡಾಕೂಟ

ಮಡಿಕೇರಿ, ಸೆ.2– ಪ್ರಸಕ್ತ (2023–24) ಸಾಲಿನಲ್ಲಿ ಪುರುಷರು ಹಾಗೂ ಮಹಿಳೆಯರಿಗೆ ಜಿಲ್ಲೆಯ ಐದು ತಾಲೂಕುಗಳಲ್ಲಿ ತಾಲೂಕು ಮಟ್ಟದ ದಸರಾ ಕ್ರೀಡಾಕೂಟ ಸ್ಪರ್ಧೆಯು ಇಲಾಖಾ ವತಿಯಿಂದ ನಡೆಯಲಿದೆ. ಈ ಕ್ರೀಡಾಕೂಟಗಳಲ್ಲಿ ಜಿಲ್ಲೆಯ ಆಯಾಯ ತಾಲೂಕಿನ ಕ್ರೀಡಾಪಟುಗಳು ಭಾಗವಹಿಸಬಹುದು. ಸೆ.11 ರಂದು ಮಡಿಕೇರಿ ತಾಲೂಕು ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣ, ಸೆ.12 ಕುಶಾಲನಗರ ತಾಲೂಕು ಕೂಡಿಗೆ ಕ್ರೀಡಾಶಾಲೆ ಮೈದಾನ, ಸೆ.13 ಸೋಮವಾರಪೇಟೆ ತಾಲೂಕಿಗೆ ಕೂಡಿಗೆ ಕ್ರೀಡಾಶಾಲೆ ಮೈದಾನ, ಸೆ.14ರಂದು ತಾಲೂಕಿಗೆ ಮತ್ತು ಸೆ.15 ವಿರಾಜಪೇಟೆ ತಾಲೂಕಿಗೆ ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯ ಹಾಗೂ ಜೂನಿಯರ್ ಕಾಲೇಜ್ ಆಟದ ಮೈದಾನದಲ್ಲಿ ಕ್ರೀಡಾಕೂಟ ನಡೆಯಲಿದೆ.

ಜಿಲ್ಲೆಯ ಪುರುಷ ಹಾಗೂ ಮಹಿಳಾ ಕ್ರೀಡಾಪಟುಗಳು ಹೆಚ್ಚಿನ ಸಂಖ್ಯೆಯಲ್ಲಿ ತಾಲೂಕು ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸುವ ಮೂಲಕ ದಸರಾ ಕ್ರೀಡಾಕೂಟವನ್ನು ಯಶಸ್ವಿಗೊಳಿಸಬೇಕಾಗಿ ಕೋರಿದೆ. ಮಾಹಿತಿಗೆ ದೂ.ಸಂ.ಮಡಿಕೇರಿ ತಾಲೂಕು ಮಹಾಬಲ 9980887499 ಹಾಗೂ ಮನು 9480032712, ಸೋಮವಾರಪೇಟೆ ತಾಲೂಕು ವೆಂಕಟೇಶ್ 9844326007 ಕುಶಾಲನಗರ, ಮಂಜುನಾಥ್ 9342563014, ಪೊನ್ನಂಪೇಟೆ ಸುಬ್ಬಯ್ಯ 8197790350, ವಿರಾಜಪೇಟೆ ಗಣಪತಿ 8951287301 ಅನ್ನು ಸಂಪರ್ಕಿಸಬಹುದು.

ಆಯಾಯ ತಾಲೂಕಿನ ಕ್ರೀಡಾಪಟುಗಳು ತಮ್ಮ ತಾಲೂಕಿನ ಕ್ರೀಡಾಕೂಟದಲ್ಲಿ ಮಾತ್ರ ಭಾಗವಹಿಸಬೇಕು. ಒಂದು ತಾಲೂಕಿನಲ್ಲಿ ಭಾಗವಹಿಸಿದ ಕ್ರೀಡಾಪಟುಗಳಿಗೆ ಮತ್ತೊಂದು ತಾಲೂಕಿನಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ.

ತಮಿಳುನಾಡಿಗೆ ನೀರು ಬಿಡುಗಡೆ ಖಂಡಿಸಿ ಪ್ರತಿಭಟನೆ



ಚಾಮರಾಜನಗರ, ಸೆ.2– ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ ಕರ್ನಾಟಕ ಸೇನಾಪಡೆ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರಿ ಉದ್ಯಾನವನದ ಮುಂಭಾಗದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾನಿರತರು ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಭಾವಚಿತ್ರ ಹಿಡಿದು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ರಸ್ತೆತಡೆ ನಡೆಸಿ, ತಮಿಳುನಾಡು, ಕರ್ನಾಟಕ ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಘೋಷಣೆ ಕೂಗಿ ಸ್ಟಾಲಿನ್ ಭಾವಚಿತ್ರ ಹರಿದು ಅಕ್ರೋಶ ವ್ಯಕ್ತಪಡಿಸಿದರು.

ಪೊಲೀಸರು, ಚಳವಳಿಗಾರರ ನಡುವೆ ಮಾತಿನ ಚಕಮಕಿ: ಪ್ರತಿಭಟನಾನಿರತರು ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಭಾವಚಿತ್ರ ಹರಿದು ಪ್ರತಿಭಟಿಸುತ್ತಿದ್ದಂತೆ ಪೊಲೀಸರು ಮುಖ್ಯಮಂತ್ರಿಗಳ ಭಾವಚಿತ್ರ ಹರಿಯಬೇಡಿ, ಸುಡಬೇಡಿ ಎಂದು ತಡೆಯಲು ಹೋದಾಗ ಪೊಲೀಸರು, ಚಳವಳಿಗಾರ ನಡುವೆ ಮಾತಿನ ಚಕಮಕಿ ನಡೆಯಿತು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ತಮಿಳುನಾಡಿಗೆ ಕಾವೇರಿ ನೀರು ಬಿಟ್ಟಿರುವ ಕ್ರಮವನ್ನು ವಿರೋಧಿಸಿ ನಗರದಲ್ಲಿ ಕನ್ನಡಪರ ಸಂಘಟನೆಗಳು ನಿರಂತರ ಹೋರಾಟ ಮಾಡುತ್ತಿವೆ ಎಂದರು.

ತಮಿಳುನಾಡಿಗೆ ಕಾವೇರಿ ನೀರು ಬಿಡುವ ವಿಚಾರದಲ್ಲಿ ಪದೇಪದೆ ಕರ್ನಾಟಕಕ್ಕೆ ತೊಂದರೆ ಉಂಟು ಮಾಡುತ್ತಿರುವ ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಅವರ ಭಾವಚಿತ್ರವನ್ನು ಹರಿದು ಹಾಕುವ ಮೂಲಕ ಪ್ರತಿಭಟಿಸಲಾಗಿದೆ. ತಮಿಳುನಾಡು ಮುಖ್ಯಮಂತ್ರಿ ರಾಜಕೀಯ ಅಸ್ತಿತ್ವಕ್ಕಾಗಿ ಪದೇಪದೆ ಕಾವೇರಿ ನೀರಿನ ವಿಚಾರದಲ್ಲಿ ಖ್ಯಾತೆ ತೆಗೆಯುತ್ತಿದ್ದಾರೆ. 5 ಟಿಎಂಸಿ ನೀರು ಸಾಲುವುದಿಲ್ಲ. ಪ್ರತಿದಿನ 25 ಸಾವಿರ ಕ್ಯುಸೆಕ್ ನೀರು ಬಿಡಬೇಕೆಂದು ಸುಪ್ರೀಂಕೋರ್ಟ್‌ಗೆ ಹೋಗುವುದಾಗಿ ಹೇಳಿದ್ದಾರೆ. ದೇಶದ ಒಕ್ಕೂಟದ ವ್ಯವಸ್ಥೆಯಲ್ಲಿ ಕಿಂಚಿತ್ತು ಗೌರವ ಇಲ್ಲ. ನೆರೆಯ ರಾಜ್ಯಗಳನ್ನು ಕಂಡರೆ ನಿಮಗೆ ಮೊದಲಿನಿಂದಲ್ಲೂ ಆಗುವುದಿಲ್ಲ ನಿಮ್ಮ ರಾಜಕೀಯಕ್ಕಾಗಿ ಕಾವೇರಿ ನೀರಿನ ವಿಚಾರವನ್ನೇ ಬಂಡವಾಳ ಮಾಡಿಕೊಂಡಿದ್ದೀರಿ ಎಂದು ಪ್ರಶ್ನಿಸಿದರು.

ಪ್ರತಿಭಟನೆಯಲ್ಲಿ ಕನ್ನಡಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಶಾ.ಮುರಳಿ, ನಿಜಧ್ವನಿಗೋವಿಂದರಾಜು, ಚಾ.ವೆಂ. ರಾಜಗೋಪಾಲ್, ಗು.ಪುರುಷೋತ್ತಮ, ಚಾ. ರಾ.ಕುಮಾರ್, ಚಾ.ಹ.ರಾಮು, ಸಿದ್ದರಾಜು, ಸಾಗರ್‌ರಾವತ್, ತಾಂಡವಮೂರ್ತಿ ಇತರರು ಭಾಗವಹಿಸಿದ್ದರು.

ಆಪರೇಷನ್ ನಂತರ ಬಾಲಕ ಸಾವು ಪ್ರಕರಣ

ವೈದ್ಯರ ನಿರ್ಲಕ್ಷ್ಯದಿಂದ ಬಾಲಕ ಸಾವು ಎಂದು ಆರೋಪಿಸಿ ಕೊಳ್ಳೇಗಾಲ ಖಾಸಗಿ ಆಸ್ಪತ್ರೆ ಮುಂದೆ ಪ್ರತಿಭಟನೆ

ಕೊಳ್ಳೇಗಾಲ, ಸೆ.2– ಹೊಟ್ಟೆನೋವಿನಿಂದ ಬಳಲುತ್ತಿದ್ದ ಬಾಲಕನೋರ್ವ ಶಸ್ತ್ರ ಚಿಕಿತ್ಸೆಯ ನಂತರ ಸಾವನ್ನಪ್ಪಿದ್ದು, ವೈದ್ಯರ ನಿರ್ಲಕ್ಷ್ಯದಿಂದ ತಮ್ಮ ಹುಡುಗ ಸಾವನ್ನಪ್ಪಿದ್ದಾನೆ ಎಂದು ಆರೋಪಿಸಿ ಕುಟುಂಬಸ್ಥರು ಮತ್ತು ಗ್ರಾಮಸ್ಥರು ಆಸ್ಪತ್ರೆಯ ಕಿಟಕಿ ಗಾಜುಗಳು, ಪೀಠೋಪಕರಣಗಳನ್ನು ಧ್ವಂಸಗೊಳಿಸಿ, ಆಕ್ರೋಶ ವ್ಯಕ್ತಪಡಿಸಿದ ಘಟನೆ ಪಟ್ಟಣ ಜನನಿ ಆಸ್ಪತ್ರೆ ಮುಂದೆ ಸಂಭವಿಸಿದೆ.

ತಾಲೂಕಿನ ಹಂಪಾಪುರ ಗ್ರಾಮದ ಗೌರಮ್ಮ ಎಂಬುವವರ ಮಗ ವಿಜಯ್ (10) ಮೃತಪಟ್ಟ ಬಾಲಕ.

ಘಟನೆ ವಿವರ: ವಿಜಯ್‌ಗೆ ಆಗಾಗ ಹೊಟ್ಟೆನೋವು ಕಾಣಿಸಿಕೊಳ್ಳುತ್ತಿತ್ತು. ಹಾಗಾಗಿ, ಜನನಿ ಆಸ್ಪತ್ರೆಗೆ ಕರೆದುಕೊಂಡು ಬಂದು ವೈದ್ಯ ಡಾ.ಕಿಶೋರ್ ಬಳಿ ತೋರಿಸಿದ್ದರು. ಪರೀಕ್ಷೆ ಮಾಡಿ ಬಾಲಕನಿಗೆ ಅಪೆಂಡಿಸೈಟಿಸ್ ಸಮಸ್ಯೆ ಇರುವುದಾಗಿ ಹೇಳಿದ್ದರು. ಕೂಡಲೇ ಶಸ್ತ್ರ ಚಿಕಿತ್ಸೆ ಮಾಡಬೇಕು ಎಂದು ಸಲಹೆ ನೀಡಿದ್ದರು. ಶುಕ್ರವಾರ ಬಾಲಕನನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಬೆಳಗ್ಗೆ ವೈದ್ಯರು ಶಸ್ತ್ರಚಿಕಿತ್ಸೆ ನಡೆಸಿದ್ದರು. ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದ್ದು, ಎರಡು ಗಂಟೆಗಳಲ್ಲಿ ಪ್ರಜ್ಞೆ ಬರಲಿದೆ ಎಂದು ಹೇಳಿ ವಾರ್ಡ್‌ಗೆ ಸ್ಥಳಾಂತರಿಸಿದ್ದರು.



ನಂತರ ಬಾಲಕನಿಗೆ ಇದ್ದಕ್ಕಿದ್ದಂತೆ ಉಸಿರಾಟದ ತೊಂದರೆ ಕಾಣಿಸಿಕೊಂಡಿದೆ. ಈ ಸಂದರ್ಭದಲ್ಲಿ ಆಸ್ಪತ್ರೆ ಸಿಬ್ಬಂದಿ ಪೋಷಕರಿಗೆ ಮಾಹಿತಿ ನೀಡಿದ್ದರು. ಸ್ವಲ್ಪ ಹೊತ್ತಿನಲ್ಲೇ ಬಾಲಕ ಕೊನೆಯುಸಿರೆಳೆದಿದ್ದ.

ವೈದ್ಯರ ನಿರ್ಲಕ್ಷ್ಯದಿಂದ ವಿಜಯ್ ಮೃತಪಟ್ಟಿದ್ದಾನೆ ಎಂದು ಆರೋಪಿಸಿದ ಕುಟುಂಬದ ಸದಸ್ಯರು, ವೈದ್ಯ ಕಿಶೋರ್ ಹಾಗೂ ಆಸ್ಪತ್ರೆಯ ಸಿಬ್ಬಂದಿಗಳೇ ಕಾರಣ ಎಂದು ಆಕ್ರೋಶ ವ್ಯಕ್ತಪಡಿಸಿದರು. ಇದರಿಂದ ಆಸ್ಪತ್ರೆ ಬಳಿ ಉದ್ರಿಕ್ತ ಪರಿಸ್ಥಿತಿ ನಿರ್ಮಾಣಗೊಂಡಿತ್ತು. ವಿಜಯ್ ದೊಡ್ಡಪ್ಪನ ಮಗ ವಿಜಯ್ ಕುಮಾರ್ ಠಾಣೆಗೆ ಈ ಸಂಬಂಧ ದೂರು ನೀಡಿದರು.

ವಿಷಯ ತಿಳಿಯುತ್ತಿದ್ದಂತೆಯೇ ಆಸ್ಪತ್ರೆ ಮುಂದೆ ಗ್ರಾಮಸ್ಥರು, ಕುಟುಂಬದ ಸದಸ್ಯರು ಹಾಗೂ ಸಂಘಟನೆಗಳ ಮುಖಂಡರು ಜಮಾಯಿಸಿ, ಪ್ರತಿಭಟನೆ ನಡೆಸಿದರು. ಆಸ್ಪತ್ರೆಯ ವಿರುದ್ಧ ಕ್ರಮಕ್ಕೆ ಪಟ್ಟು ಹಿಡಿದರು.

ತನಿಖೆಯ ಭರವಸೆ ನೀಡಿದ ಎಸ್‌ಪಿ: ವಿಷಯ ತಿಳಿದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ಅವರು ಸ್ಥಳಕ್ಕೆ ಭೇಟಿ ನೀಡಿ ಪ್ರತಿಭಟನಕಾರರನ್ನು ಮನವೊಲಿಸಲು ಯತ್ನಿಸಿದರು. 'ಘಟನೆಯ ಬಗ್ಗೆ ಇಲಾಖೆಯಿಂದ ತನಿಖೆ ನಡೆಸಲಾಗುವುದು. ತಪ್ಪಿತಸ್ಥರು ಯಾರೇ ಆದರೂ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಾಗುವುದು. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿಕೊಡಿ' ಎಂದರು.

ಕುಟುಂಬಸ್ಥರು, ಗ್ರಾಮಸ್ಥರ ಆಕ್ರೋಶ, ಉದ್ವಿಗ್ನ ಪರಿಸ್ಥಿತಿ

ಸ್ಥಳಕ್ಕೆ ಬಂದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ (ಡಿಎಚ್ಒ) ಡಾ.ಕೆ.ಎಂ.ವಿಶ್ವೇಶ್ವರಯ್ಯ, 'ಜನನಿ ಆಸ್ಪತ್ರೆಯ ವೈದ್ಯರು ಮೃತ ವಿಜಯ್‌ಗೆ ಚಿಕಿತ್ಸೆ ನೀಡಿರುವ ದಾಖಲೆಗಳನ್ನು ವಶಪಡಿಸಿಕೊಂಡು ರಾಜ್ಯ ಮೆಡಿಕಲ್ ಸಮಿತಿಗೆ ಕಳುಹಿಸಿ ಕೊಡಲಾಗುವುದು' ಎಂದರು. ಆ ಬಳಿಕ ಗ್ರಾಮಸ್ಥರು ಪ್ರತಿಭಟನೆ ಕೈಬಿಟ್ಟರು. ಉಪವಿಭಾಗಾಧಿಕಾರಿ ಮಹೇಶ್, ಡಿ.ವೈ.ಎಸ್ಪಿ ಸೋಮೇಗೌಡ, ಸಿಪಿಐ ಕೃಷ್ಣಪ್ಪ, ಪಿಎಸ್‌ಐ ಮಹೇಶ್ ಇತರರು ಇದ್ದರು.

ಸೇವೆ ಪ್ರಾಮಾಣಿಕವಾಗಿದ್ದರೆ ಜನರ ಪ್ರೀತಿ ಸಿಗುತ್ತದೆ

ವರ್ಗಾವಣೆಗೊಂಡ ಡಿವೈಎಸ್ಪಿ ಪ್ರಿಯದರ್ಶಿನಿ ಈಶ್ವರ ಸಾಣಿಕೊಪ್ಪರಿಗೆ ಆತ್ಮೀಯ ಬೀಳ್ಕೊಡುಗೆ

ಚಾಮರಾಜನಗರ, ಸೆ2– ನಾವು ಮಾಡುವ ಕರ್ತವ್ಯ ಪ್ರಾಮಾಣಿಕವಾಗಿ, ಕಾನೂನು ಬದ್ಧವಾಗಿದ್ದರೆ ಜನರ ಪ್ರೀತಿ ತಾನಾಗಿಯೇ ಸಿಗುತ್ತದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ಹೇಳಿದರು.

ನಗರದ ಬಿ.ಆರ್.ಜೋಡಿ ರಸ್ತೆಯ ಅನುಭವ ಮಂಟಪದಲ್ಲಿ ಜಿಲ್ಲಾ ಪೊಲೀಸ್, ಚಾಮರಾಜನಗರ ಉಪ ವಿಭಾಗದಿಂದ ವರ್ಗಾವಣೆಗೊಂಡಿರುವ ಡಿವೈಎಸ್‌ಪಿ ಪ್ರಿಯದರ್ಶಿನಿ ಈಶ್ವರ ಸಾಣೆಕೊಪ್ಪ ಅವರಿಗೆ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದರು.



ನಾವು ಕರ್ತವ್ಯವನ್ನು ಪ್ರಾಮಾಣಿಕವಾಗಿ ಮಾಡಿದರೆ ಜನರು ಪ್ರೀತಿಸುತ್ತಾರೆ ಎಂಬುದಕ್ಕೆ ಪ್ರಿಯದರ್ಶಿನಿ ಈಶ್ವರ ಸಾಣೆಕೊಪ್ಪರ ಬೀಳ್ಕೊಡುಗೆ ಸಮಾರಂಭದಲ್ಲಿ ಸೇರಿರುವ ಜನರೇ ಸಾಕ್ಷಿ ಎಂದರು.

ಪ್ರಿಯದರ್ಶಿನಿ ಈಶ್ವರ ಸಾಣೆಕೊಪ್ಪ ಅವರು ಚಾಮರಾಜನಗರ ಉಪವಿಭಾಗದಲ್ಲಿ ಡಿವೈಎಸ್ಪಿಯಾಗಿ ಉತ್ತಮವಾಗಿ ಕೆಲಸ ನಿರ್ವಹಿಸಿದ್ದಾರೆ, ವಹಿಸಿದ ಜವಾಬ್ದಾರಿಗಳನ್ನು ಯಾವುದೇ ಚ್ಯುತಿ ಬರದಂತೆ ನಿರ್ವಹಿಸಿ, ಇಲಾಖೆಗೆ ಗೌರವ ತಂದಿದ್ದಾರೆ, ಈಗ ಬಡ್ತಿ ಹೊಂದಿ ಬೆಂಗಳೂರಿನಲ್ಲಿ ಅಡಿಷನಲ್ ಎಸ್ಪಿಯಾಗಿ ಕರ್ತವ್ಯಕ್ಕೆ ಹಾಜರಾಗಿದ್ದಾರೆ, ಅವರಿಗೆ ಇನ್ನಷ್ಟು ಯಶಸ್ಸು ದೊರೆಯಲಿ ಎಂದು ಶುಭ ಹಾರೈಸಿದರು.

ಅಡಿಷನಲ್ ಎಸ್ಪಿ ಉದೇಶ್ ಮಾತನಾಡಿ, ಪ್ರಿಯದರ್ಶಿನಿ ಈಶ್ವರ ಸಾಣೆಕೊಪ್ಪ ಅವರು ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಎಂತಹ ಸಂದರ್ಭ ಬಂದರೂ ಎಲ್ಲರ ಜೊತೆ ಚರ್ಚಿಸಿ ಕರ್ತವ್ಯ ನಿರ್ವಹಿಸುತ್ತಿದ್ದರು. ಮುಂದೆಯೂ ಅವರಿಗೆ ಯಶಸ್ಸು ದೊರೆಯಲಿ ಎಂದರು.

ಹೊಸ ಅನುಭವ ತಂದುಕೊಟ್ಟಿತು: ಸನ್ಮಾನ ಸ್ವೀಕರಿಸಿ ಮಾತನಾಡಿದ ಪ್ರಿಯದರ್ಶಿನಿ ಈಶ್ವರ ಸಾಣೆಕೊಪ್ಪ, ಚಾಮರಾಜನಗರದ ಉಪವಿಭಾಗದಲ್ಲಿ ಮೂರು ವರ್ಷ ಡಿವೈಎಸ್ಪಿಯಾಗಿ ನಿರ್ವಹಿಸಿದ ಕರ್ತವ್ಯ ನನಗೆ ಹೊಸ ಅನುಭವವನ್ನೇ ತಂದು ಕೊಟ್ಟಿತು ಎಂದರು.

ಇಲ್ಲಿನ ಜನರ ಪ್ರೀತಿ, ಸಹಕಾರ, ರೈತ ಸಂಘಟನೆಗಳಿಂದ ಹಿಡಿದು ವಿವಿಧ ಸಂಘ ಸಂಸ್ಥೆಗಳು, ಕೊಟ್ಟ ಸಹಕಾರದಿಂದಾಗಿ ನಾನು ಜನಸ್ನೇಹಿ ಪೊಲೀಸ್ ಆಗಿ ಕರ್ತವ್ಯ ನಿರ್ವಹಿಸಲು ಸಾಧ್ಯವಾಯಿತು, ನಾನು ಮೂರು ಮಂದಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕೈಕೆಳಗೆ ಕೆಲಸ ಮಾಡಿದೆ, ಒಬ್ಬರಿಗಿಂತ ಒಬ್ಬರು ಉತ್ತಮರು. ಅದರಲ್ಲೂ ಪದ್ಮಿನಿ ಸಾಹು ಅವರ ಮಾರ್ಗದರ್ಶನ ಅಚ್ಚುಮೆಚ್ಚಾಗಿತ್ತು ಎಂದರು.

ನಮ್ಮ ಪೊಲೀಸ್ ಇಲಾಖೆಯ ಸಿಬ್ಬಂದಿಯಂತೂ ಎಂತಹ ಪರಿಸ್ಥಿತಿಯಲ್ಲೂ ಉತ್ತಮ ಸಹಕಾರ ನೀಡಿದರು. ಜಿಲ್ಲೆಯ ಜನರು ಬಹಳ ಒಳ್ಳೆಯವರು, ಇಲ್ಲಿ ಎಲ್ಲರೂ ಐಕ್ಯತೆಯಿಂದ ಇದ್ದಾರೆ. ಇಲ್ಲಿನ ಕಲೆ, ಸಂಸ್ಕೃತಿ, ಜಾನಪದ, ಪ್ರೀತಿಯನ್ನು ನಾನು ಮರೆಯಲು ಸಾಧ್ಯವಿಲ್ಲ, ಇಲ್ಲಿನ ಜನರ ಋಣ ನನ್ನ ಮೇಲೆ ಇದೆ. ನಾನು ಇಷ್ಟರ ಮಟ್ಟಿಗೆ ಕರ್ತವ್ಯ ಮಾಡಲು ನನ್ನ ಪತಿ ಸಂತೋಷ್ ಅವರ ಸಹಕಾರವೇ ಕಾರಣ ಎಂದರು,

ಕಾರ್ಯಕ್ರಮದಲ್ಲಿ ರೈತ ಸಂಘಟನೆಗಳಿಂದ ಹಿಡಿದು ವಿವಿಧ ಸಂಘ ಸಂಸ್ಥೆಗಳು, ಮುಖಂಡರು, ಪೊಲೀಸ್ ಇಲಾಖೆ ಸಿಬ್ಬಂದಿ, ಮಹಿಳಾ ಸಿಬ್ಬಂದಿ ಪ್ರಿಯದರ್ಶಿನಿ ಈಶ್ವರ ಸಾಣೆಕೊಪ್ಪರನ್ನು, ಸನ್ಮಾನಿಸಿ ಗೌರವಿಸಿ, ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಡಿವೈಎಸ್ಪಿ ಅನ್ಸರ್ ಆಲಿ, ವಿ.ಲಕ್ಷ್ಮಯ್ಯ, ಇನ್ಸ್‌ಪೆಕ್ಟರ್‌ಗಳಾದ ಶ್ರೀಕಾಂತ್, ಚಿಕ್ಕರಾಜಶೆಟ್ಟಿ, ಪರಶಿವ ಮೂರ್ತಿ, ವಿವಿಧ ಠಾಣೆಯ ಸಿಬ್ಬಂದಿ ವರ್ಗ ಇದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಸೆ.2– ಬದನಗುಪ್ಪೆ ಉಪ ಕೇಂದ್ರದಿಂದ ಹೊರಹೊಮ್ಮುವ ಕೆಐಎಡಿಬಿ, ಎಂಜಿನಿಯರಿಂಗ್ ಕಾಲೇಜು, ಕೆ.ಬಸವನಪುರ ಐಪಿ ಮಾರ್ಗಗಳ ತುರ್ತು ನಿರ್ವಹಣೆ ಕಾರ್ಯ ನಿಮಿತ್ತ ಸೆ.3 ರಂದು ಬೆಳಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ಕೆಐಎಡಿಬಿ ಇಂಡಸ್ಟ್ರಿಯಲ್ ಏರಿಯಾ ಮತ್ತು ಸುತ್ತಮುತ್ತಲ ಪ್ರದೇಶ, ಎಂಜಿನಿಯರಿಂಗ್ ಕಾಲೇಜು, ಬಸವರಾಜೇಂದ್ರ ಆಸ್ಪತ್ರೆ ಭಾಗದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೆ.5, ನಗರದಲ್ಲಿ ಶಿಕ್ಷಕರ ದಿನಾಚರಣೆ ಸಮಾರಂಭ

ಚಾಮರಾಜನಗರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಜಿಲ್ಲಾ ಮತ್ತು ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಹಾಗೂ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಸೆ.5ರಂದು ಬೆಳಗ್ಗೆ 10.30 ಗಂಟೆಗೆ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದೆ.

ಗುಂಡ್ಲುಪೇಟೆಯಲ್ಲಿ ರಾಯರ ಆರಾಧನಾ ಮಹೋತ್ಸವ



ಗುಂಡ್ಲುಪೇಟೆ, ಸೆ.2– ಪಟ್ಟಣದ ಶ್ರೀ ರಾಮದೇವರಗುಡ್ಡದ ತಪ್ಪಲಿನಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳವರ ಮೃತ್ತಿಕಾ ಬೃಂದಾವನದಲ್ಲಿ ರಾಯರ 352ನೇ ಆರಾಧನಾ ಮಹೋತ್ಸವದ ಅಂಗವಾಗಿ ವಿಶೇಷ ಪೂಜೆ ಮಾಡಲಾಯಿತು.

ಈ ಹಿನ್ನೆಲೆಯಲ್ಲಿ ದೇವಾಲಯದಲ್ಲಿ ಫಲಪುಷ್ಪ, ತಳಿರು ತೋರಣ, ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ರಾಯರ ಬೃಂದಾವನಕ್ಕೆ ವಿವಿಧ ಹೂವುಗಳಿಂದ ಅಲಂಕಾರ ಮಾಡಿ ವಿಶೇಷ ಪೂಜಾ ಕೈಂಕರ್ಯಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸಲಾಯಿತು. ವಿವಿಧ ಬಡಾವಣೆಯಿಂದ ಆಗಮಿಸಿದ್ದ ಭಕ್ತರಿಗೆ ಪ್ರಸಾದ ವಿತರಣೆಯನ್ನು ಮಾಡಲಾಯಿತು.

ಈ ವೇಳೆ ಸಮಿತಿಯ ಅಧ್ಯಕ್ಷೆ ರಾಜೇಶ್ವರಿ ಚಂದ್ರಶೇಖರ್ ಮತ್ತು ಸಮಿತಿಯ ಪದಾಧಿಕಾರಿಗಳು ಹಾಗೂ ಭಕ್ತರು ಭಾಗವಹಿಸಿದ್ದರು.

ಒಂದನೇ ಪುಟದಿಂದ

ಯಶಸ್ವಿ ಉಡಾವಣೆ

ತಂತ್ರಗಳಿಗೆ ಒಳಗಾಗುತ್ತದೆ. ತರುವಾಯ, ಬಾಹ್ಯಾಕಾಶ ನೌಕೆಯು ಟ್ರಾನ್ಸ್-ಲಗ್ರಾಂಜಿಯನ್ 1 ಅಳವಡಿಕೆಯ ಕುಶಲತೆಗೆ ಒಳಗಾಗುತ್ತದೆ, ಅದರ ಗಮ್ಯಸ್ಥಾನದ ಸುತ್ತಲಿನ ಗಮ್ಯಸ್ಥಾನಕ್ಕೆ ಅದರ 110-ದಿನಗಳ ಪಥದ ಆರಂಭವನ್ನು ಗುರುತಿಸುತ್ತದೆ. ಆದಿತ್ಯ ಎಲ್1 ಅನ್ನು ತಲುಪಿದ ನಂತರ, ಮತ್ತೊಂದು ಕುಶಲತೆಯು ಆದಿತ್ಯ-L1 ಅನ್ನು ಬಿಂದುವಿನ ಸುತ್ತಲಿನ ಕಕ್ಷೆಗೆ ಬಂಧಿಸುತ್ತದೆ, ಇದು ಭೂಮಿ ಮತ್ತು ಸೂರ್ಯನ ನಡುವಿನ ಸಮತೋಲಿತ ಗುರುತ್ವಾಕರ್ಷಣೆಯ ಸ್ಥಳವಾಗಿದೆ.

ಬಾಹ್ಯಾಕಾಶ ನೌಕೆಯು ತನ್ನ ಐದು ವರ್ಷಗಳ ಸಂಪೂರ್ಣ ಕಾರ್ಯಾಚರಣೆಯ ಜೀವನವನ್ನು ಭೂಮಿ ಮತ್ತು ಸೂರ್ಯನನ್ನು ಸೇರುವ ರೇಖೆಗೆ ಸರಿಸುಮಾರು ಲಂಬವಾಗಿರುವ ಸಮತಲದಲ್ಲಿ ಅನಿಯಮಿತ ಆಕಾರದ ಕಕ್ಷೆಯಲ್ಲಿ ಎಲ್ 1 ಸುತ್ತ ಸುತ್ತುತ್ತದೆ ಎಂದು ಇಸ್ರೋ ಹೇಳಿದೆ. ಎಲ್1 ಲಾಗ್ರೇಂಜ್ ಪಾಯಿಂಟ್‌ನಲ್ಲಿನ ಕಾರ್ಯತಂತ್ರದ ನಿಯೋಜನೆಯು ಬಾಹ್ಯಾಕಾಶ ನೌಕೆಯು ಸೂರ್ಯನ ನಿರಂತರ, ಅಡೆತಡೆಯಿಲ್ಲದ ನೋಟವನ್ನು ನಿರ್ವಹಿಸುತ್ತದೆ. ಈ ಸ್ಥಳವು ಸೌರ ವಿಕಿರಣ ಮತ್ತು ಕಾಂತೀಯ ಬಿರುಗಾಳಿಗಳನ್ನು ಭೂಮಿಯ ಕಾಂತಕ್ಷೇತ್ರ ಮತ್ತು ವಾತಾವರಣದಿಂದ ಪ್ರಭಾವಿಸುವ ಮೊದಲು ಉಪಗ್ರಹವನ್ನು ಪ್ರವೇಶಿಸಲು ಅನುವು ಮಾಡಿಕೊಡುತ್ತದೆ.

ಹೆಚ್ಚುವರಿಯಾಗಿ, ಎಲ್1 ಪಾಯಿಂಟ್‌ನ ಗುರುತ್ವಾಕರ್ಷಣೆಯ ಸ್ಥಿರತೆಯು ಆಗಾಗ್ಗೆ ಕಕ್ಷೆಯ ನಿರ್ವಹಣೆಯ ಪ್ರಯತ್ನಗಳ ಅಗತ್ಯವನ್ನು ಕಡಿಮೆ ಮಾಡುತ್ತದೆ, ಬಾಹ್ಯಾಕಾಶ ನೌಕೆಯ ಕಾರ್ಯಾಚರಣೆಯ ಸಾಮರ್ಥ್ಯವನ್ನು ಉತ್ತಮಗೊಳಿಸುತ್ತದೆ. ಆದಿತ್ಯ-ಐ1 ಭೂಮಿಯಿಂದ ಸರಿಸುಮಾರು 1.5 ಮಿಲಿಯನ್ ಕಿಮೀ ದೂರದಲ್ಲಿ ಉಳಿಯುತ್ತದೆ, ಸೂರ್ಯನ ಕಡೆಗೆ ನಿರ್ದೇಶಿಸಲ್ಪಡುತ್ತದೆ. ಇದು ಭೂಮಿ-ಸೂರ್ಯನ ದೂರದ ಶೇಕಡಾ 1 ರಷ್ಟಿದೆ. ಪಿಎಸ್‌ಎಲ್‌ವಿ ಸಿ 57 ಉಡಾವಣಾ ವಾಹನದ 59ನೇ ಹಾರಾಟವಾಗಿದೆ, ಇದು ಪಿಎಸ್‌ಎಲ್‌ವಿ-ಎಕ್ಸ್‌ಎಲ್ ಕಾನ್ಫಿಗರೇಶನ್ ಬಳಸುವ 25ನೇ ಮಿಷನ್ ಆಗಿದೆ ಎಂದು ಇಸ್ರೋ ಹೇಳಿದೆ. ಭೂಮಿಯ ವಾತಾವರಣ ಮತ್ತು ಅದರ ಕಾಂತೀಯ ಕ್ಷೇತ್ರವು ರಕ್ಷಣಾತ್ಮಕ ಗುರಾಣಿಯಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಹಾನಿಕಾರಕ ತರಂಗಾಂತರದ ವಿಕಿರಣಗಳನ್ನು ನಿರ್ಬಂಧಿಸುತ್ತದೆ. ಅಂತಹ ವಿಕಿರಣವನ್ನು ಪತ್ತೆಹಚ್ಚಲು, ಸೌರ ಅಧ್ಯಯನಗಳನ್ನು ಬಾಹ್ಯಾಕಾಶದಿಂದ ನಡೆಸಲಾಗುತ್ತದೆ.

ಪೇಲೋಡ್: ಆದಿತ್ಯ-ಐ1 ಮಿಷನ್ ಅಧ್ಯಯನವನ್ನು ಕೈಗೊಳ್ಳಲು ಏಳು ವೈಜ್ಞಾನಿಕ ಪೇಲೋಡ್‌ಗಳನ್ನು ಒಯ್ಯುತ್ತದೆ. ಸೌರ ಕರೋನಾ ಮತ್ತು ಕರೋನಲ್ ಮಾಸ್ ಎಜೆಕ್ಷನ್‌ಗಳ (CME) ಡೈನಾಮಿಕ್ಸ್ ಅನ್ನು ಅಧ್ಯಯನ ಮಾಡುವ ವಿಸಿಬಲ್ ಎಮಿಷನ್ ಲೈನ್ ಕರೋನಾಗ್ರಾಫ್, ಉದ್ದೇಶಿತ ಕಕ್ಷೆಯನ್ನು ತಲುಪುವ ವಿಶ್ಲೇಷಣೆಗಾಗಿ ದಿನಕ್ಕೆ 1,440 ಚಿತ್ರಗಳನ್ನು ನೆಲದ ನಿಲ್ದಾಣಕ್ಕೆ ಕಳುಹಿಸುತ್ತದೆ.

ಸೌರ ನೇರಳಾತೀತ ಇಮೇಜಿಂಗ್ ಟೆಲಿಸ್ಕೋಪ್ ಪೇಲೋಡ್ ಸೌರ ದ್ಯುತಿಗೋಳ ಮತ್ತು ಕ್ರೋಮೋಸ್ಫಿಯರ್ ಅನ್ನು ನೇರಳಾತೀತ ಸಮೀಪದಲ್ಲಿ ಚಿತ್ರಿಸುತ್ತದೆ. ಸೌರ ವಿಕಿರಣ ವ್ಯತ್ಯಾಸಗಳನ್ನು ಸಹ ಅಳೆಯುತ್ತದೆ. ಆದಿತ್ಯ ಸೌರ ಮಾರುತ ಕಣ ಪ್ರಯೋಗ (ASPEX) ಮತ್ತು ಆದಿತ್ಯ (PAPA) ಪೇಲೋಡ್‌ಗಳಿಗಾಗಿ ಪ್ಲಾಸ್ಮಾ ವಿಶ್ಲೇಷಕ ಪ್ಯಾಕೇಜ್ ಸೌರ ಮಾರುತ ಮತ್ತು ಶಕ್ತಿಯುತ ಅಯಾನುಗಳು ಮತ್ತು ಶಕ್ತಿಯ ವಿತರಣೆಯನ್ನು ಅಧ್ಯಯನ ಮಾಡುತ್ತದೆ. ಸೌರ ಕಡಿಮೆ ಶಕ್ತಿಯ ಎಕ್ಸ್-ರೇ ಸ್ಪೆಕ್ಟ್ರೋಮೀಟರ್ ಮತ್ತು ಅತಿ ಶಕ್ತಿಯುತ ಐ1 ಆರ್ಬಿಟಿಂಗ್ ಎಕ್ಸ್-ರೇ ಸ್ಪೆಕ್ಟ್ರೋಮೀಟರ್ (HEL1OS) ಸೂರ್ಯನಿಂದ ಎಕ್ಸ್-ರೇ ಜ್ವಾಲೆಗಳನ್ನು ವ್ಯಾಪಕವಾದ ಎಕ್ಸ್-ರೇ ಶಕ್ತಿಯ ವ್ಯಾಪ್ತಿಯಲ್ಲಿ ಅಧ್ಯಯನ ಮಾಡುತ್ತದೆ. ಮ್ಯಾಗ್ನೆಟೋಮೀಟರ್ ಪೇಲೋಡ್ ಐ1 ಪಾಯಿಂಟ್‌ನಲ್ಲಿ ಅಂತರಗ್ರಹ ಕಾಂತೀಯ ಕ್ಷೇತ್ರಗಳನ್ನು ಅಳೆಯುವ ಸಾಮರ್ಥ್ಯವನ್ನು ಹೊಂದಿದೆ. ಇಸ್ರೋದ ವಿವಿಧ ಕೇಂದ್ರಗಳ ನಿಕಟ ಸಹಯೋಗದೊಂದಿಗೆ ಆದಿತ್ಯ-ಐ1 ನ ವಿಜ್ಞಾನ ಪೇಲೋಡ್‌ಗಳನ್ನು ಸ್ಥಳೀಯವಾಗಿ ಅಭಿವೃದ್ಧಿಪಡಿಸಲಾಗಿದೆ.

> ಸೂರ್ಯನ ಅಧ್ಯಯನ ನಡೆಸುವ ಆದಿತ್ಯ ಎಲ್-1 ಉಪಗ್ರಹದ ಯಶಸ್ವಿ ಉಡಾವಣೆಗೈದಿರುವ ನಮ್ಮ ಹೆಮ್ಮೆಯ @isro ವಿಜ್ಞಾನಿಗಳಿಗೆ ತುಂಬುಹೃದಯದ ಅಭಿನಂದನೆಗಳು. ಇದರೊಂದಿಗೆ ಸೂರ್ಯನ ಅಧ್ಯಯನ ನಡೆಸುವ ಇಸ್ರೋ ವಿಜ್ಞಾನಿಗಳ ಪ್ರಯತ್ನಕ್ಕೆ ಆರಂಭಿಕ ಯಶಸ್ಸು ದೊರೆತಿದ್ದು, ಈ ಯೋಜನೆಯ ಮುಂದಿನ ಎಲ್ಲಾ ಹಂತಗಳು ಯಶಸ್ವಿಯಾಗಲಿ ಎಂದು ಶುಭ ಹಾರೈಸುತ್ತೇನೆ.
> –ಮುಖ್ಯಮಂತ್ರಿ ಸಿದ್ದರಾಮಯ್ಯ

ಏನು ತಪ್ಪು ಮಾಡಿದ್ದೇನೆ ಹೇಳಿ ಸರ್...

ಕೊಂಡೊಯ್ಯುತ್ತಿರುವುದು ತಪ್ಪಾ? ಮೈಸೂರಿನಿಂದ ನಂಜನಗೂಡುವರೆಗೆ 23 ಕಿಲೋಮೀಟರ್ ರಸ್ತೆಯನ್ನು 6 ಪಥದ ರಸ್ತೆಯನ್ನಾಗಿ ಮಾಡಲು ಹೊರಟಿರುವುದು ತಪ್ಪಾ? ಚಾಮುಂಡಿಬೆಟ್ಟದ ಅಭಿವೃದ್ಧಿಗೆ ಸೋಮಣ್ಣ ಅವರ ಜೊತೆ ಕೈಜೋಡಿಸಿ ಕೆಲಸ ಮಾಡಿದ್ದೇನೆ. ಈಗ 'ಪ್ರಸಾದ್' ಯೋಜನೆಯಡಿ 49 ಕೋಟಿ ರೂ. ತಂದು ಅಭಿವೃದ್ಧಿಪಡಿಸಲು ಮುಂದಾಗಿದ್ದೇನೆ. ವರ್ಷಕ್ಕೊಮ್ಮೆ ನಾಮಕಾವಸ್ತೆಯಾಗಿ ನಡೆಯುತ್ತಿದ್ದ ದಸರಾ ವಸ್ತುಪ್ರದರ್ಶನ ವರ್ಷದ 365 ದಿನವೂ ನಡೆಯುವಂತೆ ಮಾಡಲು 'ಸ್ವದೇಶ್ ದರ್ಶನ್' ಯೋಜನೆಯಡಿ 80 ಕೋಟಿ ರೂ. ಡಿಪಿಆರ್ ಸಿದ್ಧಪಡಿಸಿದ್ದೇನೆ. ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ತರಲು ಹುಯಿಲಾಳು ಬಳಿ 26 ಎಕರೆ ಪ್ರದೇಶದಲ್ಲಿ 100 ಕೋಟಿ ರೂ. ಹೂಡಿಕೆ ಮಾಡುವಂತೆ ಕರ್ನಾಟಕ ಕ್ರಿಕೆಟ್ ಅಕಾಡೆಮಿ ಅವರನ್ನು ಮನವೊಲಿಸುತ್ತಿರುವುದು ತಪ್ಪಾ? ಜಲಜೀವನ್ ಮಿಷನ್ ಅಡಿ ಮೈಸೂರಿಗೆ ಕುಡಿಯುವ ನೀರು ತರುತ್ತಿರುವುದು ಹಾಗೂ ಕಬಿನಿ 2ನೇ ಹಂತದ ನೀರು ತರುತ್ತಿರುವುದು ತಪ್ಪಾ? ತಂಬಾಕು ಬೆಳೆಗಾರರಿಗೆ ಶೇ. 15ರಷ್ಟು ಕಮಿಷನ್ ಹಾಗೂ ಶೇ. 2ರಷ್ಟು ದಂಡ ವಿಧಿಸುತ್ತಿದ್ದರು. ಅದನ್ನು ತಪ್ಪಿಸಿದ್ದೇನೆ, ಇದೆಲ್ಲಾ ನಾನು ಮಾಡಿರುವ ತಪ್ಪೇ? ಎಂದು ಮುಖ್ಯಮಂತ್ರಿಗಳನ್ನು ಪ್ರಶ್ನಿಸಿದ್ದಾರೆ.

40 ವರ್ಷಗಳಿಂದ ನಾನಾ ಅಧಿಕಾರದಲ್ಲಿರುವ ಸಿದ್ದರಾಮಯ್ಯ ಮೈಸೂರಿಗೆ ಮಾಡಿರುವ ಕೆಲಸ ಏನು? ಎಂಬುದನ್ನು ಹೇಳಲಿ ಎಂದು ಸುದ್ದಿಗಾರರನ್ನೇ ಪ್ರಶ್ನಿಸಿದ ಸಂಸದರು, ಜನಪರ ಕೆಲಸ ಮಾಡುವವನನ್ನು ಚುನಾವಣೆಯಲ್ಲಿ ಸೋಲಿಸಬೇಕು ಎಂದು ಮುಖ್ಯಮಂತ್ರಿಗಳು ಕೈಮುಗಿದು ಕೇಳಿದರೆ ಜನ ಒಪ್ಪುತ್ತಾರಾ? ಸಿದ್ದರಾಮಯ್ಯರಿಗೆ ಬಡವರ ಮಕ್ಕಳು ಉದ್ಧಾರ ಆಗಬಾರದು ಅವರ ಮಕ್ಕಳು ಮಾತ್ರ ರಾಜಕಾರಣ ಮಾಡುತ್ತಾ ಇರಬೇಕಷ್ಟೇ. ಮಹಿಷಾ ದಸರಾ ಆರಂಭಿಸಿ ಮೈಸೂರಿನ ಸ್ವಾಸ್ಥ್ಯ ಕೆಡಿಸಿದ್ದು ಸಿದ್ದರಾಮಯ್ಯ ತಾನೇ? ಟಿಪ್ಪು ಜಯಂತಿ ಆಚರಿಸಿ ಸೌಹಾರ್ದತೆ ಹಾಳು ಮಾಡಿದ್ದು ಸಿದ್ದರಾಮಯ್ಯ. ಟಿಪ್ಪು ಜಯಂತಿ ಹಿನ್ನೆಲೆಯಲ್ಲಿ ಸಾಲು ಸಾಲು ಹಿಂದೂಗಳ ಕೊಲೆಯಾಯಿತು. ಅದಕ್ಕೆ ಯಾರು ಕಾರಣ ಎಂದು ಪ್ರಶ್ನಿಸಿದರಲ್ಲದೇ ಸಿದ್ದರಾಮಯ್ಯ ಪ್ರತಿ ಬಾರಿಯೂ ಪ್ರಧಾನಿ ನರೇಂದ್ರಮೋದಿ ವಿರುದ್ಧ ಮಾತನಾಡುತ್ತಾರೆ. ಇದು ಒಂದು ರೀತಿಯಲ್ಲಿ ಆಕಾಶದ ಕಡೆ ಮುಖ ಮಾಡಿ ಉಗಿದಂತೆ ಎಂದು ಪ್ರತಾಪ್ ಸಿಂಹ ಆಕ್ರೋಶ ವ್ಯಕ್ತಪಡಿಸಿದರು.

ಪಾಲಿಕೆ ಕೌನ್ಸಿಲ್ ಸಭೆ ಮುಂದೂಡಿಕೆ

ಸಲುವಾಗಿ ಸಭೆಯನ್ನು ಆಯುಕ್ತರು ಮುಂದೂಡಿದ್ದಾರೆ ಎಂದು ಅವರು ಆರೋಪಿಸಿ, ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ರಾಜ್ಯ ಸರ್ಕಾರದ ಸೂಚನೆ ಮೇರೆಗೆ ಆಯುಕ್ತರು ಸಭೆ ಮುಂದೂಡಿದ್ದಾರೆ. ಅದಕ್ಕೆ ಕಾರಣರಾದವರು ಮೈಸೂರು ಅಭಿವೃದ್ಧಿ ವಿರೋಧಿಗಳು. ಪಾಲಿಕೆ ಕೌನ್ಸಿಲ್ ಸಭೆ ನಿಗದಿಯಾಗಿದ್ದ ದಿನವೇ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರು ಬೆಂಗಳೂರಿನಲ್ಲಿ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳ ಸಭೆ ಕರೆದದ್ದು ಸರಿಯಲ್ಲ. ಈ ಸಂಬಂಧ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರ ಗಮನಕ್ಕೂ ತಂದಿದ್ದೇವೆ ಎಂದು ಪ್ರತಾಪ್ ಸಿಂಹ ತಿಳಿಸಿದರು.

ಮೇಯರ್ ಅನುಮತಿ ಇಲ್ಲದೆಯೇ ಪಾಲಿಕೆ ಕೌನ್ಸಿಲ್ ಸಭೆ ಮುಂದೂಡಿರುವ ಸಂಬಂಧ ಕಾನೂನು ಹೋರಾಟ ನಡೆಸುತ್ತೇವೆ. ಮೇಯರ್‌ಗಿರುವ ಅಧಿಕಾರ ವ್ಯಾಪ್ತಿಯ ಬಗ್ಗೆ ಈಗಾಗಲೇ ಕಾನೂನು ತಜ್ಞರ ಅಭಿಪ್ರಾಯ ಪಡೆಯಲಾಗಿದ್ದು, ನಿಯಮ ಉಲ್ಲಂಘಿಸಿ ಪಾಲಿಕೆ ಕೌನ್ಸಿಲ್ ಸಭೆ ಮುಂದೂಡಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸಂಸದರು ಆಗ್ರಹಿಸಿದ್ದಾರೆ.

ಭಾರತ-ಪಾಕಿಸ್ತಾನ ಪಂದ್ಯ ರದ್ದು

ರಾತ್ರಿ 10 ಗಂಟೆಯಾದರೂ ಮಳೆ ನಿಲ್ಲದ ಕಾರಣ ಪಂದ್ಯವನ್ನು ರದ್ದು ಮಾಡಲಾಯಿತು.

ಭಾರತ ತಂಡ 15 ರನ್ ಆಗಿದ್ದ ವೇಳೆ ನಾಯಕ ರೋಹಿತ್ ಶರ್ಮಾ ಅವರ ವಿಕೆಟ್ ಕಳೆದುಕೊಂಡು ಆಘಾತ ಅನುಭವಿಸಿತು. ಶರ್ಮಾ 11ರನ್ (22 ಎಸೆತ) ಗಳಿಸಿ ಶಾಹೀನ್ ಅಫ್ರಿದಿ ಅವರ ಎಸೆತದಲ್ಲಿ ಕ್ಲೀನ್ ಬೌಲ್ಡ್ ಆದರು. ಆ ಬಳಿಕ ಭರವಸೆಯ ವಿರಾಟ್ ಕೊಹ್ಲಿ ಅವರು ತಂಡ 27 ರನ್ ಗಳಿಸಿದ್ದ ವೇಳೆ ಔಟಾದರು. 4 ರನ್‌ಗಳಿಗೆ ನಿರ್ಗಮಿಸಿ ಭಾರೀ ನಿರಾಶೆ ಮೂಡಿಸಿದರು. ಆರಂಭಿಕರಾಗಿ ಬಂದ ಶುಭಮನ್ ಗಿಲ್ 32 ಎಸೆತಗಳಲ್ಲಿ 10 ರನ್ ಗಳಿಸಿದರು. ಶ್ರೇಯಸ್ ಅಯ್ಯರ್ 14 ರನ್‌ಗಳಿಗೆ ಔಟಾದರು. ಆ ಬಳಿಕ ತಂಡಕ್ಕೆ ಆಧಾರವಾದ ಇಶಾನ್ ಕಿಶನ್ ಮತ್ತು ಹಾರ್ದಿಕ್ ಪಾಂಡ್ಯ ಭರ್ಜರಿ ಜತೆಯಾಟವಾಡಿದರು. ತಂಡ ಗೌರವಯುತ ಮೊತ್ತ ಕಲೆಹಾಕಲು ಕಾರಣರಾದರು. ಇಶಾನ್ ಕಿಶನ್ 82(81ಎಸೆತ) ರನ್ ಗಳಿಸಿದ್ದ ವೇಳೆ ಹ್ಯಾರಿಸ್ ರೌಫ್ ಎಸೆದ ಚೆಂಡನ್ನು ಬಾಬರ್ ಅಜಮ್ ಅವರ ಕೈಗೆ ಕ್ಯಾಚಿತ್ತು ನಿರ್ಗಮಿಸಿದರು. ಶತಕದ ಕನಸು ಕಂಡಿದ್ದ ಅಭಿಮಾನಿಗಳು ಭಾರಿ ನಿರಾಶೆಗೊಂಡರು. ಪಾಂಡ್ಯ ತಾಳ್ಮೆಯ ಅಮೋಘ ಆಟವಾಡಿದರು. 87 ರನ್ (90ಎಸೆತ) ಗಳಿಸಿ, ಶಾಹೀನ್ ಅಫ್ರಿದಿ ಎಸೆದ ಚೆಂಡನ್ನು ಅಘಾ ಸಲ್ಮಾನ್ ಕೈಗಿತ್ತು ನಿರ್ಗಮಿಸಿದರು. ಮೊದಲ ಅಂತಾರಾಷ್ಟ್ರೀಯ ಏಕದಿನ ಶತಕ ಸಿಡಿಸುವ ಅವರ ಕನಸು ನುಚ್ಚುನೂರಾಯಿತು. ರವೀಂದ್ರ ಜಡೇಜಾ 14, ಕೊನೆಯಲ್ಲಿ ಬಂದ ಜಸ್ಪ್ರೀತ್ ಬುಮ್ರಾ16 ರನ್ ಗಳಿಸಿದರು. ಪಾಕ್ ಪರ ಬಿಗಿ ದಾಳಿ ನಡೆಸಿದ ಶಾಹೀನ್ ಅಫ್ರಿದಿ 4 ವಿಕೆಟ್ ಪಡೆದು ಭಾರತದ ಬ್ಯಾಟ್ಸ್ ಮ್ಯಾನ್‌ಗಳನ್ನು ಕಾಡಿದರು. ನಸೀಮ್ ಶಾ ಮತ್ತು ಹ್ಯಾರಿಸ್ ರೌಫ್ ತಲಾ 3 ವಿಕೆಟ್ ಪಡೆದರು.

ಗೌರಿ-ಗಣೇಶ ಹಬ್ಬಕ್ಕೆ ದಿನಗಣನೆ.... ಬಾಗಿನ ಕೊಡುವವರಿಗೆ ಸಿದ್ಧವಾಗುತ್ತಿವೆ

ಸಾಂಪ್ರದಾಯಿಕ ಬಿದಿರು ಮೊರಗಳು

'ಬಿದಿರೇ ಬದುಕು' ಎಂದು ನಂಬಿರುವ ಕುಶಲಕರ್ಮಿಗಳಲ್ಲಿ ಭರ್ಜರಿ ವ್ಯಾಪಾರದ ನಿರೀಕ್ಷೆ



ಮೈಸೂರಿನ ತಿಲಕನಗರದ ಸಯ್ಯಾಜಿರಾವ್ ರಸ್ತೆಯ ಬದಿಯಲ್ಲಿ ಕುಶಲಕರ್ಮಿಗಳು.



ಮೈಸೂರಿನ ನೂರೊಂದು ಗಣಪತಿ ದೇವಸ್ಥಾನದ ಅರಳೀಕಟ್ಟೆ ಆವರಣದಲ್ಲಿ ಬಿದಿರಿನ ಮೊರ ಹೆಣೆಯುತ್ತಿರುವ ಕುಶಲಕರ್ಮಿಗಳು

*ಎಂ.ಬಿ.ಪವನ್‌ಮೂರ್ತಿ

ಮೈಸೂರು, ಸೆ.2– 'ಬಿದಿರು ನಾನಾರಿಗಲ್ಲದವಳು' ಎಂಬ ಸಂತ ಶಿಶುನಾಳ ಶರೀಫರ ಗೀತೆಯು ಮಾನವನ ಬದುಕಿನಲ್ಲಿ ಬಿದಿರಿನ ಮಹತ್ವ ಸೂಚಿಸುತ್ತದೆ. ಆದರೆ ಈಗ ಬಿದಿರಿನ ಜಾಗವನ್ನು ಪ್ಲಾಸ್ಟಿಕ್ ಕಬಳಿಸುತ್ತಿದೆ ಎಂದರೆ ಉತ್ಪ್ರೇಕ್ಷೆಯಲ್ಲ. ಆದಾಗ್ಯೂ ಬಿದಿರು ತನ್ನ ಪ್ರಾಮುಖ್ಯತೆ ಕಳೆದುಕೊಂಡಿಲ್ಲ. ಗೌರಿ-ಗಣೇಶನ ಹಬ್ಬದಲ್ಲಿ ಬಿದಿರಿನ ಮೊರಕ್ಕೆ ಬೇಡಿಕೆ ಇದ್ದೇ ಇದೆ.

ಇನ್ನೇನು ಹಬ್ಬ ಸಮೀಪಿಸುತ್ತಿದೆ. ಹೀಗಾಗಿ ಹೆಣ್ಣು ಮಕ್ಕಳು ಬಿದಿರಿನ ಮೊರದ ಬಾಗಿನ ವಿನಿಮಯಕ್ಕೆ ಸಜ್ಜಾಗುತ್ತಿದ್ದರೆ, ಬಿದಿರಿನ ಬಾಗಿನ ಮೊರ ಪೂರೈಸಲು ಕುಶಲಕರ್ಮಿಗಳು ತಮ್ಮ ಕಾಯಕದಲ್ಲಿ ಎಂದಿಗಿಂತಲೂ ಹೆಚ್ಚಾಗಿ ಈಗ ತಲ್ಲೀನರಾಗಿದ್ದಾರೆ. ಮನೆಯಲ್ಲಿ ಇರುತ್ತಿದ್ದ ಬಿದಿರಿನ ಮೊರ, ಕುಕ್ಕೆ ಜಾಗದಲ್ಲಿ ಈಗ ಪ್ಲಾಸ್ಟಿಕ್ ಕಾರುಬಾರು ನಡೆಸುತ್ತಿದೆ. ಇದೇನೆ ಇದ್ದರೂ ಗೌರಿ-ಗಣೇಶನ ಹಬ್ಬದಲ್ಲಿ ಬಿದಿರಿನ ಮೊರದಲ್ಲಿ ಬಾಗಿನ ನೀಡುವುದೇ ಶ್ರೇಷ್ಠವೆಂಬ ನಂಬಿಕೆ ಇರುವ ಹಿನ್ನೆಲೆಯಲ್ಲಿ ಇದೀಗ ಬಿದಿರಿನ ಕುಶಲಕರ್ಮಿಗಳ ಕಾಯಕ ಚುರುಕು ಪಡೆದಿದೆ.

ಬಿದಿರು ಹೆಣೆದು ಗೃಹೋಪಯೋಗಿ ಸಾಮಗ್ರಿ ಸೇರಿದಂತೆ ಇನ್ನಿತರ ಕೆಲಸ ಕಾರ್ಯಗಳಿಗೆ ಅಗತ್ಯವಾದ ಪರಿಕರ ಸಿದ್ಧಪಡಿಸುವುದು ಮೇದರ ಸಮುದಾಯದ ಸಾಂಪ್ರದಾಯಿಕ ಕುಲಕಸುಬು. ಈ ಸಮುದಾಯದ ಸಾಕಷ್ಟು ಮಂದಿ ಇಂದಿಗೂ ಕುಲಕಸುಬು ನಂಬಿಯೇ ಜೀವನ ನಡೆಸುತ್ತಿದ್ದಾರೆ. ಇವರಿಗೆ 'ಬಿದಿರೇ ಬದುಕು'.

> ನಮ್ಮ ಹಿರಿಯರಿಂದ ಮನೆಗಳಲ್ಲೇ ಮೊರ ಹೆಣೆಯುವುದು ಸೇರಿದಂತೆ ಬಿದಿರಿನಿಂದ ವಿವಿಧ ಸಾಮಗ್ರಿ ಮಾಡುವುದನ್ನು ಕಲಿತಿದ್ದೇವೆ. ಇದು ಕುಲಕಸುಬು. ಹಾಗಾಗಿ ಕಲಿಸಿದರು. ನಮ್ಮ ಕುಟುಂಬದಲ್ಲಿ ಮಕ್ಕಳು ಈ ಕುಶಲಕಲೆ ಕಲಿತಿಲ್ಲ. ನಮ್ಮ ಸಮುದಾಯದ ಈ ಪೀಳಿಗೆಯಲ್ಲಿ ಈ ಕಲೆ ಕಲಿತವರು ಕಡಿಮೆ. ಮೈಸೂರು ಜಿಲ್ಲೆ ನಂಜನಗೂಡಿನಲ್ಲಿ ನಮ್ಮ ಸಮುದಾಯ ಹೆಚ್ಚು ಜನಸಂಖ್ಯೆ ಹೊಂದಿದೆ. ಮೈಸೂರು ನಗರದಲ್ಲಿ ಜಯನಗರ, ನಂಜುಮಳಿಗೆ, ಬಂಬೂ ಬಜಾರ್‌ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಸಮುದಾಯದವರಿದ್ದಾರೆ.
> -ಪಾರ್ವತಿ, ಬಿದಿರು ಕುಶಲಕರ್ಮಿ

ಇದೀಗ ಗೌರಿ-ಗಣೇಶ ಹಬ್ಬ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಇವರು ಹೆಣೆಯುವ ಬಿದಿರಿನ ಮೊರಕ್ಕೆ ಬೇಡಿಕೆ ಹೆಚ್ಚಾಗುತ್ತಿದೆ.

ಪ್ರಮುಖವಾಗಿ ಮೈಸೂರಿನ ನೂರೊಂದು ಗಣಪತಿ ದೇವಸ್ಥಾನ ಬಳಿಯ ಅರಳೀಕಟ್ಟೆ ಆವರಣ ಹಾಗೂ ತಿಲಕನಗರದ ಸಯ್ಯಾಜಿರಾವ್ ರಸ್ತೆಯ ಬದಿಯಲ್ಲಿ ಬಿದಿರಿನ ಮೊರ ಹೆಣೆಯುವ ಕಾಯಕದಲ್ಲಿ ಮೇದಾರ ಸಮುದಾಯದ ಕುಶಲಕರ್ಮಿಗಳು ಇದೀಗ ಹೆಚ್ಚು ತೊಡಗಿಸಿಕೊಂಡಿದ್ದಾರೆ. ಮೊರ, ಬುಟ್ಟಿ, ತಿಂಡಿ ಬುಟ್ಟಿ, ಬೀಸಣಿಗೆ, ಕೋಳಿ ಗೂಡು, ಕುಕ್ಕೆ, ಪೂಜಾ ಸಾಮಗ್ರಿ ಬುಟ್ಟಿ, ಪಂಜರ, ಏಣಿ ಸೇರಿದಂತೆ ಮೊದಲಾದ ಸಾಮಗ್ರಿಗಳನ್ನು ಹೆಣೆಯುವ ಕಲೆ ಕರಗತ ಮಾಡಿಕೊಂಡಿರುವ ಇವರು, ಈಗ ಬಿದಿರಿನ ಮೊರ ಹೆಣೆಯಲು ಮೊದಲ ಆದ್ಯತೆ ನೀಡಿದ್ದಾರೆ.

ನೂರೊಂದು ಗಣಪತಿ ದೇವಸ್ಥಾನ ಬಳಿಯ ಅರಳೀಕಟ್ಟೆ ಆವರಣದಲ್ಲಿ ವರ್ಷಪೂರ್ತಿ ಮೂರ್ನಾಲ್ಕು ಮಂದಿ ಕುಶಲಕರ್ಮಿಗಳು ಬಿದಿರಿನ ಸಾಮಗ್ರಿ ಹೆಣೆಯುವ ಕಾಯಕ ಮಾಡಿದರೆ, ಗೌರಿ-ಗಣೇಶ ಹಬ್ಬದ ಸಂದರ್ಭದಲ್ಲಿ ಇಲ್ಲಿಗೆ 25ಕ್ಕೂ ಹೆಚ್ಚು ಮಂದಿ ಬಂದು ಮೊರ ಹೆಣೆಯುವ ಕೆಲಸಲ್ಲಿ ನಿರತರಾಗುತ್ತಾರೆ. ನಂಜನಗೂಡಿನಿಂದ ಬರುವ ಇವರು ಹಬ್ಬದ ಬಳಿಕ ಹಿಂತಿರುಗಿ ಅಲ್ಲಿಯೇ ಕಾಯಕ ಮುಂದುರೆಸುತ್ತಾರೆ.

'ಗೌರಿ ಪೂಜೆಗಾಗಿ ಬಳಸಲು ಎರಡು ರೀತಿಯ ಬಿದಿರಿನ ಬಾಗಿನ ಮೊರಗಳನ್ನು ಸಿದ್ಧಪಡಿಸುತ್ತಿದ್ದೇವೆ. ದೊಡ್ಡ ಮೊರ ಜೊತೆಗೆ 130ರಿಂದ 140 ರೂ.ವರೆಗೆ ಮಾರಾಟ ಮಾಡುತ್ತಿದ್ದೇವೆ. ಚಿಕ್ಕ ಮೊರಗಳು ಜೊತೆಗೆ 100 ರೂ.ಗೆ ಕೊಡುತ್ತಿದ್ದೇವೆ. ಹಬ್ಬ ಹತ್ತಿರಕ್ಕೆ ಬಂದಾಗ ಜೊತೆ ದೊಡ್ಡ ಮೊರಕ್ಕೆ 150 ರೂ. ಆಗಬಹುದು. ಅಥವಾ ಇನ್ನು ಹೆಚ್ಚಾದರೂ ಆಗಬಹುದು. ಗೌರಿ ಚಿಬ್ಬುಲು ಒಂದಕ್ಕೆ 150 ರೂ. ಇದೆ. ಮಳೆಯಾದರೆ ಬಂಬೂ ಮೈಸೂರಿಗೆ ಬರುವುದು ಕಷ್ಟ, ಕೊಡಗು ಜಿಲ್ಲೆಯಿಂದ ಬಿದಿರು ಬಂಬೂ ಲೋಡು ಗಟ್ಟಲೆ ಆರ್‌ಎಂಸಿ ಬಳಿಗೆ ಬರಲಿದೆ. ನಮಗೆ ಅಗತ್ಯವಿದ್ದಷ್ಟನ್ನು ತುಂಡುಗಳ ಲೆಕ್ಕದಲ್ಲಿ ಖರೀದಿಸುತ್ತೇವೆ. 15 ಅಡಿ ತುಂಡಿಗೆ 500 ರೂ. ಬೆಲೆ ಇದೆ' ಎನ್ನುತ್ತಾರೆ ಇದೇ ಸ್ಥಳದಲ್ಲಿ ಕೆಲಸ ಮಾಡುವ ಕುಶಲಕರ್ಮಿ ಪಾರ್ವತಿ.

'ನಾನು ಮೂಲತಃ ನಂಜನಗೂಡು ಪಟ್ಟಣದ ನಿವಾಸಿ. ಮೈಸೂರಿನಲ್ಲೇ ನೆಲೆಸಿರುವೆ. ವರ್ಷಪೂರ್ತಿ ಇಲ್ಲೇ ಕೆಲಸ ಮಾಡುತ್ತೇನೆ. ಉಳಿದವರು ಗಣೇಶ ಹಬ್ಬ 15 ದಿನ ಇಲ್ಲವೇ ತಿಂಗಳು ಇರುವಾಗ ಬರುತ್ತಾರೆ. ಬಿದಿರಿನ ಮೊರ ಹೆಣೆದು ಮಾರಾಟ ಮಾಡುತ್ತಾರೆ. ಬಂಬೂ ಚೆನ್ನಾಗಿದ್ದರೆ ಒಂದು ತುಂಡಿನಲ್ಲಿ 30 ದೊಡ್ಡ ಮೊರ ಮಾಡಬಹುದು. ಇನ್ನೇನು ಹಬ್ಬ ಹತ್ತಿರ ಬರುತ್ತಿದೆ. ವ್ಯಾಪಾರ ಚೆನ್ನಾಗಿ ಆಗುವ ನಿರೀಕ್ಷೆ ಇದೆ' ಎಂದು ಅವರು ಹೇಳುತ್ತಾರೆ.

'ಮೈಸೂರು ನಗರದ ಬಹುತೇಕ ಜನತೆ ನಮ್ಮಲ್ಲಿಗೇ ಬಂದು ಮೊರ ಖರೀದಿಸುತ್ತಾರೆ. ಪ್ಲಾಸ್ಟಿಕ್ ಸಾಮಗ್ರಿಗಳ ಬಳಕೆ ನಿಯಂತ್ರಣಕ್ಕೆ ಬಂದರೆ ಪರಿಸರ ಸ್ನೇಹಿಯಾದ ಬಿದಿರಿನ ಸಾಮಗ್ರಿಗಳ ಬಳಕೆಗೆ ಉತ್ತೇಜನ ದೊರೆಯಲಿದೆ ಗೌರಿ-ಗಣೇಶ ಹಬ್ಬದಲ್ಲಿ ಪ್ಲಾಸ್ಟಿಕ್ ಮೊರದಲ್ಲಿ ಬಾಗಿನ ಕೊಡಬಾರದು ಎಂಬ ನಂಬಿಕೆ ಇದೆ. ಹೀಗಾಗಿ ಪ್ರತಿವರ್ಷ ಬಿದಿರು ಮೊರಕ್ಕೆ ಹೆಚ್ಚಿನ ಬೇಡಿಕೆ ಇದೆ' ಎನ್ನುತ್ತಾರೆ ಇಲ್ಲಿನ ಮತ್ತೊಬ್ಬ ಕುಶಲಕರ್ಮಿ ಬಸವಣ್ಣ.

ಪ್ರವಾಸಿಗರಿಗೆ ಆಕರ್ಷಣೆ ಇಲ್ಲಿನ ಬಿದಿರು ಸಾಮಗ್ರಿ

ಮೈಸೂರಿನ ತಿಲಕನಗರದ ಸಯ್ಯಾಜಿರಾವ್ ರಸ್ತೆಯ ಬದಿಯಲ್ಲೂ ಮೇದರ ಸಮುದಾಯದ ಕುಶಲಕರ್ಮಿಗಳು ಬಿದಿರಿನ ಸಾಮಗ್ರಿಗಳನ್ನು ಹೆಣೆದು ಮಾರಾಟ ಮಾಡುತ್ತಿದ್ದು, ಗೌರಿ-ಗಣೇಶ ಹಬ್ಬದ ಪ್ರಯುಕ್ತ ಇಲ್ಲೀಗ ಬಿದಿರಿನ ಮೊರಗಳನ್ನು ಹೆಣೆಯುವುದನ್ನು ಹೆಚ್ಚು ಮಾಡಲಾಗಿದೆ.

ಇಲ್ಲಿನ ಕುಶಲಕರ್ಮಿ ಲಕ್ಷ್ಮೀ ಅವರ ಪ್ರಕಾರ ಬಿದಿರಿನ ಸಾಮಗ್ರಿಗಳು ಪ್ರವಾಸಿಗರನ್ನು ಆಕರ್ಷಿಸುವುದು ವಿಶೇಷವಾಗಿದೆ. ಇವರೂ ಸೇರಿದಂತೆ ಬಂಬೂ ಬಜಾರ್ ಮೇದರ್ ಬ್ಲಾಕ್‌ನ (ರಾಜರಾಜೇಶ್ವರಿ ಕಾಲೋನಿ) ಮೇದರ ಸಮುದಾಯದ ಬಿದಿರು ಕುಶಲಕರ್ಮಿಗಳು ಇಲ್ಲಿ ವರ್ಷಪೂರ್ತಿ ಕಾಯಕ ಮಾಡುತ್ತಿದ್ದಾರೆ.

ವರ್ಷಪೂರ್ತಿ ಇದೇ ಜಾಗದಲ್ಲಿ ಕೆಲಸ ಮಾಡುತ್ತೇವೆ. ಮೊರ, ಬೀಸಣಿಗೆ, ಮೊರಿ ಅಚ್ಚೆ, ಹೂ ಬುಟ್ಟಿ, ಚಿಬ್ಬುಲು, ಅನ್ನ ಬಸಿಯುವ ಕುಕ್ಕೆ ಸೇರಿದಂತೆ ಎಲ್ಲಾ ವಿಧದ ಬಿದಿರು ಸಾಮಗ್ರಿ ಹೆಣೆಯುತ್ತೇವೆ. ಇದೀಗ ಗೌರಿ ಗಣೇಶ ಹಬ್ಬದ ಹಿನ್ನೆಲೆಯಲ್ಲಿ ಮೊರಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಹೆಣೆಯುತ್ತಿದ್ದೇವೆ. ದೊಡ್ಡ ಮೊರ ಜೊತೆಗೆ 150 ರೂ. ಹಾಗೂ ಚಿಕ್ಕ ಮೊರಕ್ಕೆ 100 ನಿಗದಿ ಮಾಡಿದ್ದೇವೆ ಎನ್ನುತ್ತಾರೆ ಲಕ್ಷ್ಮೀ.

ಇದೇ ಜಾಗದಲ್ಲಿ ವರ್ಷಪೂರ್ತಿ ನಾಲ್ಕಾರು ಮಂದಿ ಕೆಲಸ ಮಾಡುತ್ತೇವೆ. ಆರ್ಡರ್ ಕೊಟ್ಟರೂ ಮಾಡಿಕೊಡುತ್ತೇವೆ. ಬಿದಿರಿನ ಎಲ್ಲಾ ಸಾಮಗ್ರಿ ಇಲ್ಲಿ ಲಭ್ಯವಿವೆ. ಕೊಡಗು ಜಿಲ್ಲೆಯಿಂದ ಬಂಬೂ ಬರುತ್ತದೆ. ನಮ್ಮ ತಂದೆ-ತಾಯಿ ಈ ಕೆಲಸ ಮಾಡುತ್ತಿದ್ದರು. ಇದೀಗ ನಾನು ಮುಂದುವರೆಸಿದ್ದೇನೆ. ಕುಲಕಸಬನ್ನು ನಮ್ಮ ಕಾಲೋನಿಯ ಬಹುತೇಕರು ಬಿಟ್ಟಿಲ್ಲ. ಮೈಸೂರಿನ ವಿವಿಧೆಡೆ ಕೆಲಸ ಮಾಡುತ್ತಿದ್ದಾರೆ. ಹಬ್ಬ ಸಮೀಪಿಸುತ್ತಿದ್ದಂತೆ ದೇವರಾಜ ಮಾರುಕಟ್ಟೆಯ ವ್ಯಾಪಾರಿಗಳು ನಮ್ಮಿಂದ ಸಗಟು ರೀತಿಯಲ್ಲಿ ಬಿದಿರಿನ ಮೊರಗಳನ್ನು ಖರೀದಿಸುತ್ತಾರೆ ಎಂದು ಲಕ್ಷ್ಮಿ ಹೇಳುತ್ತಾರೆ.

ಸೆ.5ರಂದು ಶಿಕ್ಷಕರ ದಿನಾಚರಣೆ ಕಾರ್ಯಕ್ರಮ

ಮೈಸೂರು, ಸೆ.2– ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಹಾಗೂ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಸೆ.5 ರಂದು ಬೆಳಗ್ಗೆ 10 ಗಂಟೆಗೆ ಕರ್ನಾಟಕ ಕಲಾಮಂದಿರದಲ್ಲಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನದ ಅಂಗವಾಗಿ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕಾರ ಹಾಗೂ ನಿವೃತ್ತ ಶಿಕ್ಷಕರಿಗೆ ಸನ್ಮಾನ ಸಮಾರಂಭ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತಿಯಲ್ಲಿ, ಸಮಾಜ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಹೆಚ್.ಸಿ ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ಉಪಸ್ಥಿತಿಯಲ್ಲಿ, ಶಾಸಕರಾದ ಕೆ. ಹರೀಶ್‌ಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಹಾನಗರ ಪಾಲಿಕೆಯ ಮಹಾಪೌರರಾದ ಶಿವಕುಮಾರ್, ಲೋಕಸಭಾ ಸದಸ್ಯರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್ ಪ್ರಸಾದ್ ಹಾಗೂ ಸುಮಲತಾ ಅಂಬರೀಶ್ ಭಾಗವಹಿಸಲಿದ್ದಾರೆ.

ಸಮಾರಂಭದ ಅತಿಥಿಗಳಾಗಿ ವಿಧಾನಸಭಾ ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಅನಿಲ್ ಕುಮಾರ್.ಸಿ, ರವಿಶಂಕರ್. ಡಿ, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ಟಿ.ಎಸ್.ಶ್ರೀವತ್ಸ, ವಿಧಾನ ಪರಿಷತ್ತಿನ ಶಾಸಕರಾದ ಮರಿತಿಬ್ಬೆಗೌಡ, ಹೆಚ್.ವಿಶ್ವನಾಥ್, ಡಾ. ಡಿ.ತಿಮ್ಮಯ್ಯ, ಮಧು ಜಿ.ಮಾದೇಗೌಡ, ಸಿ.ಎನ್ ಮಂಜೇಗೌಡ, ಉಪಮಹಾಪೌರರಾದ ಡಾ. ಜಿರೂಪ ಹಾಗೂ ಮುಖ್ಯ ಭಾಷಣಕಾರರಾಗಿ ಉಪನ್ಯಾಸಕರಾದ ಎನ್.ಎಂ.ಶಿವಪ್ರಕಾಶ್ ಅವರು ಭಾಗವಹಿಸುವರು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ

ಮೈಸೂರು, ಸೆ.2– ಹುಣಸೂರು ಮುಖ್ಯ ರಸ್ತೆಯ ರಾಷ್ಟ್ರೀಯ ಹೆದ್ದಾರಿ ರಸ್ತೆ ಅಗಲೀಕರಣ ಕಾಮಗಾರಿಗೆ ಅಡ್ಡಲಾಗಿರುವ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸುವ ಕೆಲಸದ ನಿಮಿತ್ತ, ಸೆಪ್ಟೆಂಬರ್ 4 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಮಾಸ್ ಫರ್ನಿರ್ಸ್, ರಿಲಾಯನ್ಸ್ ಮಾರ್ಕೆಟ್, ಹಿನಕಲ್ ಸರ್ಕಾರಿ ಶಾಲೆ ಸುತ್ತಮುತ್ತ, ಲಕ್ಷ್ಮಿ ಶ್ರೀನಿವಾಸ ಫ್ಲೋರ್‌ಮಿಲ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ವಿ.ವಿ ಮೊಹಲ್ಲಾ ವಿಭಾಗದ, ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಸೆ.5ರಂದು ಅರಮನೆ ಆವರಣಕ್ಕೆ ಗಜಪಡೆಗೆ ಸ್ವಾಗತ

ಮೈಸೂರು, ಸೆ.2– ಮೈಸೂರು ಅರಮನೆ ಮಂಡಳಿ ವತಿಯಿಂದ ಮೈಸೂರು ನಾಡಹಬ್ಬ ಮೈಸೂರು ದಸರಾ–2023ರ ಅಂಗವಾಗಿ ಅರಮನೆಗೆ ಆಗಮಿಸುತ್ತಿರುವ ಗಜಪಡೆಗೆ ಸುಸ್ವಾಗತ ಕಾರ್ಯಕ್ರಮವನ್ನು ಸೆಪ್ಟೆಂಬರ್ 05 ರಂದು ಮಧ್ಯಾಹ್ನ 12.01 ರಿಂದ 12.51ರ ಅಭಿಜಿನ್ ಲಗ್ನದಲ್ಲಿ ಅರಮನೆಯ ಜಯ ಮಾರ್ತಾಂಡ ದ್ವಾರದಲ್ಲಿ ಹಮ್ಮಿಕೊಳ್ಳಲಾಗಿದೆ.

ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರ ಘನ ಉಪಸ್ಥಿತಿಯಲ್ಲಿ, ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತವಾರಿ ಸಚಿವರಾದ ಡಾ. ಹೆಚ್.ಸಿ ಮಹದೇವಪ್ಪ ಅವರು ವಿಧ್ಯುಕ್ತ ಚಾಲನೆ ನೀಡುವರು. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರಾದ ಕೆ ವೆಂಕಟೇಶ್ ಅವರ ಉಪಸ್ಥಿತಿಯಲ್ಲಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೃಷ್ಣರಾಜ ಕ್ಷೇತ್ರದ ಟಿ.ಎಸ್. ಶ್ರೀವತ್ಸ ವಹಿಸಲಿದ್ದಾರೆ.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಹಾನಗರ ಪಾಲಿಕೆಯ ಮಹಾಪೌರರಾದ ಶಿವಕುಮಾರ್, ಲೋಕಸಭಾ ಸದಸ್ಯರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್ ಪ್ರಸಾದ್ ಹಾಗೂ ಸುಮಲತಾ ಅಂಬರೀಶ್ ಅವರು ಭಾಗವಹಿಸಲಿದ್ದಾರೆ.

ಸಮಾರಂಭದ ಅತಿಥಿಗಳಾಗಿ ವಿಧಾನಸಭಾ ಶಾಸಕರಾದ ತನ್ವೀರ್ ಸೇಠ್, ಜಿ.ಟಿ ದೇವೇಗೌಡ, ಅನಿಲ್ ಕುಮಾರ್.ಸಿ, ರವಿಶಂಕರ್. ಡಿ, ಜಿ.ಡಿ.ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ, ಕೆ ಹರೀಶ್‌ಗೌಡ, ವಿಧಾನ ಪರಿಷತ್ತಿನ ಶಾಸಕರಾದ ಮರಿತಿಬ್ಬೆಗೌಡ, ಹೆಚ್.ವಿಶ್ವನಾಥ್, ಡಾ.ಡಿ ತಿಮ್ಮಯ್ಯ, ಮಧು ಜಿ ಮಾದೇಗೌಡ ಸಿ.ಎನ್.ಮಂಜೇಗೌಡ ಹಾಗೂ ಉಪ ಮಹಾಪೌರರಾದ ಡಾ.ಜಿ ರೂಪ, ವಾರ್ಡ್ ನಂ 51ರ ಮಹಾನಗರ ಪಾಲಿಕೆಯ ಸದಸ್ಯರಾದ ಬಿ.ವಿ ಮಂಜುನಾಥ್ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಆಯುರ್ವೇದ ಚಿಕಿತ್ಸಾ ಪದ್ಧತಿಯಿಂದ ಸರ್ವರೋಗಗಳ ಗುಣಪಡಿಸಬಹುದು

● ಬೆಂಗಳೂರು ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ ವಿವಿ ಕುಲಪತಿ ಡಾ. ಬಿ.ಆರ್.ರಾಮಕೃಷ್ಣ ಪ್ರತಿಪಾದನೆ ● ಮೈಸೂರಿನ ಸರ್ಕಾರಿ ಪ್ರಕೃತಿ ಚಿಕಿತ್ಸೆ, ಯೋಗ, ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಪದವಿ ಪ್ರದಾನ

ಮೈಸೂರು, ಸೆ.2(ಎಂಟಿವೈ)– ಪ್ರಾಕೃತಿಕ ಹಾಗೂ ಆಯುರ್ವೇದ ಚಿಕಿತ್ಸಾ ಪದ್ಧತಿಯಿಂದ ಸರ್ವರೋಗಗಳನ್ನೂ ಗುಣಪಡಿಸಬಹುದಾಗಿದೆ ಎಂದು ಬೆಂಗಳೂರಿನ ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ ವಿಶ್ವವಿದ್ಯಾಲಯದ ಕುಲಪತಿ ಡಾ.ಬಿ.ಆರ್.ರಾಮಕೃಷ್ಣ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆ.ಕೆ.ಮೈದಾನ ಶನಿವಾರ ನಡೆದ ಸರ್ಕಾರಿ ಪ್ರಕೃತಿ ಚಿಕಿತ್ಸೆ, ಯೋಗ ವೈದ್ಯಕೀಯ ಮಹಾವಿದ್ಯಾಲಯದ ಪದವಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮ್ಮ ಆಚರಣೆಯಲ್ಲಿ ಪ್ರಾಕೃತಿಕ ಮತ್ತು ಆಯುರ್ವೇದಿಕ ವೈದ್ಯಕೀಯ ಪದ್ಧತಿಯಲ್ಲಿ ಎಲ್ಲಾ ರೀತಿಯ ಆರೋಗ್ಯ ಸಮಸ್ಯೆಗಳಿಗೂ ಔಷಧಿ ಹಾಗೂ ಚಿಕಿತ್ಸೆ ಲಭ್ಯವಿದ್ದು, ಹಲವು ಖಾಯಿಲೆಗಳನ್ನು ಪೂರ್ಣ ಪ್ರಮಾಣದಲ್ಲಿ ಗುಣಪಡಿಸುವ ಸಾಮರ್ಥ್ಯ ಪ್ರಾಕೃತಿಕ ಹಾಗೂ ಆಯುರ್ವೇದ ಪದ್ಧತಿಗೆ ಇದೆ. ಈ ನಿಟ್ಟಿನಲ್ಲಿ ಅನಾರೋಗ್ಯ ಪೀಡಿತರು ಪ್ರಾಕೃತಿಕ ಹಾಗೂ ಆಯುರ್ವೇದ ಚಿಕಿತ್ಸೆ ಪಡೆದುಕೊಳ್ಳಲು ಮುಂದೆ ಬರಬೇಕು ಎಂದು ಸಲಹೆ ನೀಡಿದರು.

ಆಧುನಿಕ ವೈದ್ಯಕೀಯ ಪದ್ಧತಿಯಾಗಿರುವ ಅಲೋಪತಿಯಲ್ಲಿ ಬಹಳಷ್ಟು ರೋಗಗಳಿಗೆ ಪರಿಪೂರ್ಣವಾದ ಚಿಕಿತ್ಸೆಯೇ ಇಲ್ಲದಂತಾಗಿದ್ದು, ಸಾಕಷ್ಟು ಮಂದಿ ಅನಾರೋಗ್ಯ ಸಮಸ್ಯೆಗೆ ಪರಿಹಾರ ದೊರಕದೇ ಹತಾಶರಾಗಿದ್ದಾರೆ. ಹಲವು ಆರೋಗ್ಯ ಸಮಸ್ಯೆಗಳನ್ನು ಸಂಪೂರ್ಣವಾಗಿ ಗುಣಪಡಿಸಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಜನರನ್ನು ಕಾಡುತ್ತಿರುವ ಮಧುಮೇಹವನ್ನು ಗುಣಪಡಿಸಲು ಸಾಧ್ಯವಾಗಿಲ್ಲ. ಇದರಿಂದ ಮಧುಮೇಹಿಗಳು ಯಾತನೆ ಅನುಭವಿಸಿಕೊಂಡೇ ಅಲೋಪತಿ ಚಿಕಿತ್ಸೆಯನ್ನೇ ಅವಲಂಬಿಸಿದ್ದಾರೆ. ಇದರೊಂದಿಗೆ ಕ್ಯಾನ್ಸರ್,



ರಕ್ತದೊತ್ತಡ, ನಿದ್ರಾಹೀನತೆ, ಹೃದ್ರೋಗ ಸೇರಿದಂತೆ ಇನ್ನಿತರ ರೋಗಳಿಗೆ ಆಧುನಿಕ ವೈದ್ಯಕೀಯ ಪದ್ಧತಿಯಲ್ಲಿ ಪರಿಹಾರ ಸಿಕ್ಕಿಲ್ಲ. ಈ ಹಿನ್ನೆಲೆಯಲ್ಲಿ ಶಾರೀರಿಕ ಹಾಗೂ ಮಾನಸಿಕ ಖಾಯಿಲೆಗಳಿಗೆ ಪ್ರಕೃತಿ ಚಿಕಿತ್ಸೆಯಲ್ಲಿ ಪರಿಹಾರ ಸಿಗುತ್ತದೆ ಎಂದು ತಿಳಿಸಿದರು.

ವಿಶ್ವ ಆರೋಗ್ಯ ಸಂಸ್ಥೆ ಈಗಾಗಲೇ ಭಾರತೀಯ ಪ್ರಕೃತಿ ಚಿಕಿತ್ಸೆಯ ಮಹತ್ವ ಅರಿತಿದೆ. ಅಲ್ಲದೆ, ಪ್ರಾಕೃತಿಕ ಚಿಕಿತ್ಸೆ ಹಾಗೂ ಆಯುರ್ವೇದವನ್ನು ಪರ್ಯಾಯ ಔಷಧ ಎಂದು ಸಮ್ಮತಿಸಿದೆ. ಈ ಪದ್ಧತಿಯಿಂದ ಎಲ್ಲಾ ರೋಗಗಳನ್ನೂ ಗುಣಪಡಿಸಬಹುದು. ಪ್ರಾಕೃತಿಕ ಚಿಕಿತ್ಸೆಯಿಂದ ಈಗಾಗಲೇ ಸಕ್ಕರೆ ಖಾಯಿಲೆಯನ್ನು ಪೂರ್ಣಪ್ರಮಾಣದಲ್ಲಿ ಗುಣಪಡಿಸಿರುವ ಹಲವು ಉದಾಹರಣೆಗಳಿವೆ. ಮಹಿಳೆಯರನ್ನು ಕಾಡುವ ಸ್ತನ ಕ್ಯಾನ್ಸರ್‌ಗೆ ಯೋಗ, ನೈಸರ್ಗಿಕ ವೈದ್ಯಕೀಯ ಪದ್ಧತಿಯೇ ಸೂಕ್ತ ಚಿಕಿತ್ಸಾ ಪದ್ಧತಿಯಾಗಿದೆ. ಈ ನಿಟ್ಟಿನಲ್ಲಿ ನಡೆದ ಹಲವು ಪ್ರಯೋಗಗಳು ಉತ್ತಮ ಫಲಿತಾಂಶವನ್ನು ನೀಡಿದೆ ಎಂದರು.

ಪ್ರಸ್ತುತ ಸಂದರ್ಭದಲ್ಲಿ ಆಧುನಿಕ ವೈದ್ಯಕೀಯ ಕ್ಷೇತ್ರ ವಾಣಿಜ್ಯೀಕರಣಗೊಂಡಿದೆ. ಇದು ಬಡ ಜನರ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಅಲೋಪತಿ ವೈದ್ಯರು ಕಿಕ್‌ಬ್ಯಾಕ್ ಪಡೆದುಕೊಳ್ಳುತ್ತಾರೆ ಎಂಬ ಆರೋಪಗಳಿವೆ. ಇದರ ಫಲವಾಗಿಯೇ ಅನಗತ್ಯವಾಗಿ ರೋಗಿಗಳಿಗೆ ಸಿಟಿಸ್ಕ್ಯಾನ್, ರಕ್ತ ಪರೀಕ್ಷೆ ಸೇರಿದಂತೆ ಇನ್ನಿತರ ಟೆಸ್ಟ್ ಮಾಡಿಸುವಂತೆ ಸೂಚಿಸಲಾಗುತ್ತಿದೆ. ಇದು ಬಡ ರೋಗಿಗಳಿಗೆ ಹೊರೆಯಾಗುತ್ತಿದೆ ಎಂದು ವಿಷಾದಿಸಿದರು.

ಪ್ರಾಕೃತಿಕ ಚಿಕಿತ್ಸಾ ಪದ್ಧತಿಯಲ್ಲಿ ಆರು ಸೂತ್ರಗಳಿವೆ. ಆಹಾರ, ವಿಹಾರ, ವಿಚಾರ, ಆಚಾರ, ವ್ಯವಹಾರ ಮತ್ತು ಅಧ್ಯಾತ್ಮ ಎಂಬ ಸೂತ್ರಗಳು ಪ್ರಕೃತಿ ಚಿಕಿತ್ಸಾ ಪದ್ಧತಿ ಬುನಾದಿಯಾಗಿದೆ. ಇವುಗಳು ರೋಗಿಗಳಲ್ಲಿ ಆತ್ಮವಿಶ್ವಾಸ ಮೂಡಿಸುತ್ತದೆ. ಅಲ್ಲದೆ, ರೋಗ ಪತ್ತೆ ಮಾಡಿ ನೈಸರ್ಗಿಕ ಚಿಕಿತ್ಸೆ ನೀಡಲಾಗುತ್ತದೆ. ಆದರೆ, ಅಲೋಪತಿ ಪದ್ಧತಿಯಲ್ಲಿ ಅಗತ್ಯಕ್ಕಿಂತ ಅನಗತ್ಯ ಪರೀಕ್ಷೆಗಳನ್ನು ಮಾಡಲಾಗುತ್ತದೆ. ಪ್ರಯೋಗ ಮತ್ತು ದೋಷ ವಿಧಾನವನ್ನು ರೋಗಿಗಳ ಮೇಲೆ ಜಾರಿ ಮಾಡಲಾಗುತ್ತದೆ. ಆದರೆ, ಪ್ರಕೃತಿ ಚಿಕಿತ್ಸೆಯಲ್ಲಿ ಇದಿಲ್ಲ ಆಧುನಿಕ ವೈದ್ಯಕೀಯ ಪದ್ಧತಿಯಿಂದ ಗುಣವಾಗದ ರೋಗಿಗಳು ಪ್ರಕೃತಿ ಚಿಕಿತ್ಸೆಯನ್ನು ಪಡೆದುಕೊಳ್ಳಲು ಬರುತ್ತಿದ್ದಾರೆ. ಚಿಕಿತ್ಸೆ, ಔಷಧ, ಟೆಸ್ಟ್‌ಗಳಿಂದ ಹಣ ಖಾಲಿ ಮಾಡಿಕೊಂಡ ರೋಗಿಗಳಲ್ಲಿ ನಕಾರಾತ್ಮಕ ಭಾವ ಮೂಡಿರುತ್ತದೆ. ಈ ರೀತಿ ನಿರಾಶಗೊಂಡ ರೋಗಿಗಗಳಿಗೆ ಪ್ರಕೃತಿ ಚಿಕಿತ್ಸೆ ಹೊಸ ಆಶಾಕಿರಣವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸರ್ಕಾರಿ ಪ್ರಕೃತಿ ಚಿಕಿತ್ಸೆ ಯೋಗ ವೈದ್ಯಕೀಯ ಮಹಾವಿದ್ಯಾಲಯದ 37 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಈ ಸಂದರ್ಭದಲ್ಲಿ ಶಿರಸಿಯ ನಿಸರ್ಗ ಮನೆಯ ಸಂಸ್ಥಾಪಕ ಡಾ.ವೆಂಕಟರಮಣ ಹೆಗಡೆ, ಕಾಲೇಜಿನ ಪ್ರಾಂಶುಪಾಲ ಡಾ.ಗಜಾನನ ಹೆಗಡೆ, ಕಾಲೇಜಿನ ವೈದ್ಯರಾದ ಡಾ.ಬಿ.ಸಿ.ನಟರಾಜ, ಡಾ.ಹರಿ ಗಣೇಶ್ ಇನ್ನಿತರರು ಉಪಸ್ಥಿತರಿದ್ದರು.

ಸಂಸ್ಕೃತೋತ್ಸವ ಕಾರ್ಯಕ್ರಮ



ಮೈಸೂರು, ಸೆ. 2– ವಿಶ್ವ ಸಂಸ್ಕೃತ ದಿನಾಚರಣೆ ಅಂಗವಾಗಿ ಮೈಸೂರಿನ ಶ್ರೀ ಗಣೇಶ ಸಂಸ್ಕೃತ ಜ್ಯೋತಿಷ ಪಾಠ ಶಾಲಾ ಮತ್ತು ವಿಶ್ವ ಪ್ರಜ್ಞ ವಿದ್ಯಾಸಂಸ್ಥೆಗಳ ಸಹಯೋಗದಲ್ಲಿ ಸಂಸ್ಕೃತೋತ್ಸವ ಕಾರ್ಯಕ್ರಮ ನಡೆಯಿತು.

ವಿಶ್ವಪ್ರಜ್ಞ ವಿದ್ಯಾಸಂಸ್ಥೆಯ ಕಾರ್ಯಾಧ್ಯಕ್ಷ ಎಂ.ಎನ್.ಕೃಷ್ಣಸ್ವಾಮಿ ಕಾರ್ಯಕ್ರಮ ಉದ್ಘಾಟಿಸಿದರು. ವಿಶ್ವಪ್ರಜ್ಞ ಶಾಲೆಯ ಮುಖ್ಯ ಶಿಕ್ಷಕಿ ಶ್ರೀಮತಿ ಜಿ.ಎನ್.ಸುಧಾ, ಡಾ॥ ಅನಂತ ನಾಗೇಂದ್ರ ಭಟ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಶಾಲೆಯ ಆಡಳಿತಾಧಿಕಾರಿ ವೆಂಕಟರಮಣ ಹೆಗಡೆ ವಹಿಸಿದ್ದರು. ಶಾಲೆಯ ಕಾರ್ಯದರ್ಶಿ ಎಲ್.ಎನ್.ಹೆಗಡೆ, ಆಡಳಿತ ಮಂಡಳಿಯ ಸದಸ್ಯರು, ಸಂಸ್ಕೃತ ಪಾಠಶಾಲೆಯ ಮುಖ್ಯೋಪಾಧ್ಯಾಯಿನಿ ಬಿ.ತುಳಸಿ, ಸಹಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸಂಸ್ಕೃತ ಪಾಠಶಾಲೆಯ ಸಂಸ್ಥಾಪಕರಾದ ನಿಗಮಾಗಮ ಪ್ರವೀಣ ಚತುಶ್ಶಾಸ್ತ್ರ ವಿದ್ವಾನ್ ಶ್ರೀ ಕೋಟ ವಾಸುದೇವ ಸೋಮಯಾಜಿ ಅವರ ಸ್ಮರಣಾರ್ಥ ಶ್ರೀಮದ್ಭಗವದ್ಗೀತಾ ಕಂಠಪಾಠ ಸ್ಪರ್ಧೆಯನ್ನು ಏರ್ಪಡಿಸಿ ವಿಜೇತರಾದ ಮಕ್ಕಳಿಗೆ ಪ್ರಶಸ್ತಿ ಪತ್ರ ಮತ್ತು ಬಹುಮಾನಗಳನ್ನು ವಿತರಿಸಲಾಯಿತು.

ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆ



ಮೈಸೂರು, ಸೆ. 2–ಮೈಸೂರಿನ ವಿಶ್ವೇಶ್ವರನಗರದಲ್ಲಿ ಅರ್ಚನಾ ರಾಜೇಶ್ ದಂಪತಿಯ ನಿವಾಸದಲ್ಲಿ 20ನೇ ವರ್ಷದ ಶ್ರೀ ರಾಘವೇಂದ್ರ ಸ್ವಾಮಿಗಳ 352ನೇ ವರ್ಷದ ಆರಾಧನಾ ಮಹೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಶ್ರದ್ಧಾ ಭಕ್ತಿಯಿಂದ ಜರುಗಿತು.

ಮುಂಜಾನೆಯಿಂದಲೇ ಸುಪ್ರಭಾತ, ರಾಘವೇಂದ್ರ ಅಷ್ಟಾಕ್ಷರಗಳ ಜಪ, ಹೋಮ, ಅಷ್ಟೋತ್ತರ ಸೇವೆಗಳು, ಪಂಚಾಮೃತ, ಹಸ್ತೋದಕ ಮಹಾಮಂಗಳಾರತಿ ಬಳಿಕ ಅನ್ನಸಂತರ್ಪಣೆ ನಡೆಯಿತು.

ಈ ಸಂದರ್ಭದಲ್ಲಿ ರಾಜೇಶ್ ಮಾತನಾಡಿ, ಕಳೆದ 20 ವರ್ಷಗಳ ಹಿಂದೆ ನಾಲ್ಕು ಜನರಿಂದ ನಾವು ರಾಘವೇಂದ್ರ ಸ್ವಾಮಿಗಳ ಪೂಜೆ ಪ್ರಾರಂಭಿಸಿದೆವು. ಇಂದು ಸಾವಿರಾರು ಜನರು ಈ ಪೂಜೆಯಲ್ಲಿ ಭಾಗಿಯಾಗಿರುವುದು ರಾಘವೇಂದ್ರ ಸ್ವಾಮಿಗಳ ಮಹತ್ವವನ್ನು ಸಾರುತ್ತವೆ. ಪೂಜೆ ಸಲ್ಲಿಸಿದ ಸಾವಿರಾರು ಜನರ ಇಷ್ಟಾರ್ಥ ಸಿದ್ಧಿ ನೆರವೇರಿದೆ ಎಂದರು.

ಗುರು ರಾಘವೇಂದ್ರ ರಾಯರು ಕಲಿಯುಗದ ಕಾಮಧೇನು. ಕಲ್ಪತರು ಎಂದೆ ಖ್ಯಾತಿ ಪಡೆದಿದ್ದಾರೆ. ನಾಲ್ಕು ಶತಮಾನದ ಹಿಂದೆಯೇ ಜನಿಸಿದ ರಾಯರು ತಿರುಪತಿ ವೆಂಕಟೇಶ್ವರರ ಕೃಪೆಯಿಂದ ಜಾತಿ ಮತ ಧರ್ಮದ ಭೇದವಿಲ್ಲದೆ ಸಕಲ ಜೀವ ರಾಶಿಗಳನ್ನು ಸಲುಹುತ್ತಿದ್ದಾರೆ, ಸಶರೀರವಾಗಿ ಬೃಂದಾವನಸ್ಥರಾಗಿರುವುದರಿಂದ ಕಂಪನ ತರಂಗ ಸ್ಪಂದನ ರಾಯರ ಪವಾಡಗಳಿಸಿದ್ದ ತಪಶಕ್ತಿಯನ್ನು ಭಕ್ತಾದಿಗಳಿಗೆ ಧಾರೆಯೆರೆದು ಕಷ್ಟಕಾರ್ಪಣ್ಯಗಳನ್ನು ನಿವಾರಿಸಿ ಕೋಟ್ಯಾಂತರ ಭಕ್ತರ ಮನೆ ಮನದಲ್ಲಿದ್ದಾರೆ ಎಂದು ಹೇಳಿದರು. ಪೂಜಾ ಕಾರ್ಯದಲ್ಲಿ ಬಡಾವಣೆಯವರೂ ಸೇರಿದಂತೆ ಸೂರ ದೂರದ ಊರುಗಳಿಂದ ನೂರಾರು ಮಹಿಳೆಯರು ಆಗಮಿಸಿದ್ದು ವಿಶೇಷವಾಗಿತ್ತು.



ರೋಟರಿ ಮೈಸೂರು ಉತ್ತರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಂಗಾಯಣ ಕಲಾವಿದೆ ಗೀತಾ ಮೊಂಟಡ್ಕ ಮಹಿಳೆ ಮತ್ತು ಕಲೆ ಬಗ್ಗೆ ಮಾತನಾಡಿ, ಮಿಮಿಕ್ರಿ ಮೂಲಕ ರಂಜಿಸಿದರು. ಅವರನ್ನು ಹಿರಿಯರಂಗಕರ್ಮಿ ರಾಜಶೇಖರ ಕದಂಬ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ರೋಟರಿ ಅಧ್ಯಕ್ಷ ಎಂ.ಕೆ.ಶ್ರೀಧರ್,ಸಹಕಾರ್ಯದರ್ಶಿ ವೀರರಾಜೇಂದ್ರ ಇದ್ದಾರೆ.

ವಿವಿಧ ಸಾಲ ಸೌಲಭ್ಯಕ್ಕೆ ಅರ್ಜಿ

ಮೈಸೂರು, ಸೆ. 2– 2023–24ನೇ ಸಾಲಿನ CHD ಯೋಜನೆಯ ತೋಟಗಾರಿಕೆಯಲ್ಲಿ ವಿನೂತನ ತಂತ್ರಜ್ಞಾನ ಮತ್ತು ಯಾಂತ್ರೀಕರಣ ಕಾರ್ಯಕ್ರಮವನ್ನು ಮೈಸೂರು ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಯಂತ್ರೋಪಕರಣಗಳನ್ನು ಖರೀದಿಸಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.50 ರಂತೆ ಸಹಾಯಧನವನ್ನು ಹಾಗೂ ಸೋಲಾರ್ ಪಂಪ್‌ಸೆಟ್ ಖರೀದಿಸಲು ಸಾಮಾನ್ಯ ವರ್ಗದವರಿಗೆ ಶೇ.40 ರಂತೆ ಹಾಗೂ ಸಣ್ಣ, ಅತಿ ಸಣ್ಣ, ಮತ್ತು ಸಾಮಾನ್ಯ ಮಹಿಳಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ. 50 ರಂತೆ ಸಹಾಯಧನವನ್ನು ನೀಡಲಾಗುತ್ತಿದೆ.

ಸೌರಶಕ್ತಿ ಆಧರಿತ 3HP ಸೋಲಾರ್ ಪಂಪ್‌ಸೆಟ್‌ಗಳಿಗೆ ಘಟಕ ವೆಚ್ಚ 2 ಲಕ್ಷಗಳ ಶೇ.50 ರಂತೆ 1 ಲಕ್ಷಗಳಿಗೆ ಮಿತಗೊಳಿಸಿ ಸಹಾಯಧನ ನೀಡಲಾಗುವುದು ಹಾಗೂ 5HPಗಿಂತ ಮೇಲ್ಪಟ್ಟ ಸೋಲಾರ್ ಪಂಪ್‌ಸೆಟ್‌ಗಳಿಗೆ ಘಟಕ ವೆಚ್ಚ 3 ಲಕ್ಷಗಳನ್ನು ಶೇ.50 ರಂತೆ 1.50 ಲಕ್ಷಗಳಿಗೆ ಮಿತಗೊಳಿಸಿ ಸಹಾಯಧನವನ್ನು ನೀಡಲಾಗುವುದು. ರೈತರು ಅನುಮೋದಿತ ಸಂಸ್ಥೆಯಿಂದ ಸೋಲಾರ್ ಪಂಪ್‌ಸೆಟ್‌ಗಳನ್ನು ಖರೀದಿಸುವುದು ಕಡ್ಡಾಯವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಮೈಸೂರು ಜಿಲ್ಲಾ ಪಂಚಾಯತ್, ಮೈಸೂರು ತಾಲೂಕು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ದೂ.ಸಂ: 0821–2430450, ಹೆಚ್.ಡಿ.ಕೋಟೆ ತಾಲೂಕು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ದೂ.ಸಂ:08228–255261, ಹುಣಸೂರು ತಾಲೂಕು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ದೂ.ಸಂ: 08222–252447, ಕೆ. ಆರ್ ನಗರ ತಾಲೂಕು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ದೂ.ಸಂ: 08223–262791, ನಂಜನಗೂಡು ತಾಲೂಕು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ದೂ.ಸಂ: 08221–226201, ಪಿರಿಯಾಪಟ್ಟಣ ತಾಲೂಕು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ದೂ.ಸಂ: 08223–273535, ಟಿ. ನರಸೀಪುರ ತಾಲೂಕು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ದೂ.ಸಂ: 08227–260086 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಪಂಚಾಯತ್‌ನ ತೋಟಗಾರಿಕೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಾಕುಬೇರ ಯಾಗ

ಮೈಸೂರು, ಸೆ.2(ಎಂಟಿವೈ)–ಅಖಿಲ ಭಾರತ ಸಂಪೂರ್ಣ ಮಹಾ ಕುಬೇರ ಯಾಗ ಸಮಿತಿ ವತಿಯಿಂದ ಇದೇ ಸೆ. 11 ರಿಂದ 21 ರವರೆಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿನ ತ್ರಿಪುರ ವಾಸಿನಿಯಲ್ಲಿ ಅಖಿಲ ಲೋಕ ಕಲ್ಯಾಣಾರ್ಥವಾಗಿ ಅಖಿಲ ಭಾರತ ಸಂಪೂರ್ಣ ಮಹಾ ಕುಬೇರ ಯಾಗ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಸೋಮಶೇಖರ ಗಾಂಧಿ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸ್ತುತ ಸನ್ನಿವೇಶದಲ್ಲಿ ನಮ್ಮ ದೇಶದಲ್ಲಿ ನಾಗರಿಕರಿಗೆ ಆರ್ಥಿಕ ಸಮಸ್ಯೆ ಉಲ್ಬಣಿಸಿದೆ. ಹೀಗಾಗಿ ಈ ಯಾಗ ದೊಡ್ಡ ವರದಾನವಾಗಲಿದೆ. ಕುಬೇರ ಯಾಗದಲ್ಲಿ ಪಾಲ್ಗೊಳ್ಳುವುದರಿದಂದ ಹಣಕಾಸಿನ ಸಮಸ್ಯೆಗೆ ಪರಿಹಾರ ಸಿಗಲಿದೆ. ಹೀಗಾಗಿ ಸಾರ್ವಜನಿಕರು ಸಹ ಶುಲ್ಕ ಪಾವತಿಸಿ ಪ್ಲಾಟಿನಂ, ಗೋಲ್ಡ್, ಬ್ರಾನ್ಜ್, ಡೈಮಂಡ್, ಸಿಲ್ವರ್ ಹಾಗೂ ರಾಶಿ ಸಂಕಲ್ಪ ಸೇವೆಯಲ್ಲಿ ಪಾಲ್ಗೊಳ್ಳಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಪುಟ್ಟಸ್ವಾಮಿ, ಉಮೇಶ್, ಸದಾಶಿವ, ಉಮಾಶಂಕರ ಇದ್ದರು.

ಪಿಡಿಓ, ಎಫ್‌ಡಿಎ, ಎಸ್‌ಡಿಎ ಸ್ಪರ್ಧಾತ್ಮಕ ಪರೀಕ್ಷೆಯ ತರಬೇತಿ ಶಿಬಿರಕ್ಕೆ ಚಾಲನೆ

ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಯಾದರೂ ಗೈಡ್ ಅವಲಂಬಿಸದೇ ಸುದ್ದಿಪತ್ರಿಕೆ ಓದಬೇಕು

ಶಿಬಿರಾರ್ಥಿಗಳಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಲಹೆ



ಮೈಸೂರಿನ ಮುಕ್ತ ಗಂಗೋತ್ರಿಯ ಕಾವೇರಿ ಸಭಾಂಗಣದಲ್ಲಿ ಶನಿವಾರ ಸ್ಪರ್ಧಾತ್ಮಕ ಪರೀಕ್ಷೆಗಳ 45 ದಿನಗಳ ತರಬೇತಿ ಶಿಬಿರಕ್ಕೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಚಾಲನೆ ನೀಡಿದರು.

ಮೈಸೂರು,ಸೆ.2(ಪಿಎಂ)– ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಯಾದರೂ ಗೈಡ್‌ಗಳನ್ನು ಅವಲಂಬಿಸದೇ ಪ್ರತಿದಿನ 2ರಿಂದ 3 ಗಂಟೆ ಕಾಲ ಸುದ್ದಿಪತ್ರಿಕೆ ಓದಬೇಕು. ಇಲ್ಲವಾದರೆ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ಸು ಗಳಿಸಲು ಸಾಧ್ಯವಿಲ್ಲ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಹೇಳಿದರು.

ಮೈಸೂರಿನ ಮುಕ್ತ ಗಂಗೋತ್ರಿಯ ಕಾವೇರಿ ಸಭಾಂಗಣದಲ್ಲಿ ಶನಿವಾರ ಪಿಡಿಓ, ಎಫ್‌ಡಿಎ ಮತ್ತು ಎಸ್‌ಡಿಎ ಸ್ಪರ್ಧಾತ್ಮಕ ಪರೀಕ್ಷೆ ಸಂಬಂಧ ರಾಜ್ಯ ಮುಕ್ತ ವಿವಿಯ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಹಮ್ಮಿಕೊಂಡಿರುವ 45 ದಿನಗಳ ತರಬೇತಿ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಗಳಾದರೂ ಪ್ರತಿನಿತ್ಯ ಸುದ್ದಿ ಪತ್ರಿಕೆಗಳನ್ನು ಓದುವ ಅಭ್ಯಾಸ ಹೊಂದಬೇಕು. ಬಹುತೇಕ ಮಂದಿ ಗೈಡ್ ಅವಲಂಬಿಸುವುದೇ ಹೆಚ್ಚು. ಆದರೆ ಇದರಿಂದ ನಮಗೆ ಯಶಸ್ಸು ದೊರೆಯಲು ಸಾಧ್ಯವಿಲ್ಲ. ಬಹುತೇಕ ಮಂದಿ ಸೂಕ್ತ ಮಾರ್ಗದರ್ಶನ ಇಲ್ಲದೇ ಸರಳವಾಗಿರುವ ಪರೀಕ್ಷೆಯನ್ನು ಕ್ಲಿಷ್ಟ ಮಾಡಿಕೊಳ್ಳುವುದೇ ಹೆಚ್ಚು ಎಂದರು.

ಸುದ್ದಿಪತ್ರಿಕೆಗಳಲ್ಲಿ ಪ್ರಸಕ್ತ ವಿದ್ಯಮಾನಗಳ ಬಗ್ಗೆ ಮಾಹಿತಿ ಕಲೆ ಹಾಕಬೇಕು. ಉದಾಹರಣೆಗೆ ಚಂದ್ರಯಾನ–3ರ ಬಗ್ಗೆ ಓದಿ ತಿಳಿದುಕೊಳ್ಳಬೇಕು. ಅಷ್ಟಕ್ಕೆ ಸೀಮಿತವಾಗದೇ ಅದಕ್ಕೆ ಪೂರಕವಾಗಿಯೂ ಅಂತರ್ಜಾಲ ಸೇರಿದಂತೆ ಮತ್ತಿತರ ಮೂಲಗಳಿಂದ ಹೆಚ್ಚಿನ ಮಾಹಿತಿ ಕಲೆ ಹಾಕಿಕೊಳ್ಳಬೇಕು. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಪ್ರಸ್ತುತದ ಘಟನಾವಳಿಗಳನ್ನು ತಿಳಿದುಕೊಳ್ಳಬೇಕು ಎಂದು ತಿಳಿಸಿದರು.

ಕೇವಲ ಸಿದ್ಧ ಸಾಮಗ್ರಿಗಳನ್ನೇ ಓದುವುದರಿಂದ ಪ್ರಶ್ನೆಗಳನ್ನು ಬದಲಾವಣೆ ಮಾಡಿದ್ದರೆ ಅದಕ್ಕೆ ಉತ್ತರ ಕೊಡುವ ಜಾಣ್ಮೆ ಹೊಳೆಯುವುದಿಲ್ಲ. ವಿಷಯಕ್ಕೆ ಸಂಬಂಧಿಸಿದಂತೆ ಅಂಶಗಳನ್ನು ಪಟ್ಟಿ ಮಾಡಿಕೊಂಡು ಅಂತರ್ಜಾಲದ ಮೂಲಕ ಉತ್ತರ ಪಡೆದುಕೊಳ್ಳಬೇಕು.

ಅಂತರ್ಜಾಲದಲ್ಲಿ ದಿಕ್ಕು ತಪ್ಪಿಸುವ ವಿಚಾರಗಳ ಬಗ್ಗೆ ಜಾಗೃತಿ ವಹಿಸಬೇಕು. ಆ ಮೂಲಕ ಅದರ ಸದ್ಬಳಕೆ ಬಗ್ಗೆ ಗಮನ ನೀಡಬೇಕು ಎಂದು ಹೇಳಿದರು. ಅಂತರ್ಜಾಲದ ಸದ್ಬಳಕೆ ಮೂಲಕ ಸೂಕ್ತ ರೀತಿಯಲ್ಲಿ ಅಧ್ಯಯನ ಸಾಮಗ್ರಿ ಸಿದ್ಧಪಡಿಸಿಕೊಂಡರೆ, ಯಾವುದೇ ತರಬೇತಿ ಅಗತ್ಯವಿಲ್ಲ. ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಸಾಧ್ಯವಿಲ್ಲ ಎಂಬ ತಪ್ಪು ಕಲ್ಪನೆಗಳನ್ನು ಬಿಡಬೇಕು. ನಮ್ಮ 2013ರ ಐಎಎಸ್ ಬ್ಯಾಚ್‌ನ 180 ಮಂದಿ ಪೈಕಿ ಶೇ.60ರಷ್ಟು ಗ್ರಾಮೀಣ ಹಿನ್ನೆಲೆ ಹಾಗೂ ಪ್ರಾದೇಶಿಕ ಭಾಷಾ ಮಾಧ್ಯಮದವರೇ ಆಗಿದ್ದರು ಎಂದರು.

ನಕಾರಾತ್ಮಕ ಚಿಂತನೆಗಳನ್ನು ಬಿಡಬೇಕು. ಯಾರೂ ಏನೇ ಹೇಳಿದರೂ ವಿಚಲಿತರಾಗಬಾರದು. ಎಂದೂ ಕನಸುಗಳಿಗೆ ಬೇಲಿ ಹಾಕಿಕೊಳ್ಳಬಾರದು. ಕನಸುಗಳನ್ನು ಈಡೇರಿಸಿಕೊಳ್ಳಲು ರೂಪುರೇಷೆ ಸಿದ್ಧಪಡಿಸಿಕೊಳ್ಳುವುದನ್ನು ಕಲಿಯಬೇಕು. ಶಿಸ್ತಿನ ಪ್ರರಿಶ್ರಮ ಇದ್ದರೆ ಯಶಸ್ಸು ಸಾಧಿಸಬಹುದು. ಪರೀಕ್ಷೆಗೆ ಸಂಬಂಧಿಸಿದಂತೆ ಹಿಂದಿನ ವರ್ಷಗಳ ಪ್ರಶ್ನೆ ಪತ್ರಿಕೆ, ಪಠ್ಯಕ್ರಮ ಅಧ್ಯಯನ ಹಾಗೂ ಪ್ರಸ್ತುತ ಸಮಾಜದ ಪ್ರವೃತ್ತಿ ವಿಶ್ಲೇಷಣೆ ಮಾಡುವುದು ಬಹುಮುಖ್ಯ. ಉತ್ತರ ಬರೆಯುವ ಅಭ್ಯಾಸ ಮಾಡಬೇಕು ಎಂದು ಹೇಳಿದರು.

ಕಬಿನಿ ಜಲಾಶಯ ಯೋಜನೆ ವಿಶೇಷ ಭೂ ಸ್ವಾಧೀನಾಧಿಕಾರಿ ಬಿ.ಸುಪ್ರಿಯ ಬಾಣಗಾರ್ ಮಾತನಾಡಿ, ಯಶಸ್ಸು ಗಳಿಸುವ ಆತ್ಮ ವಿಶ್ವಾಸ ಮುಖ್ಯ. ಎಷ್ಟು ಓದಿದರೂ ಪಠ್ಯಕ್ರಮ ಪೂರ್ಣಗೊಳಿಸಲಾಗದು ಅನ್ನಿಸಬಹುದು. ಆ ಸಂದರ್ಭದಲ್ಲಿ ನಿಮ್ಮ ತಂದೆ–ತಾಯಿ ಪರಿಶ್ರಮ ನೆನಪು ಮಾಡಿಕೊಳ್ಳಿ ಎಂದು ಶಿಬಿರಾರ್ಥಿಗಳಿಗೆ ಕಿವಿಮಾತು ಹೇಳಿದರು.

> ನಾನು ಮಾಡಬಲ್ಲೇ ಅಂದರೆ ಯಶಸ್ಸು ಲಭಿಸಲಿದೆ. ಸಾಧ್ಯವಿಲ್ಲ ಎಂದು ಕೈಚೆಲ್ಲಿದರೆ ಸ್ವತಃ ಸೋಲು ಒಪ್ಪಿಕೊಂಡಂತೆ. ಎಂದೂ ಆ ತಪ್ಪು ಮಾಡಬಾರದು. ಕೆಲವೊಮ್ಮೆ ವಿಫಲವಾದರೂ ಅದನ್ನೇ ಸವಾಲಾಗಿ ಸ್ವೀಕರಿಸಿ, ಸತತ ಪರಿಶ್ರಮ ವಹಿಸುವುದು ಮುಖ್ಯ. ಧನಾತ್ಮಕ ಚಿಂತನೆ ಬೆಳೆಸಿಕೊಳ್ಳಬೇಕು. ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಯಾದರೂ ನಮ್ಮ ಸಂವಿಧಾನಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳು ಇದ್ದೇ ಇರುತ್ತವೆ.
> –ಬಿ.ಸುಪ್ರಿಯ ಬಾಣಗಾರ್, ವಿಶೇಷ ಭೂ ಸ್ವಾಧೀನಾಧಿಕಾರಿ, ಕಬಿನಿ ಜಲಾಶಯ ಯೋಜನೆ

ರಾಜ್ಯದ ವಿವಿಧ ಭಾಗಗಳಿಂದ ಸುಮಾರು 400 ಶಿಬಿರಾರ್ಥಿಗಳು ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ ಎಂದು ಇದೇ ವೇಳೆ ವಿವಿಯ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ಮಾಹಿತಿ ನೀಡಿದರು. ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅಧ್ಯಕ್ಷತೆ ವಹಿಸಿದ್ದರು. ವಿವಿ ಕುಲಸಚಿವ ಪ್ರೊ.ಕೆ.ಎಲ್.ಎನ್.ಮೂರ್ತಿ, ಪರೀಕ್ಷಾಂಗ ಕುಲಸಚಿವ ಕೆ.ಬಿ.ಪ್ರವೀಣ್, ಡೀನ್ ರಾಮನಾಥಂ ನಾಯ್ದು, ಹಣಕಾಸು ಅಧಿಕಾರಿ ಡಾ.ಎ.ಖಾದರ್ ಪಾಷ ಮತ್ತಿತರರು ಹಾಜರಿದ್ದರು.

ವಿದ್ಯಾರ್ಥಿಗಳಿಗೆ ಸಸ್ಯ ನೀಡಿ, ವೃಕ್ಷ ಸಂರಕ್ಷಣೆಯ ಅರಿವು



ಮೈಸೂರು, ಸೆ.2(ಪಿಎಂ)– ಸರಸ್ವತಿಪುರಂನ ಜ್ಞಾನೋದಯ ಪದವಿ ಪೂರ್ವ ಕಾಲೇಜಿನಲ್ಲಿ ಜಿಎಸ್‌ಎಸ್ ಫೌಂಡೇಷನ್ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ 'ವೃಕ್ಷ ರಕ್ಷಾ ಬಂಧನ' ವಿನೂತನ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ವೃಕ್ಷಗಳ ಸಂರಕ್ಷಣೆ ಕುರಿತು ಅರಿವು ಮೂಡಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಿಎಸ್‌ಎಸ್ ಫೌಂಡೇಶನ್ ಸಂಸ್ಥಾಪಕ ಡಿ.ಶ್ರೀಹರಿ, ಮನೆ ಮನೆಯಲ್ಲಿ ನರ್ಸರಿ ಹಾಗೂ ದೇವರ ಕಾಡು ಪರಿಕಲ್ಪನೆಯ ಮೂಲಕ ವೃಕ್ಷಗಳ ಪೋಷಣೆ ಮಾಡಬೇಕೆಂದು ಕಿವಿಮಾತು ಹೇಳಿದರು.

ವಿದ್ಯಾರ್ಥಿಗಳು ಪರಿಸರದ ಬಗ್ಗೆ ಕಾಳಜಿ ವಹಿಸಬೇಕೆಂದು ಸಲಹೆ ನೀಡಿದರಲ್ಲದೆ, ಪ್ರತಿ ವಿದ್ಯಾರ್ಥಿಗೂ ಒಂದೊಂದು ಗಿಡ ನೀಡಿ, ಅದನ್ನು ಒಂದು ವರ್ಷದವರೆಗೆ ಪೋಷಿಸಿ, ಹಿಂದಿರುಗಿಸಿದರೆ ಸಾರ್ವಜನಿಕ ಸ್ಥಳಗಳಲ್ಲಿ ನೆಡುವುದಾಗಿ ತಿಳಿಸಿದರು.

ಕಾಲೇಜಿನ ಕಾರ್ಯದರ್ಶಿ ಎಸ್.ಕೆ. ಭಾಸ್ಕರ್ ಮಾತನಾಡಿ, ನಮ್ಮಿಂದ ಮರಗಳಲ್ಲ, ಬದಲಿಗೆ ಮರಗಳಿಂದ ನಾವು ಎಂಬ ಸತ್ಯವನ್ನು ಪ್ರತಿಯೊಬ್ಬರು ಅರಿಯಬೇಕು. 'ವೃಕ್ಷೋ ರಕ್ಷತಿ ರಕ್ಷಿತಃ' ಎಂಬುದರ ಸಾರ ತಿಳಿದುಕೊಂಡರೆ ವೃಕ್ಷಗಳ ಮಹತ್ವ ಗೊತ್ತಾಗುತ್ತದೆ ಎಂದು ನುಡಿದರು. ಜಿಎಸ್‌ಎಸ್ ಫೌಂಡೇಷನ್‌ನ ಗೀತಾ ಶ್ರೀಹರಿ, ರೂಪಶ್ರೀ ಸೇರಿದಂತೆ ಕಾಲೇಜು ಸಿಬ್ಬಂದಿ ಹಾಜರಿದ್ದರು.

ಇಂದು ಮೈಸೂರು ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ 20 ಕೋಟಿ ಸಹಸ್ರನಾಮ ಸಮರ್ಪಣಾ ಕಾರ್ಯಕ್ರಮ

ಮೈಸೂರು, ಸೆ.2(ಎಂಟಿವೈ)– ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ನಾಳೆ (ಭಾನುವಾರ) ಬೆಳಗ್ಗೆ 11ಕ್ಕೆ 20 ಕೋಟಿ ವಿಷ್ಣು ಸಹಸ್ರನಾಮ ಸಮರ್ಪಣಾ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಭೆಯು ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮವನ್ನು ಮೈಸೂರು ನಗರ ಹಾಗೂ ಜಿಲ್ಲಾ ಬ್ರಾಹ್ಮಣ ಸಂಘ ಹಾಗೂ ಕೋಟಿ ವಿಷ್ಣು ಸಹಸ್ರನಾಮ ಪಾರಾಯಣ ಸಮಿತಿ ವತಿಯಿಂದ ಆಯೋಜಿಸಲಾಗಿದೆ. ಶಾಸಕ ಟಿ.ಎಸ್.ಶ್ರೀವತ್ಸ, ವಿದ್ಯಾವಾಚಸ್ಪತಿ ಡಾ. ಅರಳು ಮಲ್ಲಿಗೆ ಪಾರ್ಥಸಾರಥಿ, ಆಧ್ಯಾತ್ಮಿಕ ಚಿಂತಕ ಡಾ.ಮುಕುಂದನ್ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದು ವಿವರಿಸಿದರು.

ವಿಪ್ರ ವಾಣಿಜ್ಯೋದ್ಯಮಿಗಳ ಸಭೆ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ವ್ಯಾಪಾರ ಮತ್ತು ವಾಣಿಜ್ಯೋದ್ಯಮ ವಿಭಾಗದ ವತಿಯಿಂದ ಸೆ.3ರಂದು ಮಧ್ಯಾಹ್ನ 3ಗಂಟೆಗೆ ಮೈಸೂರಿನ ಶ್ರೀಕೃಷ್ಣಧಾಮದಲ್ಲಿ ಜಿಲ್ಲಾ ಬ್ರಾಹ್ಮಣ ಸಂಘ ಸಂಸ್ಥೆಗಳ ಆಶ್ರಯದಲ್ಲಿ ವಿಪ್ರ ವಾಣಿಜ್ಯೋದ್ಯಮಿಗಳ ಸಮಾಲೋಚನಾ ಸಭೆ ಆಯೋಜಿಸಲಾಗಿದೆ. ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ನೇತೃತ್ವದಲ್ಲಿ ನಡೆಯಲಿದ್ದು, ವಿಪ್ರ ವಾಣಿಜ್ಯೋದ್ಯಮಿಗಳ ಸ್ಥಿತಿಗತಿ ಬಗ್ಗೆ ಚರ್ಚೆ ನಡೆಯಲಿದೆ. ಅ.8ರಂದು ಬೆಂಗಳೂರಿನಲ್ಲಿ ನಡೆಯುವ ರಾಜ್ಯ ಮಟ್ಟದ ವ್ಯಾಪಾರ ಮತ್ತು ವಾಣಿಜ್ಯೋದ್ಯಮಿಗಳ ಸಮಾವೇಶ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ವಿಪ್ರ ಮುಖಂಡರಾದ ಗೋಪಾಲರಾವ್, ಹರೀಶ್, ಡಾ. ಲಕ್ಷ್ಮೀ, ಸುಚೀಂದ್ರ, ಜ್ಯೋತಿ ಇದ್ದರು.

ಬಡವರಿಗೆ ಸಿಲಿಂಡರ್ ಉಚಿತವಾಗಿ ನೀಡಿ: ಕೆಪಿಸಿಸಿ ಮುಖಂಡನ ಆಗ್ರಹ

ಮೈಸೂರು, ಸೆ. 2– ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ದೇಶದ ಬಡವರ ಬಗ್ಗೆ ನಿಜವಾದ ಕಾಳಜಿ ಇದ್ದರೆ ಅಡುಗೆ ಅನಿಲದ ಸಿಲಿಂಡರ್ ಉಚಿತವಾಗಿ ನೀಡಬೇಕು. ಇಂಧನ ಹಾಗೂ ಅಗತ್ಯ ವಸ್ತುಗಳ ಬೆಲೆ ಇಳಿಕೆ ಮಾಡಬೇಕು ಎಂದು ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್ ಆಗ್ರಹಿಸಿದ್ದಾರೆ.

ಒಂಬತ್ತು ವರ್ಷಗಳಿಂದ ಬಡ ಹಾಗೂ ಮಧ್ಯಮ ವರ್ಗದ ಜನರನ್ನು ಬಿಜೆಪಿ ಕಡೆಗಣಿಸಿದೆ. ಅಂಬಾನಿ, ಅದಾನಿ ಸೇರಿ ಕಾರ್ಪೊರೇಟ್ ಕಂಪನಿಗಳ ಪರವಾಗಿ ಆಡಳಿತ ನೀಡಿದೆ. ಚುನಾವಣೆ ಸಮೀಪಿಸುತ್ತಿದ್ದಂತೆ ಮತದಾರರ ಒಲವು ಗಿಟ್ಟಿಸಿಕೊಳ್ಳಲು ಗಿಮಿಕ್‌ಗಳನ್ನು ಮಾಡತೊಡಗಿದೆ. ಇದನ್ನು ಜನರು ಅರ್ಥ ಮಾಡಿಕೊಳ್ಳಲಿದ್ದಾರೆ. ಕರ್ನಾಟಕದಲ್ಲಿ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ರಚನೆಯಾಗಿ 100 ದಿನ ಪೂರೈಸಿದೆ. ಪಕ್ಷ ಜನರಿಗೆ ನೀಡಿದ ಐದು ಗ್ಯಾರಂಟಿಗಳ ಪೈಕಿ ನಾಲ್ಕನ್ನು ಫಲಾನುಭವಿಗಳಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದೆ. ಗೃಹಲಕ್ಷ್ಮಿ ಯೋಜನೆಗೆ ಚಾಲನೆ ನೀಡಿದ ಸರ್ಕಾರ, ಮಹಿಳೆಯರಿಗೆ ಬಲ ತುಂಬುವ ಕೆಲಸ ಮಾಡಿದೆ. ಕಾಂಗ್ರೆಸ್‌ನ ಗ್ಯಾರಂಟಿಗಳ ಮಧ್ಯೆ ಬಿಜೆಪಿ ಕಳೆದು ಹೋಗಿದೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಮತದಾರರು ತಕ್ಕ ಪಾಠ ಕಲಿಸಲಿದ್ದಾರೆ ಎಂದು ಹೇಳಿದ್ದಾರೆ.



ನಂಜನಗೂಡು ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಕಬಡ್ಡಿ ವಿಭಾಗದಲ್ಲಿ ನಂಜನಗೂಡು ಬಾಲಕರ ಸರ್ಕಾರಿ ಪದವಿಪೂರ್ವ ಕಾಲೇಜು ತಂಡ ಪ್ರಶಸ್ತಿ ಪಡೆಯಿತು. ಚಿತ್ರದಲ್ಲಿ ಪ್ರಾಂಶುಪಾಲ ಸಿ.ಆರ್ ದಿನೇಶ್, ಉಪನ್ಯಾಸಕರಾದ ಜುಡಿತ್ ಸಿಕ್ವೆರಾ ಲಿಂಗಣ್ಣ ಸ್ವಾಮಿ, ರಂಗಸ್ವಾಮಿ, ನಾಗರಾಜ್, ಆದಿಲ್ ಹುಸೇನ್, ಗೋಪಾಲಕೃಷ್ಣ, ಸದಾನಂದ, ನಾಗವೇಣಿ, ಪೋಷಕರಾದ ಸಾದಿಕ್ ಪಾಷಾ, ನಂಜುಂಡ ಸ್ವಾಮಿ, ನಾಯಕ ಉಸ್ಮಾನ್ ಇದ್ದಾರೆ.

ಪ್ರತಿಭಾ ಕಾರಂಜಿಯಲ್ಲಿ ಮಿಂಚಿದ ಸುತ್ತೂರು ಜೆಎಸ್‌ಎಸ್ ವಿದ್ಯಾರ್ಥಿಗಳು



ಸುತ್ತೂರು, ಸೆ.2 ನಂಜನಗೂಡಿನ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ವತಿಯಿಂದ ತಾಯೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಏರ್ಪಡಿಸಿದ್ದ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಸುತ್ತೂರಿನ ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾಗಿದ್ದಾರೆ.

1 ರಿಂದ 4ನೇ ತರಗತಿ ವೈಯಕ್ತಿಕ ಸ್ಪರ್ಧೆ: ವಿದ್ಯಾರ್ಥಿಗಳಾದ ಲಾವಣ್ಯ ಎಸ್.ಎನ್–ಕನ್ನಡ ಕಂಠಪಾಠ ಸ್ಪರ್ಧೆ, ಪರಿಣಿಕ ಎಂ–ಧಾರ್ಮಿಕ ಪಠಣ (ಸಂಸ್ಕೃತ), ಗಾನವಿ ವಿ– ಕಥೆ ಹೇಳುವುದು, ಭಕ್ತಿಗೀತೆ, ತನ್ವಿತ ಎಸ್.–ಅಭಿನಯ ಗೀತೆ, ಲಘು ಸಂಗೀತ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. ಸಾನ್ವಿ ದೊರೆ – ಛದ್ಮವೇಷ, ಪ್ರಣತಿ ಆರ್–ಆಶುಭಾಷಣ, ಗಾನವಿ ವಿ–ಭಕ್ತಿಗೀತೆ ಸ್ಪರ್ಧೆಗಳಲ್ಲಿ ತೃತೀಯ ಸ್ಥಾನ ಗಳಿಸಿದ್ದಾರೆ.

5 ರಿಂದ 7ನೇ ತರಗತಿ ವೈಯಕ್ತಿಕ ಸ್ಪರ್ಧೆ: ಚಂದನಾ ಟಿ.ಎಂ.ಕನ್ನಡ ಕಂಠಪಾಠ, ಭಕ್ತಿಗೀತೆ ಪ್ರತೀಕ ಪಿ.ಜಾದವ್–ಇಂಗ್ಲಿಷ್ ಕಂಠಪಾಠ, ಸಹನಾ ಬಿ.ಹೆಚ್–ಲಘು ಸಂಗೀತ, ಕಥೆ ಹೇಳುವುದು, ಭರತ್–ಚಿತ್ರಕಲೆ ಸ್ಪರ್ಧೆ, ನಿತಿನ್‌ಗೌಡ–ಮಿಮಿಕ್ರಿ, ಸುಪ್ರಿತ ಎನ್.ಸಿ–ಕವನ ವಾಚನ ಪ್ರಥಮ, ರಕ್ಷಿತ–ಹಿಂದಿ ಕಂಠಪಾಠ, ಹನಿಕ ಯು–ಧಾರ್ಮಿಕ ಪಠಣ, ಸಂಸ್ಕೃತ, ಸಿಂಚನಾ ಎಸ್–ಛದ್ಮವೇಷ, ನಾಗರಾಜು–ಕ್ಲೇಮಾಡೆಲಿಂಗ್‌ನಲ್ಲಿ ದ್ವಿತೀಯ, ರೋಜಾ–ಅಭಿನಯ ಗೀತೆ, ಹಂಸಿಕ. ಯು–ಆಶುಭಾಷಣ ಸ್ಪರ್ಧೆಗಳಲ್ಲಿ ತೃತೀಯ ಸ್ಥಾನ ಗಳಿಸಿದ್ದಾರೆ.

ಮೈಸೂರಿನ ವಿವಿಧ ಪರೀಕ್ಷಾ ಕೇಂದ್ರದ ಸುತ್ತಾ ನಿಷೇಧಾಜ್ಞೆ ಜಾರಿ

ಮೈಸೂರು, ಸೆ. 2– ಮಹಾರಾಜ ಪದವಿ ಪೂರ್ವ ಕಾಲೇಜು, ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜು, ಮರಿಮಲ್ಲಪ್ಪ ಪದವಿ ಪೂರ್ವ ಕಾಲೇಜು, ಒಂಟಿಕೊಪ್ಪಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ NDA, NA(II) ಪರೀಕ್ಷೆ ಮತ್ತು CDS (II) ಪರೀಕ್ಷೆಗಳು ನಡೆಯಲಿದ್ದು, ಸದರಿ ಪರೀಕ್ಷಾ ಕೇಂದ್ರಗಳ ಸುತ್ತಲೂ ಇನ್ನೂರು ಮೀಟರ್ ವ್ಯಾಪ್ತಿಯಲ್ಲಿ ಸೆಪ್ಟೆಂಬರ್ 3 ರಂದು ಬೆಳಿಗ್ಗೆ 06 ಗಂಟೆಯಿಂದ ಸಂಜೆ 06 ಗಂಟೆಯವರೆಗೆ ಕಲಂ 144 ಸಿ.ಆರ್.ಪಿ.ಸಿ ಅನ್ವಯ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಾಗೆಯೇ, ಸೆ.3ರಂದು ಶಿಕ್ಷಕರ ಅರ್ಹತಾ ಪರೀಕ್ಷೆ(ಟಿಇಟಿ) ನಡೆಯಲಿದ್ದು, ಮಹಾರಾಣಿ ಪ್ರೌಢಶಾಲೆ, ಕರ್ನಾಟಕ ಪಬ್ಲಿಕ್ ಸ್ಕೂಲ್ ಕುವೆಂಪುನಗರ, ಕರ್ನಾಟಕ ಪಬ್ಲಿಕ್ ಸ್ಕೂಲ್ ರಾಜೇಂದ್ರನಗರ, ಮಹಾಜನ ಪ್ರೌಢಶಾಲೆ ಜಯಲಕ್ಷ್ಮಿಪುರಂ, ಸರ್ಕಾರಿ ಮಹಿಳಾ ಪದವಿ ಪೂರ್ವ ಕಾಲೇಜು ನಜರ್‌ಬಾದ್, ಸರ್ಕಾರಿ ವಿಭಜಿತ ಮಹಾರಾಜ ಪದವಿ ಪೂರ್ವ ಕಾಲೇಜು ನಜರ್‌ಬಾದ್, ಸರ್ಕಾರಿ ಆದರ್ಶ ವಿದ್ಯಾಲಯ ಜಾಕಿ ಕ್ವಾಟ್ರಸ್, ಅವಿಲ ಕಾನ್ವೆಂಟ್, ಸೆಂಟ್ ಮೇರಿಸ್ ಪ್ರೌಢಶಾಲೆ ಚಾಮುಂಡಿಪುರಂ, ಬನುಮಯ್ಯ ಬಾಲಕರ ಪ್ರೌಢಶಾಲೆ, ನಿರ್ಮಲ ಪ್ರೌಢಶಾಲೆ ವಿವಿ ಮೊಹಲ್ಲಾ, ಗುಡ್ ಶೆಫರ್ಡ್ ಕಾನ್ವೆಂಟ್ ಪ್ರೌಢಶಾಲೆ, ಸೆಂಟ್ ಫಿಲೋಮಿನಾ ಪ್ರೌಢಶಾಲೆ, ಸೆಂಟ್ ಅನ್ ಪ್ರೌಢಶಾಲೆ, ಟೆರಿಷಿಯನ್ ಕಾನ್ವೆಂಟ್ ಪ್ರೌಢಶಾಲೆ ಸೆಂಟ್ ಥಾಮಸ್ ಪ್ರೌಢಶಾಲೆ, ಜೆ.ಎಸ್.ಎಸ್ ಪ್ರೌಢಶಾಲೆ ನಚ್ಚನಹಳ್ಳಿ, ಸೇಂಟ್ ರೋಸ್ಸೆಲೋ ಕಾನ್ವೆಂಟ್ ಪ್ರೌಢಶಾಲೆ, ಚೈತ್ರ ಪ್ರೌಢಶಾಲೆ, ನಿರ್ಮಲಾ ಪ್ರೌಢಶಾಲೆ, ಜ್ಞಾನಗಂಗಾ ಶಾಲೆ, ಜೆ.ಎಸ್.ಎಸ್ ಬಾಲಕಿಯರ ಪ್ರೌಢಶಾಲೆ ಸರಸ್ವತಿಪುರಂ, ಶ್ರೀ ಗಣಪತಿ ಸಚ್ಚಿದಾನಂದ ವಿದ್ಯಾಸಂಸ್ಥೆ ಪ್ರೌಢಶಾಲೆ, ವಿಜಯ ವಿಠಲ, ಜೆ.ಎಸ್.ಎಸ್ ಪ್ರೌಢಶಾಲೆ ಲಕ್ಷ್ಮಿಪುರಂ, ಕಾವೇರಿ ಪ್ರೌಢಶಾಲೆ, ಮರಿಮಲ್ಲಪ್ಪ ಪ್ರೌಢಶಾಲೆ ಸೀತಾವಿಲಾಸ, ಸದ್ವಿದ್ಯಾ ಪ್ರೌಢಶಾಲೆ, ಐಡಿಯಲ್ ಜಾವಾ ರೋಟರಿ ಶಾಲೆ, ಕೆ.ಪಿ.ಕಾನ್ವೆಂಟ್, ರೋಟರಿ ಶಾಲೆ ಬೃಂದಾವನ ಬಡಾವಣೆ, ಸದ್ವಿದ್ಯಾ ಅರೆ ವಸತಿ ಪ್ರೌಢಶಾಲೆ, ಪ್ರಮತಿ ಹಿಲ್ ವಿವ್ ಕುವೆಂಪುನಗರ, ಸತ್ಯ ಸಾಯಿ ಪ್ರೌಢಶಾಲೆ, ಸತ್ಯಸಾಯಿ ಪ್ರೌಢಶಾಲೆ ಜಯಲಕ್ಷ್ಮಿಪುರಂ ಸೇರಿದಂತೆ ಒಟ್ಟು 35 ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಬೆಳಗ್ಗೆ 06 ಗಂಟೆಯಿಂದ ಸಂಜೆ 06 ಗಂಟೆಯವರೆಗೆ ಕಲಂ 144 ಸಿ.ಆರ್.ಪಿ.ಸಿ ಅನ್ವಯ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತರು ತಿಳಿಸಿದ್ದಾರೆ.

ಮೈಸೂರಿನ ರಘುಲಾಲ್ ಅಂಡ್ ಕಂಪನಿಯಿಂದ ನಂ.ಗೂಡು ಸರ್ಕಾರಿ ಶಾಲೆಗೆ ಲಕ್ಷ ರೂ. ಮೌಲ್ಯದ ಪೀಠೋಪಕರಣ ಕೊಡುಗೆ



ನಂಜನಗೂಡು, ಸೆ.2– ಮೈಸೂರಿನ ಔಷಧಿ ವ್ಯಾಪಾರಿಗಳಾದ ರಘುಲಾಲ್ ಅಂಡ್ ಕಂಪನಿ ವತಿಯಿಂದ ನಗರದ ಅಶೋಕಪುರಂ ಸರ್ಕಾರಿ ಶಾಲೆಗೆ ಒಂದು ಲಕ್ಷ ರೂ. ಮೌಲ್ಯದ ಪೀಠೋಪಕರಣಗಳನ್ನು ದೇಣಿಗೆ ನೀಡಲಾಯಿತು.

ಶನಿವಾರ ರಘುಲಾಲ್ ಅಂಡ್ ಕಂಪನಿಯ ಪ್ರತಿನಿಧಿ ಗಾರ್ಡನ್ ಮಹೇಶ್ ಅವರು ಬಿಇಓ ಶಿವಲಿಂಗಯ್ಯ ಅವರಿಗೆ ಪೀಠೋಪಕರಣಗಳನ್ನು ಹಸ್ತಾಂತರ ಮಾಡಿದರು.

ಈ ಸಂದರ್ಭದಲ್ಲಿ ಬಿಇಓ ಶಿವಲಿಂಗಯ್ಯ ಮಾತನಾಡಿ, ನಗರದ ಅಶೋಕಪುರಂ ಬಡಾವಣೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ರಘುಲಾಲ್ ಅಂಡ್ ಕಂಪನಿಯವರು ಸುಮಾರು ಒಂದು ಲಕ್ಷ ರೂ. ಮೌಲ್ಯದ ವೆಚ್ಚದ ನಲಿ ಕಲಿ ಟೇಬಲ್ ಮತ್ತು ಪೀಠೋಪಕರಣಗಳನ್ನು ದೇಣಿಗೆ ನೀಡಿದ್ದಾರೆ. ಅವರಿಗೆ ಶಿಕ್ಷಣ ಇಲಾಖೆ ವತಿಯಿಂದ ಕೃತಜ್ಞತೆ ಸಲ್ಲಿಸಲಾಗುತ್ತದೆ. ಇದೇ ರೀತಿ ಸೇವಾ ಮನೋಭಾವವುಳ್ಳ ವ್ಯಕ್ತಿಗಳು ಮತ್ತು ಕಂಪನಿಗಳು ಸರ್ಕಾರಿ ಶಾಲೆಗಳಿಗೆ ಅಗತ್ಯವಾದ ನೆರವು ನೀಡಿದಲ್ಲಿ ಸರ್ಕಾರಿ ಶಾಲೆಗಳಲ್ಲಿನ ಮೂಲ ಸೌಕರ್ಯಗಳ ಕೊರತೆಯನ್ನು ನೀಗಿಸಬಹುದಾಗಿದೆ. ಜೊತೆಗೆ ಅಗತ್ಯ ಕಲಿಕಾ ವಾತಾವರಣವನ್ನು ಸಹ ನಿರ್ಮಿಸಬಹುದಾಗಿದೆ ಎಂದರು.

ಶಾಲೆಯ ಸಹಶಿಕ್ಷಕ ಮುದ್ದು ಮಾದೇಗೌಡ ಮಾತನಾಡಿ, ರಘುಲಾಲ್ ಅಂಡ್ ಕಂಪನಿ ತಾಲೂಕಿನ ತಗಡೂರು ಸರ್ಕಾರಿ ಶಾಲೆಗೂ ಸಹ 2.5 ಲಕ್ಷ ವೆಚ್ಚದ ಪೀಠೋಪಕರಣಗಳನ್ನು ದೇಣಿಗೆ ನೀಡಿದೆ. ಅಲ್ಲದೆ ರಸ್ತೆ ಬದಿಗಳಲ್ಲಿ ಮತ್ತು ಉದ್ಯಾನವನಗಳಲ್ಲಿ ಲಕ್ಷಾಂತರ ಮರ ಗಿಡಗಳನ್ನು ನೆಟ್ಟು, ಪೋಷಣೆ ಮಾಡುವ ಮೂಲಕ ಪರಿಸರ ಸಂರಕ್ಷಣೆಯಲ್ಲಿ ಸಹ ತೊಡಗಿಕೊಂಡಿದ್ದಾರೆ ಎಂದರು.

ನಮ್ಮ ಶಾಲೆಯ ವತಿಯಿಂದ ಒಂದು, ಎರಡು, ಮೂರನೇ ತರಗತಿಯ ವಿದ್ಯಾರ್ಥಿಗಳಿಗೆ ಅನುಕೂಲಕರವಾದ ಮತ್ತು ನಲಿಕಲಿ ಟೇಬಲ್ ಮತ್ತು ಕುರ್ಚಿಗಳನ್ನು, ದೇಣಿಗೆ ನೀಡುವಂತೆ ಮನವಿ ಮಾಡಲಾಗಿತ್ತು ಅದರಂತೆ ಇಂದು ಒಂದು ಲಕ್ಷ ವೆಚ್ಚದ ನಲಿ ಕಲಿ ಟೇಬಲ್ ಮತ್ತು ಕುರ್ಚಿಗಳನ್ನು ಮತ್ತು ಶಾಲೆಗೆ ಅಗತ್ಯ ಪೀಠೋಪಕರಣಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಅವರ ಸೇವಾ ಮನೋಭಾವ ಪ್ರಶಂಸನೀಯವಾದದ್ದು ಎಂದರು.

ಕಾಂಗ್ರೆಸ್ ಮುಖಂಡರಾದ ಜಗದೀಶ್, ಮಹೇಶ್, ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷೆ ರಾಧಾ ಮಧುರಾಜ್, ಉಪಾಧ್ಯಕ್ಷ ಪ್ರಕಾಶ್, ಮುಖ್ಯ ಶಿಕ್ಷಕಿ ಸಣ್ಣಮ್ಮ, ಸಹ ಶಿಕ್ಷಕರಾದ ಪ್ರಮೀಳಾ, ಮೀನಾ, ಭಾರತಿ, ಸಿಆರ್‌ಪಿ. ನಾಗಲಕ್ಷ್ಮಿ ಮತ್ತು ವಿದ್ಯಾರ್ಥಿಗಳು ಇದ್ದರು.

ಕುರಿ, ಮೇಕೆ ಸಾಕಾಣಿಕೆ ಬಗ್ಗೆ ಉಚಿತ ತರಬೇತಿ



ತಿ.ನರಸೀಪುರ, ಸೆ.2– ಕುರಿ ಸಾಕಣೆದಾರರ ಶ್ರೇಯೋಭಿವೃದ್ಧಿಗಾಗಿ ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದು ಸಾಕಣೆದಾರರು ಯೋಜನೆಗಳ ಸದುಪಯೋಗಕ್ಕೆ ಮುಂದಾಗಬೇಕೆಂದು ಪಶುಸಂಗೋಪನಾ ಇಲಾಖೆಯ ಅಧಿಕಾರಿ ಡಾ.ಲಿಂಗರಾಜು ತಿಳಿಸಿದರು.

ಗಂಗಾ ಚಾರಿಟಬಲ್ ಟ್ರಸ್ಟ್ ಹಾಗೂ ಪಶು ಸಂಗೋಪನಾ ಇಲಾಖೆ, ಮೈಸೂರಿನ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಸಹಯೋಗದಲ್ಲಿ ಪಟ್ಟಣದ ಮರಿಗೌಡ ಸ್ಮಾರಕ ಭವನದಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆ ಮತ್ತು ಮೇವು ನಿರ್ವಹಣೆ ಬಗ್ಗೆ ಹಮ್ಮಿಕೊಳ್ಳಲಾಗಿದ್ದ ಎರಡು ದಿನಗಳ ಉಚಿತ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕುರಿಗಳ ಆರೋಗ್ಯದ ದೃಷ್ಟಿಯಿಂದ ವರ್ಷಕ್ಕೆ ಮೂರ್ನಾಲ್ಕು ಬಾರಿ ಸರ್ಕಾರದಿಂದಲೇ ಕುರಿಗಳಿಗೆ ಜಂತು ಹುಳ ನಿವಾರಣೆ ಔಷಧಿ ಹಾಕಿಸಲಾಗುತ್ತದೆ. ಕುರಿ ಸಾಕಣೆದಾರರು ಇಂಥ ಯೋಜನೆಗಳ ಪ್ರಯೋಜನ ಪಡೆಯುವ ಮೂಲಕ ಅಭಿವೃದ್ಧಿ ಹೊಂದಬೇಕು ಎಂದು ಹೇಳಿದರು.

ಗ್ರಾಮೀಣ ರೈತರು ವ್ಯವಸಾಯದ ಜತೆಗೆ ಉಪ ಕಸುಬಾಗಿ ಕುರಿ, ಮೇಕೆ ಮತ್ತು ಹೈನುಗಾರಿಕೆಯಲ್ಲಿ ತೊಡಗಿಕೊಳ್ಳುವರು. ಕೃಷಿ ನಷ್ಟವನ್ನು ಸರಿದೂಗಿಸಲು ಉಪ ಕಸಬುಗಳು ಅಗತ್ಯವಾಗಿದೆ ಎಂದರು.

ಕಾಡಾನೆ ದಾಳಿಯಿಂದ ರೈತನಿಗೆ ತೀವ್ರ ಗಾಯ

ಬಾಳೆ ಬೆಳೆ ಕಾವಲು ಕಾಯುತ್ತಿದ್ದ ವೇಳೆ ಅನಾಹುತ



ಸರಗೂರು, ಸೆ.2– ಕಾಡಾನೆಯೊಂದು ದಾಳಿ ನಡೆಸಿದ ಪರಿಣಾಮ ರೈತರೊಬ್ಬರು ತೀವ್ರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಕುಂದೂರು ಗ್ರಾಮದಲ್ಲಿ ಸಂಭವಿಸಿದೆ

ಗ್ರಾಮದ ವಾಸಿ ರೈತ ಸಿದ್ದರಾಜ ನಾಯಕ (36) ಗಾಯಗೊಂಡಿದ್ದು, ಅವರನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಜಮೀನಿನಲ್ಲಿ ಕಾವಲು ಕಾಯಲು ತೆರಳಿದ್ದ ಸಂದರ್ಭದಲ್ಲಿ ಹಠಾತ್ತಾಗಿ ಕಾಡಾನೆ ದಾಳಿ ಮಾಡಿದ ಪರಿಣಾಮ ತೀವ್ರವಾಗಿ ರೈತ ಗಾಯಗೊಂಡಿದ್ದು, ಅವರನ್ನು ಹೆಚ್.ಡಿ.ಕೋಟೆ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆಆರ್ ಆಸ್ಪತ್ರೆಗೆ ಕರೆದೊಯ್ಯಲಾಯಿತು.

ರಾತ್ರಿ ಅರಣ್ಯದಂಚಿನಲ್ಲಿರುವ ತನ್ನ ಜಮೀನಿನಲ್ಲಿ ಬೆಳೆದಿದ್ದ ಬಾಳೆ ಬೆಳೆಗೆ ಕಾವಲು ಕಾಯಲು ತೆರಳಿದ್ದ ಸಂದರ್ಭದಲ್ಲಿ ಏಕಾಏಕಿ ಆನೆ ಆತನ ಮೇಲೆ ದಾಳಿ ಮಾಡಿ ಸೊಂಡಿಲಿನಿಂದ ಎಸೆದು ಗಾಯಗೊಳಿಸಿದೆ ಎನ್ನಲಾಗಿದೆ.

ಶನಿವಾರ ಮುಂಜಾನೆ ವಿಷಯ ತಿಳಿದ ಅಕ್ಕಪಕ್ಕದ ಜಮೀನಿನವರು, ಮನೆಯವರು ಸ್ಥಳಕ್ಕೆ ಧಾವಿಸಿ ಆತನನ್ನು ಆಂಬುಲೆನ್ಸ್ ಮೂಲಕ ಆಸ್ಪತ್ರೆಗೆ ಸಾಗಿಸಿದ್ದಾರೆ. ಕೈಕಾಲುಗಳಿಗೆ ಗಂಭೀರ ಗಾಯಗಳಾಗಿದ್ದು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆನೀಡಲಾಗುತ್ತಿದೆ

ನುಗು ಅರಣ್ಯ ಪ್ರದೇಶದಲ್ಲಿ ಆನೆ ಕಂದಕ ಹಾಗೂ ರೈಲ್ವೆ ಬ್ಯಾರಿಕೇಡ್‌ಗಳನ್ನು ಸರಿಯಾಗಿ ನಿರ್ಮಿಸದ ಕಾರಣ ಕಾಡಾನೆಗಳು ಅರಣ್ಯ ದಾಟಿ ಗ್ರಾಮಕ್ಕೆ ನುಗ್ಗುತ್ತಿವೆ. ಕಷ್ಟಪಟ್ಟು ಬೆಳೆದ ಬೆಳೆಗಳನ್ನು ನಾಶಪಡಿಸುತ್ತಿವೆ ಎಂದು ಅಕ್ಕಪಕ್ಕದ ಗ್ರಾಮಸ್ಥರು ಅರಣ್ಯ ಇಲಾಖೆ ಸಿಬ್ಬಂದಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸರಗೂರು ಪೋಲೀಸರು ಹಾಗೂ ಅರಣ್ಯ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

ಸೇವಾ ಕಾರ್ಯಗಳ ಮೂಲಕ ಕಿಚ್ಚ ಸುದೀಪ್ ಹುಟ್ಟುಹಬ್ಬ ಆಚರಣೆ



ತಿ.ನರಸೀಪುರ, ಸೆ.2– ಅಭಿನಯ ಚಕ್ರವರ್ತಿ ಕಿಚ್ಚ ಸುದೀಪ್ ಅವರ 50 ನೇ ವರ್ಷದ ಹುಟ್ಟುಹಬ್ಬವನ್ನು ತಾಲೂಕಿನ ಕೆಂಡನಕೊಪ್ಪಲು ಗ್ರಾಮದ ಕಿಚ್ಚ ಸುದೀಪ್ ಸಹಾಯ ಸೇನೆಯ ಸದಸ್ಯರು ವಿವಿಧ ಸೇವಾ ಕಾರ್ಯಗಳನ್ನು ಹಮ್ಮಿಕೊಳ್ಳುವ ಮೂಲಕ ಅರ್ಥಪೂರ್ಣವಾಗಿ ಆಚರಿಸಿದರು.

ಕೆಂಡನಕೊಪ್ಪಲು ಗ್ರಾಮದ ಕಿಚ್ಚ ಸುದೀಪ್ ಸಹಾಯ ಸೇನೆಯ ಯುವ ಅಭಿಮಾನಿಗಳು ಕಿಚ್ಚ ಸುದೀಪ್ ಚಿತ್ರವುಳ್ಳ ಮೊದಲು ಮಾನವನಾಗು ಎಂಬ ಬರಹವುಳ್ಳ ಟೀ ಶರ್ಟನ್ನು ಧರಿಸಿ ಪಟ್ಟಣದಲ್ಲಿ ಬೈಕ್ ರ್‍ಯಾಲಿ ನಡೆಸಿದರು.ಇದಕ್ಕೂ ಮೊದಲು ಪಟ್ಟಣದ ಶ್ರೀ ಗುಂಜಾನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಸುದೀಪ್ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಿ ಆಯಸ್ಸು ವೃದ್ಧಿಗಾಗಿ ಪ್ರಾರ್ಥನೆ ಸಲ್ಲಿಸಿದರು.

ನಂತರ ಸುದೀಪ್ ಚಿತ್ರವಿರುವ ಬಾವುಟ ಪ್ರದರ್ಶನದೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ರೋಡ್ ಶೋ ನಡೆಸಿ ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ತೆರಳಿದ ಅಭಿಮಾನಿಗಳು ಒಳರೋಗಿಗಳಿಗೆ ಹಣ್ಣು–ಬ್ರೆಡ್ ವಿತರಿಸಿದರು. ಆನಂತರ ಗ್ರಾಮಕ್ಕೆ ಆಗಮಿಸಿದ ಅಭಿಮಾನಿಗಳು ಶಾಲಾವರಣದಲ್ಲಿ ಸುದೀಪ್ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ರಕ್ತದಾನ ಶಿಬಿರದಲ್ಲಿ ಪಾಲ್ಗೊಂಡು ರಕ್ತದಾನ ಮಾಡಿದರು. ಈ ವೇಳೆ ಸರ್ಕಾರಿ ಶಾಲೆಯ ಶಿಕ್ಷಕಿಯರಾದ ಉಮಾ ಮತ್ತು ರಾಣಿ ರಕ್ತದಾನ ಮಾಡುವ ಮೂಲಕ ಅಭಿಮಾನಿಗಳ ಆಶಯಕ್ಕೆ ಸಾಥ್ ನೀಡಿ ಗಮನ ಸೆಳೆದರು.

ಇದೇ ವೇಳೆ ಸುದೀಪ್ ಸಹಾಯಸೇನೆ ವತಿಯಿಂದ ಶಾಲಾ ಮಕ್ಕಳಿಗೆ ಕ್ರೀಡಾ ಸಮವಸ್ತ್ರವನ್ನು ವಿತರಿಸಲಾಯಿತು. ಶಾಲಾವರಣದಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪಟ್ಟಣ ಪೊಲೀಸ್ ಠಾಣೆಯ ಪಿಎಸ್‌ಐ ಜಗದೀಶ್ ದೂಳ್‌ಶೆಟ್ಟಿ ಮಾತನಾಡಿ, ಗ್ರಾಮದ ಯುವಕರು ತಮ್ಮ ನೆಚ್ಚಿನ ನಟನ ಹುಟ್ಟುಹಬ್ಬದಂದು ರಕ್ತದಾನದಂತಹ ಉತ್ತಮ ಕಾರ್ಯಕ್ರಮ ಆಯೋಜಿಸಿರುವುದು ಶ್ಲಾಘನೀಯವಾಗಿದ್ದು, ದಾನಗಳಲ್ಲಿ ರಕ್ತದಾನ ಮಹಾದಾನ, ಜನರ ಜೀವ ರಕ್ಷಣೆಗೆ ರಕ್ತ ಅತ್ಯವಶ್ಯಕವಾಗಿದ್ದು,ರಕ್ತದ ಅವಶ್ಯಕತೆ ಇರುವ ವ್ಯಕ್ತಿಗಳಿಗೆ ರಕ್ತದಾನ ಮಾಡುವುದರ ಮೂಲಕ ಎಲ್ಲರೂ ಜನರ ಅಮೂಲ್ಯವಾದ ಜೀವ ರಕ್ಷಣೆಗೆ ಮುಂದಾಗಬೇಕು ಎಂದರು.

ಸಮಾಜ ಸೇವಕ, ಅನಾಥ ಶವಗಳ ಮುಕ್ತಿದಾತ ಡಾ.ಎಂ.ಮಾದೇಶ್ ಮಾತನಾಡಿದರು. ಸರ್ಕಾರಿ ಆಸ್ಪತ್ರೆಯ ಶಸ್ತ್ರಚಿಕಿತ್ಸಾ ತಜ್ಞ ಡಾ.ಅಭಿಲಾಷ್, ತಲಕಾಡು ಸಿಪಿಐ ಆನಂದ್ ಕುಮಾರ್, ಕಸಾಪ ಅಧ್ಯಕ್ಷ ಪುಟ್ಟಸ್ವಾಮಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಿವಶಂಕರ ಮೂರ್ತಿ, ಎಪಿಎಂಸಿ ಮಾಜಿ ಉಪಾಧ್ಯಕ್ಷ ಶಂಕರ್, ಬೈರಾಪುರ ಬಾಲು, ಕಿಚ್ಚ ಸುದೀಪ್ ಸಹಾಯಸೇನೆಯ ಮುಖ್ಯಸ್ಥರಾದ ಲೋಕೇಶ್, ಪ್ರಸನ್ನಕುಮಾರ್, ರಾಮು,ವಿ. ಗೋಪಾಲ್, ಸಾಗರ್, ಗೋವಿಂದರಾಜು, ಭರತ್, ಕೆಂಚ, ರಾಜು, ಗೋಪಾಲ್,ಯಶ್ವಂತ್, ಚಂದ್ರು, ಪುನೀ, ಸಿದ್ದು, ರಾಚಪ್ಪ, ಸಾಗರ್, ರಂಗ, ಶುಭಾಷ್, ರಾಜು, ಯಶ್ವಂತ್, ತಂಬಡಿ, ಮರಡೀಪುರ ನಾಗರಾಜು ಸೇರಿದಂತೆ ಗ್ರಾಮದ ಯಜಮಾನರು, ಗ್ರಾಮಸ್ಥರು, ಶಾಲೆಯ ಶಿಕ್ಷಕರು ಭಾಗವಹಿಸಿದ್ದರು.

ಮಹಿಳೆಯರ ಸಬಲೀಕರಣಕ್ಕೆ ಗುಡಿ ಕೈಗಾರಿಕೆ ಅಗತ್ಯ



ಹಿರೀಕ್ಯಾತನಹಳ್ಳಿ, ಸೆ.2– ಮಹಿಳೆಯರ ಸಬಲೀಕರಣಕ್ಕೆ ಗುಡಿ ಕೈಗಾರಿಕೆಗಳ ಅಗತ್ಯವಿದೆ ಎಂದು ಪಿಡಿಓ ಕೀರ್ತಿ ಕರೆ ನೀಡಿದರು.

ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಗ್ರಾಮದ ಜಯಮ್ಮ ರಾಮೇಗೌಡ ಕಲ್ಯಾಣ ಮಂಟಪದಲ್ಲಿ ನಡೆದ ಹಿರೀಕ್ಯಾತನಹಳ್ಳಿ, ಕಟ್ಟೆಮಳಲವಾಡಿ ಕ್ಲಸ್ಟರ್‌ನ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ವತಿಯಿಂದ ಜ್ಞಾನ ವಿಕಾಸ ಕೇಂದ್ರದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡುತ್ತಾ ಮಹಿಳೆಯರು ಸಮಾಜದ ಮುಖ್ಯವಾಹಿನಿಗೆ ಬರಲು ಇಂತಹ ಸಂಘ ಸಂಸ್ಥೆಗಳ ಸಹಕಾರ ಅತ್ಯಗತ್ಯ. ಇದರಿಂದ ಹಲವಾರು ಕುಟುಂಬಗಳು ಬದುಕು ನಡೆಸಲು ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ಮಹಿಳೆಯರು ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿ, ನಿಮ್ಮ ಸಲಹೆ ಸೂಚನೆಗಳನ್ನು ನೀಡಿ ಸರ್ಕಾರದ ಸವಲತ್ತುಗಳನ್ನು ಪಡೆಯಬೇಕು ಎಂದರು.

ಸರ್ಕಾರದ ಯೋಜನೆಗಳ ಬಗ್ಗೆ ತಿಳಿವಳಿಕೆ ಅತ್ಯಗತ್ಯ. ಗ್ರಾಮ ಪಂಚಾಯಿತಿ ವತಿಯಿಂದ ನಡೆಯುವ ಗ್ರಾಮ ಸಭೆಗಳಲ್ಲಿ ಭಾಗವಹಿಸಿ ಫಲಾನುಭವಿಗಳ ಆಯ್ಕೆಗೆ ನಿಮ್ಮ ಸಹಕಾರದಿಂದ ಬಡವರು ಹಾಗೂ ನಿರ್ಗತಿಕರ ಆಯ್ಕೆಗೆ ನಿಮ್ಮ ಸಹಕಾರವು ಅತ್ಯಗತ್ಯ ಗ್ರಾಮದ ಅಭಿವೃದ್ಧಿಯಾಗಬೇಕಾದರೆ ಮಹಿಳೆಯರು ಕೂಡ ಪಂಚಾಯಿತಿಯ ಕಂದಾಯ ಪಾವತಿಸಿದರೆ ಗ್ರಾಮದ ಅಭಿವೃದ್ಧಿ ಮಾಡಲು ಸಾಧ್ಯ ಎಂದರು. ವಾರ್ಷಿಕೋತ್ಸವದ ಕಾರ್ಯಕ್ರಮದಲ್ಲಿ ಮಹಿಳೆಯರಿಗೆ ವಿವಿಧ ಆಟೋಟ ಸ್ಪರ್ಧೆ, ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿ ಬಹುಮಾನ ನೀಡಲಾಯಿತು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಕು.ರುಕ್ಮಿಣಿ, ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಸ್ವಾಮಿಗೌಡ, ತಾಲೂಕು ಸಮನ್ವಯಾಧಿಕಾರಿ ರೂಪ, ವಲಯ ಮೇಲ್ವಿಚಾರಕಿ ಸವಿತಾ,ಜ್ಞಾನ ವಿಕಾಸ ಕೇಂದ್ರದ ಅಧ್ಯಕ್ಷೆ ಗೌರಮ್ಮ, ಸೇವಾ ಪ್ರತಿನಿಧಿ ಭಾರತಿಸುರೇಶ್ ಹಾಗೂ ಜ್ಞಾನವಿಕಾಸ ಕೇಂದ್ರದ ಸದಸ್ಯರು ಪ್ರತಿನಿಧಿಗಳು ಹಾಜರಿದ್ದರು.

ಬೆಳ್ಳಿರಥ ನಿರ್ಮಾಣಕ್ಕೆ ಬೆಳ್ಳಿ ಅರ್ಪಣೆ



ನಂಜನಗೂಡು, ಸೆ.2– ದಕ್ಷಿಣಕಾಶಿ ಪವಿತ್ರ ಪುಣ್ಯಕ್ಷೇತ್ರವೆನಿಸಿರುವ ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ಶ್ರೀಯವರಿಗೆ ತನ್ನ ಇಷ್ಟಾರ್ಥ ಪೂರೈಸಿದ್ದಕ್ಕಾಗಿ ಬೆಳ್ಳಿ ಅರ್ಪಿಸುವುದರ ಮೂಲಕ ಇಲ್ಲಿನ ಹಳ್ಳದಕೇರಿ ನಿವಾಸಿ ಪುರಸಭಾ ಮಾಜಿ ಸದಸ್ಯ ಆರ್.ಮಂಜುನಾಥ್ ಬೆಳ್ಳಿ ಅರ್ಪಿಸುವುದರ ಮೂಲಕ ಹರಕೆ ತೀರಿಸಿದ್ದಾರೆ

ಕೋಟ್ಯಾಂತರ ರೂ. ವೆಚ್ಚದಲ್ಲಿ ದೇವಾಲಯದಲ್ಲಿ ಬೆಳ್ಳಿರಥ ನಿರ್ಮಾಣವಾಗುತ್ತಿದ್ದು, ಇದಕ್ಕೆ ಆರ್.ಮಂಜುನಾಥ್ ಅವರು ಇಂದು 1 ಕೆ.ಜಿ. 70 ಗ್ರಾಂ ಬೆಳ್ಳಿಗಟ್ಟಿಯನ್ನು ಬೆಳ್ಳಿರಥದ ನಿರ್ಮಾಣಕ್ಕೆ ನೀಡಿದ್ದು, ತಮ್ಮ ಬಹುದಿನಗಳ ಹರಕೆಯನ್ನು ಇಂದು ತೀರಿಸಿದ್ದಾರೆ. ಇದೇ ಸಂದರ್ಭದಲ್ಲಿ ಉಪ್ಪಾರ ಜನಾಂಗದ ಗೌರವಾಧ್ಯಕ್ಷ ಕನಕನಗರ ಮಹದೇವು, ಮುಖಂಡರಾದ ಎಸ್.ಶೇಖರ್, ಕೆ.ರವಿಕುಮಾರ್, ಹಳ್ಳದಕೇರಿ ಗೋವಿಂದರಾಜು, ಮುಂತಾದವರನ್ನು ಕಾಣಬಹುದು.

ಹೆಚ್.ಡಿ.ಕೋಟೆಯ ಶ್ರೀ ಆದಿಚುಂಚನಗಿರಿ ಪ್ರೌಢಶಾಲೆಗೆ ಸಮಗ್ರ ಪ್ರಶಸ್ತಿ



ಹೆಚ್.ಡಿ.ಕೋಟೆ, ಸೆ.2– ಪಟ್ಟಣದ ಶ್ರೀ ಆದಿಚುಂಚನಗಿರಿ ಪ್ರೌಢಶಾಲೆ(ಆಂಗ್ಲ ಮಾಧ್ಯಮ) ಯು 2023–24ನೇ ಸಾಲಿಗೆ ಸರ್ಕಾರಿ ಪ್ರೌಢಶಾಲೆ ಸ್ಪರ್ಧೆಯಲ್ಲಿ ನಡೆದ ಕಸಬಾ ವಲಯ ಮಟ್ಟದ ಪ್ರೌಢಶಾಲಾ ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿಯನ್ನು ಪಡೆದುಕೊಂಡಿದೆ.

ಅಥ್ಲೆಟಿಕ್ಸ್ ವಿಭಾಗ : ವಸಂತ 100 ಮೀ, 400 ಮೀ, ಉದ್ದ ಜಿಗಿತ(ಪ್ರಥಮ), ವಿನೋದ್ 3000 ಮೀ, 1500 ಮೀ (ಪ್ರಥಮ), ತ್ರಿವಿಧ ಜಿಗಿತ (ತೃತೀಯ), ತರುಣ್ ಗೌಡ 200 ಮೀ (ಪ್ರಥಮ), ರಾಕೇಶ್ 800 ಮೀ (ಪ್ರಥಮ), ಧನಲಕ್ಷ್ಮಿ 200 ಮೀ (ಪ್ರಥಮ), ಐಶ್ವರ್ಯ 1500 ಮೀ (ದ್ವಿತೀಯ), ಅಕ್ಷತಾ 800 ಮೀ (ದ್ವಿತೀಯ), ಆಕಾಶ್ 400 ಮೀ (ತೃತೀಯ), ಮೋಹನ್ ಕುಮಾರ್ ಗುಂಡು ಎಸೆತ (ತೃತೀಯ), ಶಿಲ್ಪಶ್ರೀ 1500 ಮೀ (ತೃತೀಯ), ಸಿಂಚನ & ತಂಡ 4X100ಮೀ ರಿಲೇ (ಪ್ರಥಮ), ತರುಣ್ ಗೌಡ & ತಂಡ 4X100 ಮೀ ರಿಲೇ (ಪ್ರಥಮ), ವಸಂತ ವೈಯಕ್ತಿಕ ಚಾಂಪಿಯನ್, ವಿನೋದ್ ವೈಯಕ್ತಿಕ ಚಾಂಪಿಯನ್ ಪಡೆದಿರುತ್ತಾರೆ.

ಪಂದ್ಯಾಟಗಳ ವಿಭಾಗ: ಉಮಾಶಂಕರ್ & ತಂಡ ಬಾಲ್ ಬ್ಯಾಡ್ಮಿಂಟನ್ (ಪ್ರಥಮ), ಅಜಯ್ & ತಂಡ ಥ್ರೋಬಾಲ್ (ಪ್ರಥಮ), ಅರ್ಪಿತ & ತಂಡ ಥ್ರೋಬಾಲ್ (ಪ್ರಥಮ), ಮೇಘನಾ & ತಂಡ ಕಬಡ್ಡಿ (ಪ್ರಥಮ), ಸೋಮೇಶ್ & ತಂಡ ಕಬಡ್ಡಿ (ದ್ವಿತೀಯ), ಸ್ಪಂದನ & ತಂಡ ಖೋ ಖೋ (ದ್ವಿತೀಯ), 117 ಅಂಕಗಳೊಂದಿಗೆ ಸಮಗ್ರ ಪ್ರಶಸ್ತಿ ಪಡೆದಿರುತ್ತಾರೆ.

ವಿಜೇತ ಕ್ರೀಡಾಪಟುಗಳಿಗೆ ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ ಮೈಸೂರು ಶಾಖೆಯ ಕಾರ್ಯದರ್ಶಿಗಳಾದ ಶ್ರೀ ಸೋಮೇಶ್ವರನಾಥ ಸ್ವಾಮೀಜಿರವರು, ಗೌರವ ಆಡಳಿತ ಅಧಿಕಾರಿಗಳಾದ ಕೆ.ಪಿ.ಬಸವೇಗೌಡರು, ಮುಖ್ಯಶಿಕ್ಷಕರು, ಶಿಕ್ಷಕರು ಮತ್ತು ಸಿಬ್ಬಂದಿವರ್ಗದವರು ಅಭಿನಂದಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಮಿಸ್ಟೇಕ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಜೈಲರ್(ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಡ್ರೀಮ್ ಗರ್ಲ್–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕೌಶಲ್ಯ ಸುಪ್ರಜಾ ರಾಮ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜೈಲರ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಖುಷಿ (ತೆ)	4 ಪ್ರದರ್ಶನಗಳು
ಸಂಗಂ	
ಟೋಬಿ (ಕ)	4 ಪ್ರದರ್ಶನಗಳು
ಲಿಡೋ	
ಖುಷಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೇಬಿ (ತೆ)	4 ಪ್ರದರ್ಶನಗಳು
ಪ್ರಭಾ	
ನಮೋ ಭೂತಾತ್ಮ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10ಕ್ಕೆ, ಜೈಲರ್ (ತ): ಮ.12.50ಕ್ಕೆ, ಸಂ.4ಕ್ಕೆ, ರಾ.7.10ಕ್ಕೆ, ಕಿಂಗ್ ಆಫ್ ಕೋಥಾ (ಮ): ರಾ.10.25ಕ್ಕೆ.
ಸ್ಕ್ರೀನ್ 2	ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಬೆ.9.50ಕ್ಕೆ, ಜೈಲರ್ (ಕ): ಮ.1ಕ್ಕೆ, ಗದರ್ 2 (ಹಿಂ): ಸಂ.4.10ಕ್ಕೆ, ಡ್ರೀಂ ಗರ್ಲ್ (ಹಿಂ): ರಾ.7.25ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 3	ರಾಮಚಂದ್ರ ಬಾಸ್ & ಕೋ (ಮ): ಬೆ.10ಕ್ಕೆ, ಗ್ರ್ಯಾನ್ ಟುರಿಸ್ಮೋ (ಇಂ): ಮ.1.30ಕ್ಕೆ, ರಾ.7.20ಕ್ಕೆ, ಗಾಂಡೀವಧಾರಿ ಅರ್ಜುನ (ತೆ): ಸಂ.4.30ಕ್ಕೆ, ಅಖೇಲಿ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಟೋಬಿ (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.10ಕ್ಕೆ.

INOX LIVE THE MOVIE ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಜೈಲರ್ (ಕ): ಬೆ.11.20ಕ್ಕೆ, ರಾ.9.50ಕ್ಕೆ, ಜೈಲರ್ (ತ): ಮ.2.50ಕ್ಕೆ, ಸಂ.6.20ಕ್ಕೆ.
ಸ್ಕ್ರೀನ್ 2	ಗೂಮರ್ (ಹಿಂ): ಬೆ.9.55ಕ್ಕೆ, ಓಎಂಜಿ 2 (ಹಿಂ): ಮ.12.55ಕ್ಕೆ, ರಾ.7.15ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಸಂ.4.10ಕ್ಕೆ, ಬ್ಲೂ ಬೀಟಲ್ (ಇಂ): ರಾ.10.30ಕ್ಕೆ.
ಸ್ಕ್ರೀನ್ 3	ಗದರ್ 2 (ಹಿಂ): ಬೆ.9.55ಕ್ಕೆ, ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಮ.1.25ಕ್ಕೆ, ಬ್ಲೂ ಬೀಟಲ್ (ಇಂ): ಸಂ.4.55ಕ್ಕೆ, ಆಚಾರ್ & ಕೋ (ಕ): ರಾ.7.45ಕ್ಕೆ, ಗೂಮರ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಜೈಲರ್ (ತ): ಬೆ.10.30ಕ್ಕೆ, ಗದರ್ 2(ಹಿಂ): ಮ.2ಕ್ಕೆ, ಸಂ.6.10ಕ್ಕೆ, ಓಎಂಜಿ 2 (ಹಿಂ): ರಾ.9.40ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಈ ಪಟ್ಟಣಕ್ಕೆ ಏನಾಗಿದೆ (ಕ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.15ಕ್ಕೆ, ಶೀಲಾ (ಕ): ಸಂ.4.15ಕ್ಕೆ, ಡಿಡಿ ರಿಟರ್ನ್ಸ್ (ತ): ಸಂ.6.30ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಕೌಸಲ್ಯ ಸುಪ್ರಜಾ ರಾಮ (ಕ): ಬೆ.1.15ಕ್ಕೆ, ರಾ.7ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ) ಸಂ.4.15ಕ್ಕೆ.
ಸ್ಕ್ರೀನ್ 3	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10.30ಕ್ಕೆ, ಸಂ.4ಕ್ಕೆ, ಮೆಗ್ 2 ದಿ ಟ್ರೆಂಚ್ (3ಡಿ) (ಇಂ): ಮ.1.20ಕ್ಕೆ, ಸಂ.6.55ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 4	ಮೆಗ್ 2 ದಿ ಟ್ರೆಂಚ್ (3ಡಿ)(ಇಂ): ಬೆ.10.45ಕ್ಕೆ, ನಮೋ ಭೂತಾತ್ಮ (ಕ): ಮ.1.10ಕ್ಕೆ, ಮ.3.50ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಸಂ.6.30ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ರಾ.9.15ಕ್ಕೆ.

PVR CINEMAS ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ನಿರಂತರ ಅಭ್ಯಾಸದಿಂದ ಗುರಿ ಮುಟ್ಟಲು ಸಾಧ್ಯ



ಕಂಪಲಾಪುರ, ಸೆ.2– ಯಾವುದೇ ಚಟುವಟಿಕೆಯಾಗಲಿ ನಿರಂತರವಾಗಿ ಅಭ್ಯಾಸ ಮಾಡಿದರೆ ಗುರಿ ಮುಟ್ಟುವುದು ಸುಲಭ ಎಂದು ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಶಿವರಾಜ್ ತಿಳಿಸಿದರು.

ಇಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಕೇವಲ ಓದು ಬರಹಕ್ಕೆ ಮಾತ್ರ ಸೀಮಿತವಾಗಿರಬಾರದು. ಬದಲಾಗಿ ಸರ್ಕಾರ ರೂಪಿಸಿರುವ ಇಂತಹ ಪ್ರತಿಭಾ ಕಾರಂಜಿ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಮಾನಸಿಕ ಸ್ಥೈರ್ಯ ಮತ್ತು ಬುದ್ಧಿಮಟ್ಟವನ್ನು ವೃದ್ಧಿಸಿಕೊಳ್ಳಿ ಎಂದರು.

ಸಿಆರ್‌ಪಿ ಸುದರ್ಶನ್ ಮಾತನಾಡಿ ಮಕ್ಕಳಲ್ಲಿ ಅಡಗಿರುವ ಪ್ರತಿಭೆಗಳನ್ನು ಇಂತಹ ವೇದಿಕೆಗಳು ಹೊರಹೊಮ್ಮಿಸುತ್ತವೆ. ಯಾವುದೇ ಸ್ಪರ್ಧೆಯಾಗಲಿ ಸೋಲು ಗೆಲುವು ಸಹಜ. ಆದರೆ ಭಾಗವಹಿಸುವ ಛಲ ಮುಖ್ಯ ಎಂದರು. ಶಾಲೆಯ ಮುಖ್ಯ ಶಿಕ್ಷಕ ಕೃಷ್ಣಕುಮಾರ್, ಶ್ರೀಧರ್, ಗಿರಿಧರ್ ಪತಿಭಾ ಕಾರಂಜಿ ಕುರಿತು ಪ್ರಾಸ್ತಾವಿಕ ಮಾತನಾಡಿದರು.

ಕಿರಿಯ ಪ್ರಾಥಮಿಕ ಶಾಲೆಯ 16, ಹಿರಿಯ ಪ್ರಾಥಮಿಕ ಶಾಲೆಗಳಿಗೆ 18 ಸ್ಪರ್ಧೆಗಳನ್ನ ಏರ್ಪಡಿಸಿದ್ದು ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಕ್ಲಸ್ಟರ್‌ನಿಂದ ವರ್ಗಾವಣೆಗೊಂಡ ಹಾಗೂ ಹೊಸದಾಗಿ ಬಂದ ಶಿಕ್ಷಕರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

ಪೂರ್ಣಕುಂಭದೊಂದಿಗೆ ವಿವಿಧ ವೇಷಭೂಷಣ ತೊಟ್ಟ ಮಕ್ಕಳು ಮುಖ್ಯ ರಸ್ತೆಯಲ್ಲಿ ಮೆರವಣಿಗೆ ಹೊರಟು ನಂತರ ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ವೇದಿಕೆಯಲ್ಲಿ ಬಿಆರ್‌ಪಿ ಮನೋಹರ್, ಶಿವಶಂಕರ್, ರವೀಂದ್ರ, ಶ್ರೀನಿಧಿ, ಮುಖ್ಯಶಿಕ್ಷಕ ದಯಾನಂದ, ಮಹದೇವ್, ನಟೇಶ್, ದೇವರಾಜ್, ನಾಗೇಂದ್ರ, ಶ್ರೀನಿವಾಸ್‌ಗೌಡ, ದೆಬೋರಾ, ನಿಲುಫರ್, ರಿಯಾಜ್, ಚಂದ್ರಶೇಖರ, ರಮೇಶ್, ಜಯಸ್ವಾಮಿ, ಮುಖಂಡ ಡಿ.ಟಿ.ಸ್ವಾಮಿ, ಸಹಕಾರ ಸಂಘದ ನಿರ್ದೇಶಕ ಪ್ರಕಾಶ್, ಗ್ರಾಪಂ ಸದಸ್ಯ ಶ್ರೀಪತಿ, ಐ.ಎಸ್.ಗೋಪಿ, ಹಬೀಬ್, ತಮ್ಮಯ್ಯ, ಎಸ್‌ಡಿಎಂಸಿ ಅಧ್ಯಕ್ಷ ಕುಮಾರ್ ಸೇರಿದಂತೆ ಪೋಷಕರು, ಶಿಕ್ಷಕ–ಶಿಕ್ಷಕಿಯರು ಹಾಜರಿದ್ದರು.

ಪಠ್ಯ ಪುಸ್ತಕದಲ್ಲಿನ ಬದಲಾವಣೆ ಸರ್ಕಾರದ ಕೆಲಸವಲ್ಲ

● ವಾಗ್ಮಿ ಡಾ.ವೀಣಾ ಬನ್ನಂಜೆ ಅಭಿಮತ ● ಪಠ್ಯಕ್ರಮ ರಚನೆ, ಪುನರಚನೆ ಸ್ವಾಯತ್ತ ಸಮಿತಿ ಕೆಲಸ

● ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳು ಆಯೋಜಿಸಿದ್ದ ಶತೋತ್ತರ–ಸುವರ್ಣ–ರಜತ ಮಹೋತ್ಸವ ಸಮಾರಂಭ



ಮೈಸೂರು, ಸೆ.2(ಜಿಎ)–ಒಮ್ಮೆ ರಚನೆಯಾದ ಪಠ್ಯಕ್ರಮಗಳು ಕನಿಷ್ಠ ಹತ್ತು ವರ್ಷಗಳ ಕಾಲ ಇರುವಂತೆ ನೋಡಿಕೊಳ್ಳಬೇಕು. ಈ ವಿಚಾರದಲ್ಲಿ ಸರ್ಕಾರ ನಿರ್ಣಯಿಸುವುದು ಬೇಡ. ಪಠ್ಯಕ್ರಮ ರಚನಾ ಸಮಿತಿಗೆ ಪೂರ್ಣ ಸ್ವಾಯತ್ತತೆ ನೀಡಬೇಕು ಎಂದು ವಾಗ್ಮಿ ಡಾ.ವೀಣಾ ಬನ್ನಂಜೆ ಅಭಿಪ್ರಾಯಪಟ್ಟರು.

ಮೈಸೂರಿನ ಕಲಾಮಂದಿರದಲ್ಲಿ ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳು ಆಯೋಜಿಸಿದ್ದ ಶತೋತ್ತರ–ಸುವರ್ಣ–ರಜತ ಮಹೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಒಮ್ಮೆ ರಚನೆಯಾದರೆ ಪಠ್ಯವನ್ನು ಬದಲಿಸುವ ಅಥವಾ ಅದರಲ್ಲಿನ ವಿಷಯಗಳನ್ನು ಕೈಬಿಡುವ ವಿಷಯದಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಿ ಮಕ್ಕಳ ಮೇಲೆ ಮತ್ತು ಶಿಕ್ಷಕರ ಮೇಲೆ ದೌರ್ಜನ್ಯ ಎಸಗಬಾರದು. ಪಠ್ಯಕ್ರಮಗಳ ರಚನೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ತಲೆ ಹಾಕಬಾರದು. ಸಮಿತಿಗೆ ಸ್ವಾಯತ್ತತೆ ನೀಡಿ ಮಕ್ಕಳಿಗೆ ಅಗತ್ಯವಿರುವ ಪಠ್ಯಕ್ರಮಗಳನ್ನು ರಚಿಸಲು ಸಂಪೂರ್ಣ ಸ್ವಾತಂತ್ರ್ಯ ಕೊಡಬೇಕು. ಯಾವುದೇ ಕಾರಣಕ್ಕೂ ಸರ್ಕಾರ ಮೂಗುತೂರಿಸಬಾರದು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವಿದ್ಯೆ ಎನ್ನುವುದರ ಕುರಿತು ಏನನ್ನು ಗೊತ್ತಿಲ್ಲದವರು ಸಮಿತಿಯಲ್ಲಿ ಇರುವುದು ಬೇಡ. ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡಿದ ಪಂಡಿತರ ಸಮ್ಮುಖದಲ್ಲಿ ಸಮಿತಿ ರಚನೆ ಮಾಡಬೇಕು. ಇಂದಿನ ಮಕ್ಕಳಿಗೆ ಯಾವ ಶಿಕ್ಷಣ ಕೊಡಬೇಕೆಂದು ಯೋಚಿಸಬೇಕೇ ಹೊರತು ಅವರ ಪಠ್ಯವನ್ನು ತೆಗೆಯಿರಿ, ಇವರದ್ದು ಸೇರಿಸಿ ಅಂತ ಹೇಳುವುದಲ್ಲ. ರಾಜಕಾರಣಿಗಳಿಗೂ, ಧರ್ಮಕ್ಕೂ ಸಂಬಂಧವೇ ಇಲ್ಲ. ಹೀಗಿದ್ದರೂ ಧರ್ಮದ ವಿಚಾರದಲ್ಲಿ ನಿರ್ಣಯ ಮಾಡುತ್ತಾರೆ. ಧರ್ಮಕ್ಕೆ ಬೇಕಾದ ನಿರ್ಣಯ ಮಾಡಬೇಕಾದರೆ ಒಂದು ಸಮಿತಿ ರಚಿಸಿ ಅಲ್ಲಿ ಚರ್ಚೆಯಾದ ಮೇಲೆ ಅದರಿಂದ ಪೂರಕ ವಿಚಾರಗಳನ್ನು ಪಡೆಯಬೇಕೇ ಹೊರತು ರಾಜಕಾರಣಿಗಳು ಮಾಡುವ ಕೆಲಸವಲ್ಲ ಎಂದು ಬೇಸರಿಸಿದರು.

ಕಳೆದ 15 ವರ್ಷಗಳಿಂದ ಶಿಕ್ಷಣ ಸಂಸ್ಥೆಗಳು ನಾಯಿ ಕೊಡೆಗಳಂತೆ ಹುಟ್ಟುತ್ತಿವೆ. ಆಸ್ಪತ್ರೆಗಳು ಅದೇ ವೇಗದಲ್ಲಿ ಶುರುವಾಗಿವೆ. ಮಾನಸಿಕ ಒತ್ತಡ ತಾಳಲಾರದೆ 25 ವರ್ಷದೊಳಗಿನ ಮಕ್ಕಳು ಹೃದಯಾಘಾತದಿಂದ ಸಾವನ್ನಪ್ಪಲು ಇಂದಿನ ಶಿಕ್ಷಣದಲ್ಲಿನ ದೋಷವೇ ಕಾರಣವಾಗಿದೆ. ಮಕ್ಕಳು ವಾರದಲ್ಲಿ ಕನಿಷ್ಠ ಏಳು ಗಂಟೆಗಳ ಕಾಲ ವ್ಯಾಯಾಮ ಮಾಡಬೇಕು ಎಂದು ಸಲಹೆ ನೀಡಿದರು.

ಶಿಕ್ಷಣ ಅಂದರೆ ಶಾಲೆ, ರ್‍ಯಾಂಕ್, ಉದ್ಯೋಗ, ಸಂಬಳ ಎನ್ನುವಂತಾಗಿದೆ. ಶಾಲೆಯಲ್ಲಿ ಶಿಕ್ಷಕರು ಒತ್ತಡ ಹೇರಿದರೆ, ಮನೆಯಲ್ಲಿ ಪೋಷಕರು ಒತ್ತಡ ಹಾಕುತ್ತಾರೆ. ಶಾಲಾ ಶಿಕ್ಷಣವನ್ನು ಕಡಿಮೆ ಮಾಡಿ, ಪಠ್ಯೇತರ ಶಿಕ್ಷಣವನ್ನು ಜಾಸ್ತಿ ಮಾಡಲು ಗಮನಹರಿಸಬೇಕು. ಶಾಲೆಯ ಹಂತದಲ್ಲಿ ಬದಲಾವಣೆ ಆಗಬೇಕು. ಒಂದು ಕಾಲದಲ್ಲಿ ಶಿಕ್ಷಕರಿಗೆ ಇದ್ದ ಗೌರವ ಈಗ ಇಲ್ಲ. ಹಾಗೆಯೇ ಮಕ್ಕಳಿಗೆ ಶಿಕ್ಷಣ ದಾಹ ಕಡಿಮೆಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಇಂಗ್ಲೀಷ್ ಭಾಷೆಯ ಮೇಲೆ ವ್ಯಾಮೋಹ ಹೆಚ್ಚಾಗುತ್ತಿದ್ದಂತೆ ಭಾರತೀಯ ಪರಂಪರೆಯ ಸಂಸ್ಕೃತಿ ದೂರವಾಗುತ್ತಿದೆ. ಸಂಸ್ಕೃತ ಕಲಿತರೆ ನಮ್ಮ ಗುರುಕುಲದ ಶಿಕ್ಷಣವನ್ನು ಕಲಿತಂತಾಗಲಿದೆ. ಶಾಲೆಯಲ್ಲಿ ಮಕ್ಕಳಿಗೆ ಸಾರ್ವಜನಿಕ ವಲಯದಲ್ಲಿ ವ್ಯಕ್ತಿತ್ವವನ್ನು ಉಳಿಸಿಕೊಳ್ಳುವ ಬಗ್ಗೆ ಹೇಳಬೇಕು ಎಂದರು.

ಸ್ವಾಮಿ ವಿವೇಕಾನಂದರು ರಾಮಕೃಷ್ಣ ಪರಮಹಂಸರ ಆಶೀರ್ವಾದದಿಂದ ಮುಂದೆ ಬಂದರು. ಜಗತ್ತಿಗೆ ನ್ಯಾಯ ಕೊಡುವಂತಹ ಮಹಾನ್ ಸಾಧಕರಾಗಿ ಹೊರ ಹೊಮ್ಮಿದರು. ಮೈಸೂರಿಗೆ ಆಗಮಿಸಿದ್ದಾಗ ಹದಿನೈದು ದಿನಗಳ ಕಾಲ ಉಪನ್ಯಾಸ ನೀಡಿ ಚಿಕಾಗೋ ಸಮ್ಮೇಳನಕ್ಕೆ ಹೋದ ಮೇಲೆ ಆರಂಭವಾದ ಶಿಕ್ಷಣ ಸಂಸ್ಥೆಯು ಸದಾ ಅವರ ಹೆಸರು ಚಾಲ್ತಿಯಲ್ಲಿರುವಂತೆ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳ ಉಪಾಧ್ಯಕ್ಷ ಸಿ.ಆರ್.ನಾಗರಾಜ್, ಗೌರವ ಕಾರ್ಯದರ್ಶಿ ಪ್ರೊ.ಎಂ.ಎಸ್.ಕೆನರುಹೊಬಾಬು, ಸಹ ಕಾರ್ಯದರ್ಶಿ ಪ್ರೊ.ಕೆ.ಎಸ್.ಹಿರಿಯಣ್ಣ, ಆಡಳಿತ ಮಂಡಳಿ ಸದಸ್ಯರಾದ ಎಂ.ಡಿ.ಗೋಪಿನಾಥ್, ಆರ್.ಎಸ್.ಪ್ರಸನ್ನ, ಡಾ.ನಳಿನಿ ಚಂದರ್, ಎಸ್.ಆರ್.ಭಾಗ್ಯಶ್ರೀ, ಡಾ.ಜಿ.ವಿ.ನರಸಿಂಹನ್, ಪ್ರೊ.ಸಿ.ಎಸ್.ಯದುನಂದನ್ ಉಪಸ್ಥಿತರಿದ್ದರು.

ನಾಲ್ಕನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಎಂ.ನಾಗರತ್ನ ಬಿ.ಇ

ಎಕ್ಸಿಕ್ಯೂಟಿವ್ ಇಂಜಿನಿಯರ್ (ಕೆ.ಪಿ.ಸಿ.ಎಲ್)

ಜನನ: 05.05.1968 ಮರಣ: 03.09.2019

ನೀವು ನಮ್ಮನ್ನಗಲಿ 4 ವರ್ಷ ಕಳೆದರೂ ನಿಮ್ಮ ನೆನಪುಗಳು ಮಾತ್ರ ನಮ್ಮ ಮನದಲ್ಲಿ ಸದಾ ಹಸಿರಾಗಿದೆ.

ಇಂತಿ ನಿಮ್ಮವರು: ಪತಿ ಶ್ರೀ ಎಂ.ದಾಸಯ್ಯ, ವಕೀಲರು
ಮಕ್ಕಳಾದ ವರ್ಷಿತ್ ದಾಸ್ ಎಂಬಿಎ (ಕೆಪಿಸಿಎಲ್), ಮೇಘನಾ ದಾಸ್ ಎಂ.ಟೆಕ್ ಹಾಗೂ ಶ್ರೀಮತಿ ಶಂಭಮ್ಮ ಮತ್ತು ಶ್ರೀ ಲೇಟ್ ಮೊಂಡಯ್ಯ, ಶ್ರೀಮತಿ ಲೇಟ್ ಜಯಮ್ಮ ಮತ್ತು ಶ್ರೀ ಲೇಟ್ ಮರಿಲಿಂಗಣ್ಣ ರವರ ಕುಟುಂಬವರ್ಗದವರು ಸಿದ್ದನಹುಂಡಿ, ಟಿ.ನರಸೀಪುರ ತಾಲ್ಲೂಕು.

ಆರ್‌ಟಿಇ ಅಡಿ ಮಕ್ಕಳ ದಾಖಲಾತಿ ಕುಸಿತ

ಕಠಿಣ ನಿಯಮಗಳು, ಖಾಸಗಿ ಶಾಲೆ ಆಡಳಿತ ಮಂಡಳಿಯ ಧೋರಣೆಗೆ ಬೇಸತ್ತು ದೂರವುಳಿಯುತ್ತಿರುವ ಪೋಷಕರು!

ಮೈಸೂರು, ಸೆ.2(ಎಸ್‌ಬಿಡಿ)– ಮೈಸೂರು ಜಿಲ್ಲೆಯಲ್ಲಿ ಖಾಸಗಿ ಶಾಲೆಗಳಿಗೆ ಆರ್‌ಟಿಇ ಅಡಿ ದಾಖಲಾಗಿರುವ ಮಕ್ಕಳ ಸಂಖ್ಯೆ ಪ್ರಸಕ್ತ ವರ್ಷವೂ ಕಡಿಮೆ ಇದೆ.

ಆರ್ಥಿಕವಾಗಿ ದುರ್ಬಲ ಕುಟುಂಬಗಳ ಮಕ್ಕಳಿಗೆ ಖಾಸಗಿ ಶಾಲೆಗಳಲ್ಲೂ ವಿದ್ಯಾಭ್ಯಾಸಕ್ಕೆ ಅವಕಾಶ ಕಲ್ಪಿಸಿಕೊಡುವ ಮಹೋದ್ದೇಶದಿಂದ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು(ಆರ್‌ಟಿಇ) ಜಾರಿಗೆ ತಂದಿತು. ಆದರೆ ಹಲವು ಕಾರಣಗಳಿಂದ ಪೋಷಕರು ಸದುಪಯೋಗಪಡಿಸಿಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ. ಪರಿಣಾಮ ಪ್ರಸಕ್ತ 2023–24ನೇ ಸಾಲಿಗೆ ಮೈಸೂರು ಜಿಲ್ಲೆಗೆ ಮಂಜೂರಾಗಿದ್ದ 815 ಆರ್‌ಟಿಇ ಸೀಟ್‌ಗಳಲ್ಲಿ 388 ಸೀಟ್‌ಗಳು ಮಾತ್ರ ಭರ್ತಿಯಾಗಿವೆ. ಅದರಲ್ಲೂ ಸೀಟ್ ಹಂಚಿಕೆಯಾಗಿದ್ದವರಲ್ಲಿ 157 ಮಕ್ಕಳು ಪ್ರವೇಶಾತಿ ಪಡೆಯದಿರುವುದು ಆರ್‌ಟಿಇ ಮಹತ್ವ ಕಳೆದುಕೊಳ್ಳುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಕಳೆದ ಸಾಲಿನಲ್ಲೂ 382 ಸೀಟುಗಳು ಮಾತ್ರ ಭರ್ತಿಯಾಗಿದ್ದವು.

ನಗರ ಪ್ರದೇಶದಲ್ಲಿರುವ ಆರ್ಥಿಕ ದುರ್ಬಲರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸಬೇಕೆಂಬ ಆಸೆ ಹೊಂದುವುದು ಸಹಜ. ಇಂತಹವರಿಗೆ ನೆರವಾಗುವ ಉದ್ದೇಶದಿಂದ ಆರ್‌ಟಿಇ ಜಾರಿಗೆ ತರಲಾಯಿತು. ಖಾಸಗಿ ಶಾಲೆಗಳಲ್ಲಿ ಒಟ್ಟು ದಾಖಲಾತಿಯಲ್ಲಿ ಶೇ.25ರಷ್ಟು ಸೀಟ್‌ಗಳನ್ನು ಆರ್‌ಟಿಇ ಪ್ರವೇಶಾತಿಗೆ ಮೀಸಲಿಡಲಾಯಿತು. ಆರಂಭದಲ್ಲಿ ಆರ್‌ಟಿಇ ಸೀಟ್‌ಗಳಿಗೆ ಭಾರೀ ಬೇಡಿಕೆ ಇತ್ತಾದರೂ ನಂತರದಲ್ಲಿ ಕಠಿಣ ನಿಯಮಗಳಿಂದ ಪೋಷಕರಲ್ಲಿ ಆಸಕ್ತಿ ಕ್ಷೀಣಿಸಿದೆ. ವಾಸಸ್ಥಳದಿಂದ 1 ಕಿ.ಮೀ. ವ್ಯಾಪ್ತಿಯಲ್ಲಿ ಸರ್ಕಾರಿ ಶಾಲೆ ಇದ್ದರೆ ಆರ್‌ಟಿಇಗೆ ಅರ್ಜಿ ಹಾಕಲು ಅವಕಾಶವಿಲ್ಲ ಎಂಬ ನಿಯಮದಿಂದಾಗಿ ಜಿಲ್ಲೆಯ ಅರ್ಧದಷ್ಟು ಖಾಸಗಿ ಶಾಲೆಗಳಿಗೆ ಈ ಖೋಟಾ ಲಭಿಸಿಲ್ಲ. ದಾಖಲೆ ಒದಗಿಸುವುದೂ ಸುಲಭವಲ್ಲ. ಇನ್ನು ಬಹುತೇಕರಿಗೆ ಆರ್‌ಟಿಇ ಬಗ್ಗೆ ಮಾಹಿತಿ ಕೊರತೆ ಇದೆ.

2009–10ನೇ ಸಾಲಿನಿಂದ ಆರ್‌ಟಿಇ ಜಾರಿಯಲ್ಲಿದ್ದು, ಈ ಖೋಟಾದಡಿ 1ರಿಂದ 8ನೇ ತರಗತಿವರೆಗೆ ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳಿಗೆ ದಾಖಲಾಗುವ ಮಕ್ಕಳ ಶುಲ್ಕವನ್ನು ಸರ್ಕಾರವೇ ಭರಿಸುತ್ತಿದೆ. ಆದರೆ ಈ ಕಾರ್ಯಕ್ರಮದ ಉದ್ದೇಶ ಸಾರ್ಥಕವಾಗುತ್ತಿಲ್ಲ. ಯಾವ ಕಾರಣಕ್ಕೂ ಏನೋ ನಿಯಮಗಳನ್ನು ಜಟಿಲಗೊಳಿಸುವ ಮೂಲಕ ಆರ್‌ಟಿಇ ಪ್ರವೇಶಾತಿಯನ್ನು ನಿಯಂತ್ರಿಸಿದಂತಿದೆ. ವೆಬ್‌ಸೈಟ್ ಮೂಲಕ ಅಥವಾ ಡಿಸಿಪಿಐ ಕಚೇರಿ ಸೂಚನಾ ಫಲಕದಲ್ಲಿ ಆರ್‌ಟಿಇ ಬಗ್ಗೆ ಮಾಹಿತಿ ತಿಳಿಯಬೇಕು. ಇದರಿಂದ ಅದೆಷ್ಟೋ ಜನರಿಗೆ ವಿಷಯವೇ ತಿಳಿಯುವುದಿಲ್ಲ ಎಂದು ಪೋಷಕರು ಬೇಸರ ವ್ಯಕ್ತಪಡಿಸಿದ್ದು, ಆರ್‌ಟಿಇ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಿ, ಮಕ್ಕಳ ಹಿತದೃಷ್ಟಿಯಿಂದ ನಿಯಮಾವಳಿಯನ್ನು ಪರಿಷ್ಕರಿಸಬೇಕು ಎಂದು ಮನವಿ ಮಾಡಿದ್ದಾರೆ.

ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.

ತಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ

ಸನ್ಮಾನ್ಯ ಸಹಕಾರಿ ಬಂಧುಗಳೇ ಮೇಲ್ಕಂಡ ಸಂಘದ 2022–23ನೇ ಸಾಲಿನ

ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು

ದಿನಾಂಕ: 06–09–2023ನೇ ಬುಧವಾರ ಬೆಳಿಗ್ಗೆ 11–00 ಗಂಟೆಗೆ

ಸ್ಥಳ: ಸಂಘದ ಆವರಣ, ತಿ.ನರಸೀಪುರದಲ್ಲಿ ಏರ್ಪಡಿಸಿರುತ್ತದೆ.

ಸಂಘದ ಅಧ್ಯಕ್ಷರಾದ **ಶ್ರೀಯುತ ಮಲ್ಲಣ್ಣರವರ** ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಿರುತ್ತೆ

ಸಂಘದ ಮಾನ್ಯ ಸದಸ್ಯರುಗಳು ಹಾಗೂ ಆಹ್ವಾನಿತರು ಸಕಾಲಕ್ಕೆ ಆಗಮಿಸಿ ಮಹಾಸಭೆಯ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಡೆಸಿಕೊಡಬೇಕಾಗಿ ಈ ಮೂಲಕ ಕೋರಲಾಗಿದೆ.

ಆಹ್ವಾನ ಪತ್ರಿಕೆ ತಲುಪದೇ ಇರುವ ರೈತರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಬೇಕೆಂದು ಮನವಿ

ಕಾರ್ಯಕಾರಿ ಮಂಡಳಿ ಅಪ್ಪಣೆ ಮೇರೆಗೆ
ಸಹಿ/– ಎನ್.ಎಂ. ರಮೇಶ್
ಪ್ರಭಾರ ಮುಖ್ಯಕಾರ್ಯನಿರ್ವಾಹಣಾಧಿಕಾರಿ,
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ತಿ.ನರಸೀಪುರ

ಸ್ಥಳ: ತಿ.ನರಸೀಪುರ
ದಿನಾಂಕ: 20–08–2023

ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು

ಮೈಸೂರು–570010. ದೂ:0821–2520302, 2440752,
ಇಮೇಲ್:zoomysore@gmail.com, ವೆಬ್‌ಸೈಟ್:www.mysuruzoo.info

ಸಂಖ್ಯೆ:ಎಂಜಿಡ್‌ಎ/ಇಎಸ್‌ಟಿ/ಪವೈ/ಗುಅ/497/2023–24 ದಿನಾಂಕ:30.08.2023

ಪ್ರಕಟಣೆ

ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು, ಇಲ್ಲಿ ಅರ್ಹ ಪಶುವೈದ್ಯರನ್ನು (Preferably Masters in Clinical Discipline/subjects) ಸಂಪೂರ್ಣವಾಗಿ ಗುತ್ತಿಗೆ ಆಧಾರದ ಮೇಲೆ ರೂ.40,000/–(Fixed) ಮಾಸಿಕ ಸಂಭಾವನೆಯೊಂದಿಗೆ ಅರ್ಜಿಯನ್ನು ಆಹ್ವಾನಿಸುತ್ತಿದ್ದು, ಆಸಕ್ತ ಅಭ್ಯರ್ಥಿಗಳು **ದಿನಾಂಕ 8.9.2023 ಸಂಜೆ 5:30ರ** ಮೊದಲು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರ ಕಛೇರಿ, ಶ್ರೀ ಚಾಮರಾಜೇಂದ್ರ ಮೃಗಾಲಯ, ಇಂದಿರಾ ನಗರ, ಮೈಸೂರು–570010 ಇಲ್ಲಿಗೆ "ಅಂಚೆಯ" ಮೂಲಕ ಮೊಹರು ಮಾಡಿ ಅಗತ್ಯ ದಾಖಲೆಗಳೊಂದಿಗೆ Resume/CVಯನ್ನು ಸಲ್ಲಿಸತಕ್ಕದ್ದು. ಇದರಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ಪ್ರತ್ಯೇಕವಾಗಿ ಸಂದರ್ಶನಕ್ಕೆ ತಿಳಿಸಲಾಗುತ್ತದೆ.

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು
ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು

DIPR/MYS/KAVITA/285/2023-24

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಚಾಮರಾಜನಗರ ವಿಭಾಗ, ಚಾಮರಾಜನಗರ

ಸಂಖ್ಯೆ: ಕರಾಸಾ/ಚಾನವಿ/ಸಂ/ವಾ/1184/2023–24 ದಿನಾಂಕ: 01–09–2023

ಇ–ಟೆಂಡರ್/ಸಂಧಾನ ಪ್ರಕಟಣೆ ಸಂಖ್ಯೆ: 02/2023–24

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಚಾಮರಾಜನಗರ ವಿಭಾಗದ ವ್ಯಾಪ್ತಿಯ **ಚಾಮರಾಜನಗರ, ಗುಂಡ್ಲುಪೇಟೆ, ಟಿ.ನರಸೀಪುರ, ನಂಜನಗೂಡು ಹೊಸ ಬಸ್ ನಿಲ್ದಾಣ, ನಂಜನಗೂಡು ಹಳೆ ಬಸ್ ನಿಲ್ದಾಣ, ಹುಲ್ಲಹಳ್ಳಿ, ಸುತ್ತೂರು, ಬೇಗೂರು, ತೆರಕಣಾಂಬಿ, ಹನೂರು ಮತ್ತು ಕೊಳ್ಳೇಗಾಲ ನಗರಸಭೆಯ ಕೊಳ್ಳೇಗಾಲ ಕ.ರಾ.ರ.ಸಾ. ನಿಗಮ ಬಸ್ ನಿಲ್ದಾಣದ** ಮೊದಲನೇ ಮಹಡಿ ಮತ್ತು ಎರಡನೇ ಮಹಡಿಗೆ ಏಕೈಕ ಪರವಾನಗಿದಾರರನ್ನು ಹಾಗೂ ಖಾಲಿಯಿರುವ ಮತ್ತು ಖಾಲಿಯಾಗಲಿರುವ ವಾಣಿಜ್ಯ ಸ್ಥಳಗಳಾದ ಶಾಶ್ವತ ಮಳಿಗೆ ಮತ್ತು ತೆರೆದ ಸ್ಥಳಗಳಿಗೆ ಮಳಿಗೆ ನಡೆಸಲು ಆಸಕ್ತ ಅರ್ಜಿದಾರರನ್ನು ಪರವಾನಗಿದಾರರನ್ನಾಗಿ ಆಯ್ಕೆ ಮಾಡುವ ಸಲುವಾಗಿ ಮತ್ತು ವಿಭಾಗದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ಜಾಹೀರಾತು ಹೋರ್ಡಿಂಗ್ಸ್‌ಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ಇ-ಟೆಂಡರ್ / ಮ್ಯಾನ್ಯುವಲ್ ಟೆಂಡರ್ ಹಾಗೂ ಸಂಧಾನ ಪ್ರಕಟಣೆ ಸಂ.02/2023–24 ದಿನಾಂಕ: 01–09–2023 ಅನ್ನು ಹೊರಡಿಸಲಾಗಿದೆ.

ಶಾಶ್ವತ ಮಳಿಗೆಗಳನ್ನು ಐದು (05) ವರ್ಷಗಳ ಅವಧಿಗೆ ಮತ್ತು ತೆರೆದ ಸ್ಥಳಗಳನ್ನು ಮೂರು (3) ವರ್ಷಗಳ ಅವಧಿಗೆ ಎಲ್ಲಿದೆಯೋ ಹಾಗೂ ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ ಇರುವ ಆಧಾರದ ಮೇಲೆ ಪರವಾನಗಿಯನ್ನು ಇ–ಟೆಂಡರ್ / ಮ್ಯಾನ್ಯುವಲ್ ಟೆಂಡರ್ ಮತ್ತು ಸಂಧಾನ ಮುಖಾಂತರ ನೀಡಲಾಗುವುದು. ಇ–ಟೆಂಡರ್/ ಮ್ಯಾನ್ಯುವಲ್ ಟೆಂಡರ್ ಮತ್ತು ಸಂಧಾನದಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಜಿದಾರರು ಷರತ್ತು ಹಾಗೂ ನಿಬಂಧನೆಗಳನ್ನು ಖಚಿತಪಡಿಸಿಕೊಂಡು ಭಾಗವಹಿಸಲು ತಿಳಿಸಿದೆ.

1) ಮ್ಯಾನ್ಯುವಲ್ ಟೆಂಡರ್ ಮತ್ತು ಸಂಧಾನ ಅರ್ಜಿ ಪಡೆಯಲು ಕೊನೆಯ ದಿನಾಂಕ: **26–09–2023ರಂದು ಸಮಯ: 12.00 ಗಂಟೆವರೆಗೆ.** 2) ಮ್ಯಾನ್ಯುವಲ್ ಟೆಂಡರ್‌ಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **27–09–2023 ರಂದು ಸಮಯ: 10.30 ರಿಂದ 12.00 ಗಂಟೆವರೆಗೆ.** 3) ಸಂಧಾನ ಅರ್ಜಿ ಮತ್ತು ಇ.ಎಂ.ಡಿ, ಡಿ.ಡಿ. ಸ್ವೀಕರಿಸಲು ಕೊನೆಯ ದಿನಾಂಕ: **26–09–2023 ರಂದು ಸಮಯ: 16.00 ಗಂಟೆವರೆಗೆ.** 4) ಮ್ಯಾನ್ಯುವಲ್ ಟೆಂಡರ್ ಮತ್ತು ಸಂಧಾನ ಸಭೆಯ ದಿನಾಂಕ: **27–09–2023 ರಂದು ಸಮಯ: ಮಧ್ಯಾಹ್ನ 12.30 ಗಂಟೆಯಿಂದ.**

1) ಇ–ಟೆಂಡರ್‌ಗಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **25–09–2023 ರಂದು ಸಮಯ: 16.00 ಗಂಟೆವರೆಗೆ.** 2) ಇ–ಟೆಂಡರ್‌ಗಾಗಿ ಕಛೇರಿಯಲ್ಲಿ ಸಲ್ಲಿಸಬೇಕಾದ ಇ.ಎಂ.ಡಿ, ಡಿ.ಡಿ ಮತ್ತು ಇತರೆ ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **26–09–2023 ರಂದು ಸಮಯ: 16.00 ಗಂಟೆವರೆಗೆ.** 3) ಇ–ಟೆಂಡರ್ ತೆರೆಯುವ ದಿನಾಂಕ: **27–09–2023 ರಂದು ಸಮಯ: ಬೆಳಗ್ಗೆ 11.00 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ **ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ಚಾಮರಾಜನಗರ ವಿಭಾಗ (ಸಂಚಾರ ಶಾಖೆ)** ರವರನ್ನು ಸಂಪರ್ಕಿಸಲು ಕೋರಲಾಗಿದೆ. (ದೂರವಾಣಿ ಸಂಖ್ಯೆ: **7760990302, 7760990311**).

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ. ನಿಗಮ, ಚಾಮರಾಜನಗರ ವಿಭಾಗ.